

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜೂನ್ 18 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 63 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಶಿಕ್ಷಕರ ವರ್ಗಾವಣೆಗೆ ಪರಿಷ್ಕೃತ ವೇಳಾಪಟ್ಟಿ

ಕೋರಿಕೆ, ಪರಸ್ಪರ ವರ್ಗಾವಣೆಗಷ್ಟೇ ಅವಕಾಶ



ಬೆಂಗಳೂರು, ಜೂ.17– ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು, ಮುಖ್ಯ ಶಿಕ್ಷಕರು, ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಯ ಪರಿಷ್ಕೃತ ವೇಳಾಪಟ್ಟಿಯನ್ನು ಶಾಲಾ ಶಿಕ್ಷಣ ಇಲಾಖೆ ಪ್ರಕಟಿಸಿದೆ. ಕಡ್ಡಾಯ ಮತ್ತು ಹೆಚ್ಚುವರಿ ಶಿಕ್ಷಕರ ವರ್ಗಾವಣೆಯನ್ನು ಈ ಬಾರಿ ಕೈಬಿಟ್ಟಿರುವ ಸರ್ಕಾರ, ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಷ್ಟೆ ಅವಕಾಶ ಕಲ್ಪಿಸಿದೆ.

ಶೈಕ್ಷಣಿಕ ವರ್ಷ ಆರಂಭವಾಗಿರುವ ಹಿನ್ನೆಲೆಯಲ್ಲಿ ವಲಯವಾರು ವರ್ಗಾವಣೆ ಈ ವರ್ಷ ಕೈಬಿಡುವಂತೆ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮನವಿ ಮಾಡಿತ್ತು. ಹೀಗಾಗಿ, ಈ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ವಲಯ ವರ್ಗಾವಣೆ ಕೈಬಿಟ್ಟು, ಇತರ ವರ್ಗಾವಣೆಗಳನ್ನು ಮುಂದುವರಿಸಲು ಅನುಮತಿ ನೀಡಲಾಗಿದೆ. ವರ್ಗಾವಣೆಗೆ ಅರ್ಜಿ ಇತ್ಯಾದಿ ಪ್ರಕ್ರಿಯೆಯನ್ನು ಮಾರ್ಚ್ 18ರಿಂದ ಇಲಾಖೆ ಆರಂಭಿಸಿತ್ತು. ಈ ಮಧ್ಯೆ, ಲೋಕಸಭೆ ಚುನಾವಣೆಯ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಕಾರಣ ವರ್ಗಾವಣೆ ಪ್ರಕ್ರಿಯೆ ಸ್ಥಗಿತವಾಗಿತ್ತು.

ವರ್ಗಾವಣೆ ವೇಳಾಪಟ್ಟಿ: ನಿರ್ದಿಷ್ಟಪಡಿಸಿರುವ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ತಾತ್ಕಾಲಿಕ ಕರಡು ಪಟ್ಟಿಯನ್ನು ಇದೇ 18ರಂದು ಪ್ರಕಟಿಸಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಶಿಕ್ಷಕರು 21ರವರೆಗೆ ಆಕ್ಷೇಪಣೆ ಸಲ್ಲಿಸಬಹುದು. 24ರಂದು ಅಂತಿಮ ಆದ್ಯತಾ ಕರಡು ಪಟ್ಟಿ ಪ್ರಕಟವಾಗಲಿದೆ. ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಜೂನ್ 20 ಕೊನೆಯ ದಿನ. ಅರ್ಜಿಗಳ ಪರಿಶೀಲನೆಗೆ ಕೊನೆಯ ದಿನ ಜೂನ್ 27. ಅರ್ಜಿ ಸಲ್ಲಿಸಿರುವ ಶಿಕ್ಷಕರ ಪೈಕಿ, ಜಿಲ್ಲೆಯ ಒಳಗೆ, ಹೊರಗೆ ವರ್ಗಾವಣೆಗೆ ಅರ್ಹ/ಅನರ್ಹರ ಪಟ್ಟಿ ಜೂನ್ 29ರಂದು ಪ್ರಕಟವಾಗಲಿದೆ. ಜೂನ್ 29ರಿಂದ ಜುಲೈ 5ರವರೆಗೆ ಕರಡು ಪಟ್ಟಿಗೆ ಆಕ್ಷೇಪಣೆ ಸಲ್ಲಿಸಬಹುದು. ಜುಲೈ 8ರಂದು ತಾತ್ಕಾಲಿಕ ಆದ್ಯತಾ ಪಟ್ಟಿ, 10ರಂದು ಖಾಲಿ ಹುದ್ದೆಗಳ ಪಟ್ಟಿ, 18ರಂದು ಅಂತಿಮ ಆದ್ಯತಾ ಪಟ್ಟಿ ಪ್ರಕಟವಾಗಲಿದೆ.

ಜಿಲ್ಲಾ ಹಂತದ ವರ್ಗಾವಣೆಗೆ ಜುಲೈ 19 (ಪ್ರಾಥಮಿಕ ಶಾಲಾ ಶಿಕ್ಷಕರು) ಮತ್ತು 20ರಂದು (ಪ್ರೌಢಶಾಲಾ ಶಿಕ್ಷಕರು) ಕೌನ್ಸೆಲಿಂಗ್ ನಡೆಯಲಿದೆ. ಜುಲೈ 24ರಿಂದ 29ರವರೆಗೆ ಜ್ಯೇಷ್ಠತಾ ಪಟ್ಟಿಯಲ್ಲಿರುವಂತೆ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ನಡೆಯಲಿದೆ. ವಿಭಾಗೀಯ ಹಂತದ ವರ್ಗಾವಣೆಯು ಆಗಸ್ಟ್ 1ರಿಂದ 14ರವರೆಗೆ, ಅಂತರ್ ವಿಭಾಗೀಯ ವರ್ಗಾವಣೆ ಆಗಸ್ಟ್ 14ರಿಂದ 27ರವರೆಗೆ ನಡೆಯಲಿದೆ. ತಾಂತ್ರಿಕ ಕಾರಣಗಳಿಗೆ ಅಡಚಣೆಯಾದರೆ ಈ ವೇಳಾಪಟ್ಟಿಯಲ್ಲಿ ಬದಲಾವಣೆ ಆಗಲಿದೆ ಎಂದು ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

ಮೈಸೂರಲ್ಲಿ ಮತ್ತೆ ಕೇಬಲ್ ಹಾವಳಿ

ವಿದ್ಯುತ್ ಕಂಬಗಳ ಮೇಲೆ ಅನಧಿಕೃತವಾಗಿ ಅಳವಡಿಸಿರುವ ಟಿವಿ, ಟೆಲಿಫೋನ್, ಇಂಟರ್ನೆಟ್ ಕೇಬಲ್ ವಿರುದ್ಧ ಸೆಸ್ಕ್ ಕ್ರಮದ ಎಚ್ಚರಿಕೆ



ಇದೊಂದು ರೀತಿ ಚೆಸ್ಕಾಂ ವೈಫಲ್ಯ: ತಮ್ಮದೇ ಕಂಬಗಳ ಮೇಲೆ ವಿವಿಧ ಉದ್ದೇಶಕ್ಕೆ ಕೇಬಲ್ ಎಳೆಯುವುದು, ಅವುಗಳ ಅಳವಡಿಸುವ ವೇಳೆ ಅವಘಡ ಸಂಭವಿಸಿ ಸಾವು–ನೋವು ಉಂಟಾಗುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಚೆಸ್ಕಾಂ ಅಧಿಕಾರಿ ವರ್ಗ ಬರೀ ನೋಟಿಸ್ ಕೊಡುವುದು, ಮಾಧ್ಯಮಗಳ ಮೂಲಕ ಹೇಳಿಕೆ ನೀಡಿ ಎಚ್ಚರಿಸುವುದು ಬಿಟ್ಟರೆ ಪರಿಣಾಮಕಾರಿ ಕ್ರಮ ಕೈಗೊಂಡಿದ್ದನ್ನು ಯಾರೂ ಕಂಡಿಲ್ಲ; ಕೇಳಿಲ್ಲ. ಚೆಸ್ಕಾಂ ಕಾರ್ಯವೈಖರಿ; 'ನಾನು ಹೊಡೆದಂತೆ; ನೀನು ಅತ್ತಂತೆ...' ಗಾದೆ ಮಾತಂತಿದೆ.

ಮೈಸೂರು, ಜೂ.17 (ಆರ್‌ಕೆ)–ವಿದ್ಯುತ್ ಕಂಬಗಳ ಮೇಲೆ ಅನಧಿಕೃತವಾಗಿ ಕೇಬಲ್ ವೈರ್ ಎಳೆದು ಅವಾಂತರ ಸೃಷ್ಟಿಸಿರುವ ಸಂಸ್ಥೆಗಳ ವಿರುದ್ಧ ಕ್ರಮಕ್ಕೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಮುಂದಾಗಿದೆ.

ಟಿವಿ, ಇಂಟರ್ನೆಟ್ ಕೇಬಲ್ ವೈರ್‌ಗಳು ಮೈಸೂರು ನಗರದಾದ್ಯಂತ ಅವೈಜ್ಞಾನಿಕವಾಗಿ ಹಾದು ಹೋಗಿದ್ದು, ಬಹುತೇಕ ಕಡೆ ಸುರುಳಿ ಸುತ್ತಿ ಹಾಗೆಯೇ ಕಂಬದಲ್ಲಿ ಜೋತು ಬಿದ್ದಿರುವುದು ಸಾಮಾನ್ಯವಾಗಿದೆ. ಅಲ್ಲಲ್ಲಿ ಜೋತು ಬಿದ್ದಿರುವ ಕೇಬಲ್‌ಗಳು ಅಪಾಯಕ್ಕಾಗಿ ಕಾಯುತ್ತಿದ್ದರೆ, ಹಲವೆಡೆ ವಿದ್ಯುತ್ ತಂತಿ ಮಧ್ಯೆಯೇ ಹಾದು ಹೋಗಿವೆ. ವಿದ್ಯುತ್ ಕಂಬಗಳನ್ನು ಬಳಸಿ ಅವುಗಳ ಮೇಲೆ ಕೇಬಲ್ ಹಾಗೂ ನೆಟ್‌ವರ್ಕ್ ವೈರ್‌ಗಳನ್ನು ಅನಧಿಕೃತವಾಗಿ ಅವೈಜ್ಞಾನಿಕ ರೀತಿಯಲ್ಲಿ ಎಳೆಯಲಾಗಿದೆ. ಡಿಶ್ ಕೇಬಲ್ ಮತ್ತಿತರ ವೈರ್‌ಗಳನ್ನು ನಿಯಮಾನುಸಾರ ಸರಿಯಾಗಿ ಎಳೆಯದಿರುವುದರಿಂದ ವಿದ್ಯುತ್ ಅವಘಡಗಳು ಘಟಿಸುವ ಸಂಭವವಿದೆ.

ಈ ಬಗ್ಗೆ ಅಂತಿಮ ನೋಟಿಸ್ ಪ್ರಕಟಿಸಿರುವ ಸೆಸ್ಕ್ ವಿವಿ ಮೊಹಲ್ಲಾ ಉಪವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್ ಅನಿತಾ ಅವರು, ವಿದ್ಯುತ್ ಅವಘಡಗಳಿಂದಾಗಿ ಸಾರ್ವಜನಿಕರ ಆಸ್ತಿ–ಪಾಸ್ತಿಗಳಿಗೆ ಹಾನಿಯುಂಟಾದರೆ ಕೇಬಲ್ ನೆಟ್‌ವರ್ಕ್ ಏಜೆನ್ಸಿ, ಡಿಶ್ ಕೇಬಲ್ ನೆಟ್‌ವರ್ಕ್ ಸಂಸ್ಥೆಗಳು ನೇರ ಹೊಣೆಗಾರರಾಗುತ್ತವೆ ಎಂದು ಅನಿತಾ ತಿಳಿಸಿದ್ದಾರೆ.

ಈ ಬಗ್ಗೆ ಹಲವು ಬಾರಿ ಸೂಚನೆ ನೀಡಿದ್ದರೂ ಸುರಕ್ಷತಾ ಕ್ರಮವಹಿಸಿಲ್ಲ. ವಿದ್ಯುತ್ ಕಂಬಗಳ ಮೇಲೆ ಎಳೆದಿರುವ ಕೇಬಲ್‌ಗಳನ್ನು ಪರಿಶೀಲಿಸಿ ತಪಶೀಲು ಪಟ್ಟಿ (ಪೋಲ್ ಇನ್ವೆಂಟರಿ) ಹಾಗೂ ಪ್ರತೀ ಕಂಬಗಳ ಮೇಲೆ ಎಳೆದಿರುವ ಕೇಬಲ್ ಸಂಖ್ಯೆ ನಮೂದಿಸಿ ಸೆಸ್ಕ್‌ನಿಂದ ಮಂಜೂರಾತಿ ಪಡೆಯಬೇಕು ಎಂದು ಅವರು ತಿಳಿಸಿದ್ದಾರೆ. ವಿದ್ಯುತ್ ಕಂಬಗಳ ಮೇಲೆ ಅಡ್ಡಾದಿಡ್ಡಿಯಾಗಿ ಎಳೆದಿರುವ ಕೇಬಲ್‌ಗಳನ್ನು ತೆಗೆದು ವೈಜ್ಞಾನಿಕವಾಗಿ, ಅಪಾಯಕ್ಕೆ ಆಸ್ಪದ ನೀಡದಂತೆ ಸಂಪರ್ಕ ಕಲ್ಪಿಸಬೇಕು. ನಿಯಮಾನುಸಾರ ಸೆಸ್ಕ್ ಉಪವಿಭಾಗಗಳಿಗೆ ನಿಗದಿತ ವಾರ್ಷಿಕ ಬಾಡಿಗೆ ಹಣ ಪಾವತಿಸಿ ಮಂಜೂರಾತಿ ಪಡೆಯಬೇಕು ಎಂದು ಅವರು ತಿಳಿಸಿದ್ದಾರೆ.

7 ದಿನದೊಳಗಾಗಿ ಕ್ರಮ ವಹಿಸದಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಅನಧಿಕೃತ ಕೇಬಲ್ ನೆಟ್‌ವರ್ಕ್‌ಗಳನ್ನು ಸೆಸ್ಕ್ ವತಿಯಿಂದಲೇ ತೆರವುಗೊಳಿಸಲಾಗುವುದು. ಅದರಿಂದ ಉಂಟಾಗುವ ಯಾವುದೇ ತೊಂದರೆಗೂ ಸೆಸ್ಕ್ ಜವಾಬ್ದಾರಿಯಾಗುವುದಿಲ್ಲ ಎಂದೂ ಎಚ್ಚರಿಕೆ ನೀಡಿದ್ದಾರೆ. ಮೈಸೂರು ನಗರದಲ್ಲಿ ಪ್ರತೀ ಕಂಬಕ್ಕೆ ವಾರ್ಷಿಕ 200ರೂ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 150ರೂ ಬಾಡಿಗೆ ಹಣ ಪಾವತಿಸಬೇಕಾಗಿದೆ. ಆದರೆ, ಕೆಲವು ನೆಟ್‌ವರ್ಕ್‌ಗಳು ಹಣ ಪಾವತಿಸದೇ ವಿದ್ಯುತ್ ಕಂಬಗಳ ಮೂಲಕ ಕೇಬಲ್ ವೈರ್ ಎಳೆದಿರುವುದು ಕಂಡು ಬಂದಿದ್ದು, ಅಗತ್ಯ ಕ್ರಮ ವಹಿಸುವಂತೆ ಎಕ್ಸಿಕ್ಯೂಟಿವ್ ● 9ನೇ ಪುಟಕ್ಕೆ

ಅಗ್ನಿಶಾಮಕ, ತುರ್ತು ಸೇವೆಗಳಿಗೆ ಮಹಿಳೆಯರಿಗೆ ಶೇ.10ರಷ್ಟು ಮೀಸಲಾತಿಗೆ ಶಿಫಾರಸು


ಬೆಂಗಳೂರು: 82 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ, ಸಾಂಪ್ರದಾಯಿಕವಾಗಿ ಪುರುಷರೇ ಪ್ರಾಬಲ್ಯ ಹೊಂದಿರುವ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ಅಗ್ನಿಶಾಮಕ ದಳಕ್ಕೆ ಮಹಿಳಾ ಸಿಬ್ಬಂದಿಯನ್ನು ನೇಮಿಸಲು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಅದರಂತೆ ಅಗ್ನಿಶಾಮಕ ಸಿಬ್ಬಂದಿ ನೇಮಕಾತಿಯಲ್ಲಿ ಮಹಿಳೆಯರಿಗೆ ಕನಿಷ್ಠ ಶೇ 10ರಷ್ಟು ಮೀಸಲಾತಿ ನೀಡುವಂತೆ ಇಲಾಖೆ ಶಿಫಾರಸು ಮಾಡಿದೆ.

ಸದ್ಯ, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಮಹಿಳಾ ಸಿಬ್ಬಂದಿ ಪಾತ್ರವು ಡೆಸ್ಕ್ ಕೆಲಸಕ್ಕೆ ಸೀಮಿತವಾಗಿದ್ದು, ಅಗ್ನಿಶಾಮಕ ಸೇವೆಯಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸುವಲ್ಲಿ ಮಹಿಳಾ ಅಗ್ನಿಶಾಮಕ ಸಿಬ್ಬಂದಿಯನ್ನು ಕಾರ್ಯಪಡೆಯಲ್ಲಿ ಸೇರಿಸುವುದು ಮಹತ್ವದ ● 9ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳ ಸಂಖ್ಯೆ ಗಣನೀಯ ಇಳಿಕೆ

ಅಂಕಿ ಅಂಶಗಳ ಸಮೇತ ಎಡಿಜಿಪಿ ಅಲೋಕ್‌ಕುಮಾರ್ ಮಾಹಿತಿ

● ಇದು ಎಐ ಕ್ಯಾಮರಾ ಕಮಾಲ್ ● ದಂಡಾಸ್ತ್ರದಿಂದ ಸ್ವಯಂ ವೇಗಕ್ಕೆ ಮಿತಿ ● ಶೀಘ್ರವೇ ಎಕ್ಸ್‌ಪ್ರೆಸ್ ವೇ ಮರಣ ಮುಕ್ತ ವಲಯ





ಅಲೋಕ್ ಕುಮಾರ್

ಮೈಸೂರು, ಜೂ.17(ಬಿಎಲ್‌ಯು)– ನೂರಾರು ಜನರು ಬಲಿಯಾಗಿದ್ದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಈಗ ಅಪಘಾತಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ. ರಾಜ್ಯ ಸಂಚಾರ ಮತ್ತು ರಸ್ತೆ ಸುರಕ್ಷತಾ ಎಡಿಜಿಪಿ ಅಲೋಕ್ ಕುಮಾರ್ ಅವರು ಈ ಸಂಬಂಧ ಅಂಕಿ ಅಂಶಗಳ ಸಮೇತ ಮಾಹಿತಿ ನೀಡಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಸರಣಿ ಅಪಘಾತವಾಗುತ್ತಿತ್ತು. ನಿಧಾನವಾಗಿ ಚಾಲನೆ ಮಾಡಿದರೂ ಅಕ್ಕಪಕ್ಕ ಹಾಗೂ ಎದುರಿನಿಂದ ವೇಗವಾಗಿ ಬಂದವರಿಂದ ಅಪಘಾತಗಳು ಸಂಭವಿಸುತ್ತಿತ್ತು. ನೂರಾರು ಜನರ ಪ್ರಾಣಕ್ಕೆ ಕಂಟಕವಾಗಿದ್ದ ಕಾರಣ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಸಂಚರಿಸಲು ಹೆದರುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಅತಿ ವೇಗದ ಕಾರಣ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಅಪಘಾತಗಳು ಸಂಭವಿಸುತ್ತಿತ್ತು. ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆಗೊಂಡ ಕೆಲವೇ ದಿನಗಳಲ್ಲಿ ಅಪಘಾತಗಳ ಸಂಖ್ಯೆ ಆಘಾತಕ್ಕೆ ಕಾರಣವಾಗಿತ್ತು. ಆದರೆ ಈಗ ಅಪಘಾತಗಳ ಪ್ರಮಾಣ ಭಾರಿ ಸಂಖ್ಯೆಯಲ್ಲಿ ಇಳಿಮುಖವಾಗಿದೆ. ಈ ಕುರಿತಂತೆ ಕಳೆದ ವರ್ಷ ಸಂಭವಿಸಿದ ಅಪಘಾತಗಳು, ಮೃತಪಟ್ಟವರ ಸಂಖ್ಯೆ ಹಾಗೂ ಈ ವರ್ಷ ಸಂಭವಿಸಿರುವ ಅಪಘಾತಗಳು ಹಾಗೂ ಮೃತಪಟ್ಟವರ ಸಂಖ್ಯೆಯ ವಿವರವನ್ನು ಅಂಕಿ ಅಂಶ ಸಮೇತ ಅಲೋಕ್‌ಕುಮಾರ್ ನೀಡಿದ್ದಾರೆ. ಈ ವಿವರಗಳನ್ನು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿ ಸಾರ್ವಜನಿಕರಿಗೆ ಮಾಹಿತಿ ನೀಡಿದ್ದಾರೆ. ● 9ನೇ ಪುಟಕ್ಕೆ

ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣ

ದರ್ಶನ್ ದೋಸ್ತ್ ಚಿಕ್ಕಣ್ಣ ವಿಚಾರಣೆ



ಬೆಂಗಳೂರು, ಜೂ. 17– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಸ್ನೇಹಿತರೂ ಆದ ಹಾಸ್ಯನಟ ಚಿಕ್ಕಣ್ಣ ಅವರನ್ನು ಸೋಮವಾರ ಪೊಲೀಸರು ವಿಚಾರಣೆಗೊಳಪಡಿಸಿದ್ದಾರೆ.

ರೇಣುಕಾಸ್ವಾಮಿ ಅವರನ್ನು ಹತ್ಯೆ ಮಾಡಿದ ಜೂನ್ 8ರಂದು ದರ್ಶನ್ ಮತ್ತು ಈ ಪ್ರಕರಣದ ಆರೋಪಿಗಳೊಂದಿಗೆ ಹಾಸ್ಯನಟ ಚಿಕ್ಕಣ್ಣ ಅವರು ರಾಜರಾಜೇಶ್ವರಿನಗರದ ಸ್ಟೋನಿ ಬ್ರೂಕ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ನಡೆದ ಪಾರ್ಟಿಯಲ್ಲಿ ಭಾಗವಹಿಸಿದ್ದರು ಎಂಬುದು ರೆಸ್ಟೋರೆಂಟ್‌ನ ಸಿಸಿ ಕ್ಯಾಮರಾ ಫುಟೇಜ್‌ಗಳಿಂದ ತಿಳಿದುಬಂದ ಹಿನ್ನೆಲೆಯಲ್ಲಿ ಪೊಲೀಸರು ಚಿಕ್ಕಣ್ಣ ಅವರಿಗೆ ವಿಚಾರಣೆಗೆ ಆಗಮಿಸುವಂತೆ ಇಂದು ಬೆಳಗ್ಗೆ ನೋಟಿಸ್ ನೀಡಿದ್ದರು. ತಮಗೆ ನೋಟಿಸ್ ದೊರೆತ ಕೂಡಲೆ ಚಿಕ್ಕಣ್ಣ ಅನ್ನಪೂರ್ಣೇಶ್ವರಿನಗರ ಠಾಣೆಯ ಪೊಲೀಸರ ಮುಂದೆ ಹಾಜರಾದರು. ಈ ವೇಳೆ ಪೊಲೀಸರು ಪ್ರಾಥಮಿಕ ವಿಚಾರಣೆ ನಂತರ ಆರೋಪಿಗಳಾದ ಪ್ರದೋಶ್, ವಿನಯ್ ಮತ್ತು ಪವನ್ ಅವರೊಂದಿಗೆ ● 9ನೇ ಪುಟಕ್ಕೆ

ಎಲ್ಲಾ 19 ಆರೋಪಿಗಳ ಬಂಧನ; ಕರೆಂಟ್ ಶಾಕ್ ಕೊಟ್ಟು ದರ್ಶನ್ ಗ್ಯಾಂಗ್ ಟಾರ್ಚರ್!

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊರ್ವ ಆರೋಪಿಯನ್ನು ಪೊಲೀಸರು ಬಂಧಿಸಿದ್ದು, ಇದರೊಂದಿಗೆ ನಟ ದರ್ಶನ್ ಗ್ಯಾಂಗ್‌ನ ಎಲ್ಲಾ 19 ಆರೋಪಿಗಳನ್ನು ಬಂಧಿಸಿದಂತಾಗಿದೆ.

ರೇಣುಕಾಸ್ವಾಮಿ ಹತ್ಯೆ ಬಳಿಕ ನಾಪತ್ತೆಯಾಗಿದ್ದ ಪ್ರಕರಣದ ಒಂಬತ್ತನೇ ಆರೋಪಿ ರಾಜು ಅಲಿಯಾಸ್ ಧನರಾಜ್‌ನನ್ನು ಬಂಧಿಸಲಾಗಿದೆ ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್ ಸೋಮವಾರ ತಿಳಿಸಿದ್ದಾರೆ. ಧನರಾಜ್ ಬಂಧನದ ಬಳಿಕ ರೇಣುಕಾಸ್ವಾಮಿ ಮೇಲೆ ದೈಹಿಕ ಹಲ್ಲೆ ಮಾತ್ರವಲ್ಲದೆ, ಆತನಿಗೆ ವಿದ್ಯುತ್ ಶಾಕ್ ಕೂಡ ನೀಡಿದ್ದರು ಎಂಬ ಆಘಾತಕಾರಿ ಸಂಗತಿ ಬಯಲಾಗಿದೆ.

33 ವರ್ಷದ ಅಭಿಮಾನಿಯ ಕೊಲೆ ಪ್ರಕರಣ ಬೆಳಕಿಗೆ ಬಂದ ಒಂದು ದಿನದ ನಂತರ ದರ್ಶನ್ ಸೇರಿದಂತೆ 13 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ಈಗ ನಾಪತ್ತೆಯಾಗಿದ್ದ ಧನರಾಜ್‌ನನ್ನು ಪೊಲೀಸರು ಬಂಧಿಸಿದ್ದು, ದರ್ಶನ್‌ಗೂ ತನಗೂ ನೇರ ಸಂಪರ್ಕವಿಲ್ಲ ಎಂದು ಧನರಾಜ್ ಪೊಲೀಸರಿಗೆ ● 9ನೇ ಪುಟಕ್ಕೆ

ಮೈಸೂರಲ್ಲಿ ಶ್ರದ್ಧಾಭಕ್ತಿಯ ಬಕ್ರೀದ್ ಆಚರಣೆ


ಎಲ್ಲೆಡೆ ಭಕ್ತಿ–ಭಾವದ ಸಾಮೂಹಿಕ ಪ್ರಾರ್ಥನೆ; ಶುಭಾಶಯ ವಿನಿಮಯ

ಮೈಸೂರು, ಜೂ. 17(ಆರ್‌ಕೆ)– ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಬಕ್ರೀದ್ ಹಬ್ಬವನ್ನು ಮುಸ್ಲಿಂ ಬಾಂಧವರು ಇಂದು ಶ್ರದ್ಧಾ–ಭಕ್ತಿ, ಸಂಭ್ರಮದಿಂದ ಆಚರಿಸಿದರು.

ಇಂದು ಬೆಳಗ್ಗೆ 6 ಗಂಟೆಯಿಂದಲೇ ಮೈಸೂರು ನಗರದಾದ್ಯಂತ ಮಸೀದಿಗಳಲ್ಲಿ ಬಕ್ರೀದ್ ಪ್ರಾರ್ಥನೆ ಸಲ್ಲಿಸಿದ ಮುಸಲ್ಮಾನ್ ಬಂಧುಗಳು, ಬೆಳಗ್ಗೆ 9 ಗಂಟೆಗೆ ತಿಲಕ್‌ನಗರದ ಹಳೇ ಈದ್ಗಾ ಮೈದಾನದಲ್ಲಿ ಆಯೋಜಿಸಿದ್ದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಬಕ್ರೀದ್ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಮೈಸೂರಿನ ಸರ್ ಖಾಜಿ ಹಜರತ್ ಮೌಲಾನ ಮೊಹಮದ್ ಉಸ್ಮಾನ್ ಷರೀಫ್ ಸಾಮೂಹಿಕ ಪ್ರಾರ್ಥನೆಯ ಅಧ್ಯಕ್ಷತೆ ವಹಿಸಿ, ನಾಡಿನ ಜನತೆಗೆ ಬಕ್ರೀದ್ ಸಂದೇಶ ನೀಡಿದರು. ಧರ್ಮಗುರು ಇಬ್ರಾಹಿಂ ಖಲೀಲ್ ಉಲ್ಲಾ ಮತ್ತು ಪುತ್ರ ಧರ್ಮಗುರು ಇಸ್ಮಾಯಿಲ್ ಜಬೀ ಉಲ್ಲಾ ಅವರ ತ್ಯಾಗ, ಬಲಿದಾನದ ಸ್ಮರಣೆಗಾಗಿ ಇಂದು ಬಕ್ರೀದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ ಎಂದು ಅವರು ನುಡಿದರು.

ಕೋಮು ಸೌಹಾರ್ದತೆ, ಸೋದರ ಮನೋಭಾವನೆ ಬೆಳೆಸಿಕೊಂಡು ಸಮಾಜದಲ್ಲಿ ಶಾಂತಿ ಕಾಪಾಡಬೇಕು. ಬೇರೆ ಸಮುದಾಯದವರು ಬಕ್ರೀದ್ ಹಬ್ಬದಲ್ಲಿ ಪಾಲ್ಗೊಳ್ಳುವಂತೆ ಮಾಡಿ ಎಂದ ಸರ್ ಖಾಜಿ, ದೇಶದ ಜನರ ಕ್ಷೇಮಾಭಿವೃದ್ಧಿಗೆ ಪ್ರಾರ್ಥಿಸಬೇಕು ಎಂದು ಅವರು ಸಲಹೆ ನೀಡಿದರು. ವಕ್ಫ್ ಸಮಿತಿ ಅಧಿಕಾರಿ ಮೊಹಮದ್ ಮುಸ್ತಾಕ್ ಅಹಮದ್, ಮಾಜಿ ನಗರಪಾಲಿಕೆ ಸದಸ್ಯ ಸುಹೇಲ್ ಬೇಗ್, ಕಾಂಗ್ರೆಸ್ ಮುಖಂಡರಾದ ಶೌಖತ್ ಅಲಿಖಾನ್, ಸೈಯ್ಯದ್ ಅಬ್ರಾರ್ ಅಹಮದ್, ಮುಸ್ಲಿಂ ಮುಖಂಡರಾದ ಜಮೀಲ್ ಅಸ್ರಫಿ, ಶಬ್ಬಂ ಸಯೀದ್, ಅಹಮದ್, ಸೈಯ್ಯದ್ ಅಬ್ಬಾಸ್, ಸೈಯ್ಯದ್ ಉಮ್ಮರ್ ಸೇರಿದಂತೆ ಹಲವು ಗಣ್ಯರು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಬಕ್ರೀದ್ ಶುಭಾಶಯ ವಿನಿಮಯ ಮಾಡಿಕೊಂಡರು. ಡಿಸಿಪಿ ಎಂ. ಮುತ್ತುರಾಜ್ ನೇತೃತ್ವದಲ್ಲಿ ಬಕ್ರೀದ್ ಸಾಮೂಹಿಕ ಪ್ರಾರ್ಥನೆಗೆ ಹಳೇ ಈದ್ಗಾ ಮೈದಾನದಲ್ಲಿ ಹೆಚ್ಚುವರಿ ● 9ನೇ ಪುಟಕ್ಕೆ





ಮೈಸೂರಿನ ಸರ್ ಖಾಜಿ ಹಜರತ್ ಮೌಲಾನ ಮೊಹಮದ್ ಉಸ್ಮಾನ್ ಷರೀಫ್ ಸಾಮೂಹಿಕ ಪ್ರಾರ್ಥನೆಯಲ್ಲಿ ನಾಡಿನ ಜನತೆಗೆ ಬಕ್ರೀದ್ ಸಂದೇಶ ನೀಡಿದರು.

ಮೈಸೂರು ಮಿತ್ರ
ಮಂಗಳವಾರ 18 ಜೂನ್ 2024

ಚಿತ್ರನಟರ ಬಗ್ಗೆ ಅಂಧಾಭಿಮಾನ ಬಿಡಿ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸತೀಶ್ ಜವರೇಗೌಡ ಕಿವಿಮಾತು



ಮೈಸೂರಿನ ವಿಜಯನಗರ ಉದ್ಯಾನವನದ ಯೋಗಮಂಟಪದಲ್ಲಿ ಪುಣ್ಯಕೋಟಿ ಸೇವಾ ಟ್ರಸ್ಟ್ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಈ ವೇಳೆ ಸಾಹಿತಿ ಟಿ.ಸತೀಶ್ ಜವರೇಗೌಡ, ಟ್ರಸ್ಟ್ ಅಧ್ಯಕ್ಷ ಹನುಮಂತೇಶ್, ಪಾಲಿಕೆ ಮಾಜಿ ಸದಸ್ಯ ಸುಬ್ಬಯ್ಯ, ವಿಜಯನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಉದಯ್ ಉಪಸ್ಥಿತರಿದ್ದರು.

ಮೈಸೂರು, ಜೂ. 17– ವಿದ್ಯಾರ್ಥಿಗಳು ಮತ್ತು ಯುವಜನರು ಸಿನಿಮಾ ನಟರ ಬಗ್ಗೆ ಅಂಧಾಭಿಮಾನ ತೊರೆದು ತಮ್ಮ ಪೋಷಕರು, ಶಿಕ್ಷಕರು, ಸಾಹಿತಿಗಳ ಬಗ್ಗೆ ಪ್ರೀತ್ಯಾಭಿಮಾನ ಹಾಗೂ ಗೌರವದ ಭಾವ ಬೆಳೆಸಿಕೊಂಡು ಉನ್ನತ ಜೀವನ ಮಾರ್ಗದಲ್ಲಿ ನಡೆಯಬೇಕು ಎಂದು ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಹಾಗೂ ಸಾಹಿತಿ ಟಿ.ಸತೀಶ್ ಜವರೇಗೌಡ ಕರೆ ನೀಡಿದರು.

ಮೈಸೂರಿನ ವಿಜಯನಗರದ ಮೊದಲ ಹಂತದಲ್ಲಿರುವ ಉದ್ಯಾನವನದ ಯೋಗ ಮಂಟಪದಲ್ಲಿ ಪುಣ್ಯಕೋಟಿ ಸೇವಾ ಟ್ರಸ್ಟ್, ಐಶ್ವರ್ಯ ಫೌಂಡೇಷನ್, ಎಸ್.ಎಲ್.ವಿ. ಬುಕ್ ಏಜೆನ್ಸಿ ವಿ.ಎನ್. ಡೆವಲಪರ್ಸ್ ಹಾಗೂ ಲಲಿತ ಇನ್ಫ್ರಾ ಸಲ್ಯೂಷನ್ ಸಂಯುಕ್ತ ಆಶ್ರಯದಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ, ಅವರು ಮಾತನಾಡಿದರು.

ಮೊಬೈಲ್, ಸಿನಿಮಾ, ಟಿವಿ, ಕಂಪ್ಯೂಟರ್ ಇವೆ ಮೊದಲಾದ ತಂತ್ರಜ್ಞಾನದ ಸಾಧನಗಳಿಗೆ ವಿದ್ಯಾರ್ಥಿ–ಯುವಜನರು ಅಡಿಯಾಳಾಗಿದ್ದಾರೆ. ಹಾಗೆ ಸಾಮಾಜಿಕ ಜಾಲತಾಣದ ದಾಸ್ಯಕ್ಕೆ ಒಳಗಾಗಿರುವುದರಿಂದ ವಿವೇಚನೆ ಕಳೆದುಕೊಂಡಿದ್ದಾರೆ. ಈ ತಂತ್ರಜ್ಞಾನದ ಸಾಧನಗಳನ್ನು ಮನೋರಂಜನೆ ಮತ್ತು ವಿಕಾಸಕ್ಕೆ ಅಗತ್ಯವಿದ್ದಷ್ಟು ಮಾತ್ರ ಸದ್ಬಳಕೆ ಮಾಡಿಕೊಳ್ಳುವ ವಿವೇಕ ಮತ್ತು ನೈತಿಕತೆಯನ್ನು ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪ್ರಸ್ತುತ ಸಮಾಜದಲ್ಲಿ ದಿನೇ ದಿನೆ ಅಪರಾಧ ಕೃತ್ಯಗಳು ಹೆಚ್ಚಾಗುತ್ತಿವೆ. 16 ರಿಂದ 30 ವರ್ಷದೊಳಗಿನ ವಿದ್ಯಾರ್ಥಿ ಯುವಜನರೇ ಈ ಪಾತಕ ಕೃತ್ಯಗಳ ಎಸಗುತ್ತಿರುವುದು ನಿಜಕ್ಕೂ ಆತಂಕಕಾರಿ ಬೆಳವಣಿಗೆ. ಇದಕ್ಕೆ ಕಡಿವಾಣ ಬೀಳುವ ಅಗತ್ಯವಿದೆ. ಎಲ್ಲಾ ವಯಸ್ಸಿನ ಮಕ್ಕಳ ಚಲನವಲನಗಳ ಬಗ್ಗೆ ಪೋಷಕರು ನಿಗಾ ವಹಿಸಬೇಕು. ತಪ್ಪು ಮಾಡಿದಾಗ ನಿರ್ದಾಕ್ಷಿಣ್ಯವಾಗಿ ಬುದ್ಧಿ ಹೇಳಿ ತಿದ್ದಬೇಕು ಎಂದು ಸಲಹೆ ನೀಡಿದರು.

ಮೈಸೂರು ಮಹಾನಗರಪಾಲಿಕೆಯ ಮಾಜಿ ಸದಸ್ಯ ಸುಬ್ಬಯ್ಯ ಮಾತನಾಡಿ, ಚಿತ್ರನಟ–ನಟಿಯರು ಮತ್ತು ರಾಜಕಾರಣಿಗಳಲ್ಲಿ ಯಾವುದೇ ಉತ್ತಮ ಗುಣಗಳಿಲ್ಲ. ಇಂಥವರನ್ನು ವಿದ್ಯಾರ್ಥಿಗಳು ರೋಲ್ ಮಾಡೆಲ್ ಆಗಿ ಸ್ವೀಕರಿಸಿದರೆ ಏನೂ ಪ್ರಯೋಜನ ಇಲ್ಲ. ಬದಲಿಗೆ ರೈತ, ಸೈನಿಕ ಹಾಗೂ ತಮ್ಮ ಪೋಷಕರನ್ನು ರೋಲ್ ಮಾಡೆಲ್ ಆಗಿ ಸ್ವೀಕರಿಸಿ ಸಾಮಾಜಿಕ ಕಾಳಜಿ ಮತ್ತು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎಂದರು.

ವಿಜಯನಗರ ಮೊದಲನೆಯ ಹಂತದ ನಿವಾಸಿಗಳ ಸಂಘದ ಅಧ್ಯಕ್ಷ ಉದಯ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ನಿವಾಸಿ ಕೃಷ್ಣಪ್ಪ, ಪುಣ್ಯಕೋಟಿ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಹನುಮಂತೇಶ್ ನಗರಕೆರೆ, ಕಾರ್ಯದರ್ಶಿ ಆಶಾ, ಚೆಸ್ಕಾ ಎಇಇ ಚಿಕ್ಕಸಿದ್ದೇಗೌಡ, ಅಧ್ಯಾಪಕ ಎಸ್.ಡಿ. ಶಿವಣ್ಣ ಉಪಸ್ಥಿತರಿದ್ದರು.

ಗುಲಾಬಿ ಬದಲು ಬಿಳಿ ಬಣ್ಣಕ್ಕೆ ಮಾರ್ಪಟ್ಟ ಕಾಟನ್ ಕ್ಯಾಂಡಿ!

ಕೇಂದ್ರ ಸರ್ಕಾರದ ಜೈಲು ಶಿಕ್ಷೆ, ದಂಡಾಸ್ತ್ರಕ್ಕೆ ಹೆದರಿ ಬಣ್ಣ ಮಾರ್ಪಾಡು



ಮೈಸೂರು, ಜೂ.17(ಬಿಎಲ್‌ಯು)– ಚಿಣ್ಣರು ಸೇರಿದಂತೆ ಸಿಹಿ ಪ್ರಿಯರನ್ನು ಅತ್ಯಾಕರ್ಷಿಸುತ್ತಿದ್ದ ಕಾಟನ್ ಕ್ಯಾಂಡಿ ಈಗ ಗುಲಾಬಿ ಬದಲು ಬಿಳಿ ಬಣ್ಣಕ್ಕೆ ಮಾರ್ಪಟ್ಟಿದೆ. ಗುಲಾಬಿ ಬಣ್ಣದ ರೋಡೋಮೈನ್–ಬಿ ಎಂಬ ಕ್ಯಾನ್ಸರ್‌ಕಾರಕ ರಾಸಾಯನಿಕ ಅಂಶ ಬಳಕೆಗೆ ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ನಿಷೇಧ ಹೇರಿರುವುದು ಕ್ಯಾಟನ್ ಕ್ಯಾಂಡಿ ಬಿಳಿ ಬಣ್ಣಕ್ಕೆ ಮಾರ್ಪಡಲು ಪ್ರಮುಖ ಕಾರಣವಾಗಿದೆ.

ಗುಲಾಬಿ ಬಣ್ಣದಲ್ಲಿ ಮಿನುಗುವ ಕಾಟನ್ ಕ್ಯಾಂಡಿ ಕಣ್ಮನ ಸೆಳೆಯುತ್ತಿತ್ತು. ಬಾಯಲ್ಲಿಟ್ಟರೆ ಸಾಕು ಕ್ಷಣ ಮಾತ್ರದಲ್ಲಿ ಕರಗಿ ನಾಲಿಗೆಗೆ ಸಿಹಿ ರುಚಿ ನೀಡುತ್ತಿತ್ತು. ಕಾಟನ್ ಕ್ಯಾಂಡಿ ಚಿಣ್ಣರನ್ನು ಮಾತ್ರವಲ್ಲದೆ ವಯೋವೃದ್ಧರಿಗೂ ಅಚ್ಚು ಮೆಚ್ಚಾಗಿತ್ತು. ಕಾಟನ್ ಕ್ಯಾಂಡಿಯನ್ನು ಬಾಂಬೆ ಮಿಠಾಯಿ, ಕ್ಯಾಂಡಿ ಫ್ಲೋಸ್, ಫೇರಿ ಫ್ಲೋಸ್ ಎಂಬ ಹಲವು ಹೆಸರಿನಿಂದ ಕರೆಯಲಾಗುತ್ತದೆ.

ಹತ್ತಿಯನ್ನು ಹೋಲುವ ಕಾಟನ್ ಕ್ಯಾಂಡಿಯನ್ನು 1897 ರಲ್ಲಿ ಅಮೇರಿಕಾದ ದಂತ ವೈದ್ಯ ವಿಲಿಯಂ ಮಾರಿಸನ್ ಮತ್ತು ಮಿಠಾಯಿಗಾರ ಜಾನ್ ಸಿ.ವಾರ್ಟನ್ ಕಂಡು ಹಿಡಿದರು. ಆ ಸಂದರ್ಭದಲ್ಲಿ ಕಾಟನ್ ಕ್ಯಾಂಡಿ ಬಿಳಿ ಬಣ್ಣದಲ್ಲೆ ಇತ್ತು. ಆದರೆ ತರುವಾಯ ಚಿಣ್ಣರನ್ನು ಆಕರ್ಷಿಸಲು ಹಾಗೂ ಹೆಚ್ಚಿನ ರುಚಿ ನೀಡಲು ಕಾಟನ್ ಕ್ಯಾಂಡಿಗೆ ಗುಲಾಬಿ ಬಣ್ಣದ ರೋಡೋಮೈನ್–ಬಿ ಎಂಬ ರಾಸಾಯನಿಕ ಬಳಸಲಾಗುತ್ತಿತ್ತು.

ಕಾಟನ್ ಕ್ಯಾಂಡಿಯಲ್ಲಿರುವ ರೋಡೋಮೈನ್–ಬಿ ರಾಸಾಯನಿಕ ಅಂಶ ಆರೋಗ್ಯಕ್ಕೆ ಹಾನಿಕಾರಕವಾಗಿದೆ. ಈ ರಾಸಾಯನಿಕ ಅಂಶವನ್ನು ಬಟ್ಟೆ, ಕಾಗದ, ಮುದ್ರಣ ಹಾಗೂ ಪ್ಲಾಸ್ಟಿಕ್ ತಯಾರಿಕೆಗೆ ಬಳಕೆ ಮಾಡಲಾಗುತ್ತದೆ. ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಈ ಬಗ್ಗೆ ಪ್ರಯೋಗಾಲಯದಲ್ಲಿ ನಡೆಸಿದ ಪರೀಕ್ಷೆಯಲ್ಲಿ ಇದು ದೃಢಪಟ್ಟಿದೆ. ಈ ಹಿನ್ನೆಲೆ ಕೇಂದ್ರ ಸರ್ಕಾರ ರೋಡೋರಿಮೈನ್–ಬಿ ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಿದೆ. ಒಂದು ವೇಳೆ ಕಾಟನ್ ಕ್ಯಾಂಡಿಗೆ ರೋಡೋಮೈನ್–ಬಿ ರಾಸಾಯನಿಕ ಅಂಶ ಬಳಸಿದರೆ 7 ವರ್ಷದ ತನಕ ಶಿಕ್ಷೆ ಹಾಗೂ 10 ಲಕ್ಷ ರೂ. ದಂಡ ವಿಧಿಸುವ ಅವಕಾಶವಿದೆ ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿತ್ತು. ಈ ಹಿನ್ನೆಲೆ ಮೈಸೂರು ಸೇರಿದಂತೆ ದೇಶದೆಲ್ಲೆಡೆ ಇಂದು ಕಾಟನ್ ಕ್ಯಾಂಡಿ ತಯಾರಿಕೆಗೆ ರೋಡೋಮೈನ್–ಬಿ ರಾಸಾಯನಿಕ ಅಂಶ ಬಳಕೆ ಮಾಡುತ್ತಿಲ್ಲ. ಇದರಿಂದ ಹತ್ತಿಯಾಕಾರದ ಬಿಳಿ ಬಣ್ಣದ ಕಾಟನ್ ಕ್ಯಾಂಡಿ ಮೈಸೂರಿನಲ್ಲಿ ಮಾರಾಟವಾಗುತ್ತಿದೆ.

70 ಬಾರಿ ರಕ್ತದಾನ; ಜೀವರಕ್ಷಕ ಪ್ರಶಸ್ತಿ ಪ್ರದಾನ



ಮೈಸೂರು, ಜೂ.17(ಎಸ್‌ಪಿಎನ್)– ವಿಶ್ವ ರಕ್ತದಾನಿಗಳ ದಿನಾಚರಣೆಯಲ್ಲಿ 70 ಬಾರಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದ್ದ ರಾಜಕುಮಾರ್ ರಸ್ತೆಯ ನಿವಾಸಿ ಆನಂದ್ ಅವರಿಗೆ ಜೀವ ರಕ್ಷಕ ಪ್ರಶಸ್ತಿಯನ್ನು ಮೈಸೂರು ವಿವಿ ಕುಲಪತಿ ಪ್ರೊ ಎನ್.ಕೆ.ಲೋಕನಾಥ್ ಪ್ರದಾನ ಮಾಡಿದರು.

ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದ ವಿಜ್ಞಾನ ಭವನದಲ್ಲಿ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ಆಯೋಜಿಸಿದ್ದ ವಿಶ್ವ ರಕ್ತದಾನಿ ದಿನಾಚರಣೆ ಅಂಗವಾಗಿ ಜೀವರಕ್ಷಕ ಪ್ರಶಸ್ತಿ ಪ್ರದಾನ ಮಾಡಿ, ಅವರು ಮಾತನಾಡಿದರು.

ಅಪಾಯದಲ್ಲಿರುವ ಜೀವಗಳನ್ನು ಉಳಿಸಲು ಪ್ರತಿಯೊಬ್ಬ ಯುವಕ ರಕ್ತದಾನ ಮಾಡಬೇಕು. ತರುಣರು ರಕ್ತದಾನ ಮಾಡುವುದರಿಂದ ಹಲವರ ಪ್ರಾಣಗಳು ಉಳಿಯುತ್ತವೆ. ಈ ಸಾಲಿನಲ್ಲಿ ಆನಂದ್ ಅವರು ವಿವಿಧ ಸಂದರ್ಭದಲ್ಲಿ 70 ಬಾರಿ ರಕ್ತದಾನ ಮಾಡಿರುವುದು ಸಂತೋಷದ ಸಂಗತಿ ಎಂದರು.

ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಮಾತನಾಡಿ, ಜೀವರಕ್ಷಕ ಪ್ರಶಸ್ತಿ ಪಡೆದ ಆನಂದ್ ಸೇವೆಯನ್ನು ಶ್ಲಾಘಿಸಿದರು. ಈ ವೇಳೆ ಜಿಲ್ಲಾ ಏಡ್ಸ್ ಪ್ರತಿಬಂಧಕ ಹಾಗೂ ನಿಯಂತ್ರಣ ಘಟಕದ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮದ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಇದ್ದರು.

ರಕ್ತಕ್ಕೆ ಜಾತಿ, ಧರ್ಮದ ಭೇದವಿಲ್ಲ

ವಿಶ್ವ ರಕ್ತದಾನಿಗಳ ದಿನಾಚರಣೆಯಲ್ಲಿ ಸ್ತ್ರೀರೋಗ–ಪ್ರಸೂತಿ ತಜ್ಞೆ ಡಾ.ಬಿಂದು ಬಾಲಸುಬ್ರಮಣ್ಯ ಅಭಿಮತ



ಮೈಸೂರು,ಜೂ. 17–ವಿಶ್ವ ರಕ್ತದಾನಿಗಳ ದಿನದ ಅಂಗವಾಗಿ ಜನಸೇವಕ ಯುವ ಬ್ರಿಗೇಡ್ ವತಿಯಿಂದ ಬೋಗಾದಿಯ ರೂಪಾನಗರದ ಕಾರುಣ್ಯ ಮನೆ ಆವರಣದಲ್ಲಿ ರಕ್ತದಾನದ ಮಹತ್ವ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ವೇಳೆ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ ಡಾ.ಬಿಂದು ಬಾಲಸುಬ್ರಮಣ್ಯ ಮಾತನಾಡಿ, ರಕ್ತಕ್ಕೆ ಜಾತಿ, ಧರ್ಮದ ಭೇದವಿಲ್ಲ. ಅಪಘಾತ ಸಹಿತ ತುರ್ತು ಅವಘಡದಲ್ಲಿ ಸಿಲುಕಿದವರಿಗೆ ರಕ್ತಕ್ಕೆ ಪರ್ಯಾಯ ವ್ಯವಸ್ಥೆ ಇಲ್ಲ. ದಾನಿಗಳ ಮೂಲಕವೇ ಅವಶ್ಯವಿದ್ದವರಿಗೆ ಪೂರೈಸಬೇಕಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಅರ್ಹ ದಾನಿಗಳು ರಕ್ತದಾನ ಮಾಡುವುದರ ಮೂಲಕ ಇತರರ ಜೀವ ಉಳಿಸಲು ಸಹಕರಿಸಬೇಕು ಎಂದರು.

ಜೀವ ರಕ್ಷಣೆ ಕಾರಣವಾಗುವ ಮಹತ್ವದ ಕಾರ್ಯದಲ್ಲಿ ಭಾಗಿಯಾಗುವ ಕೆಲಸವನ್ನು ಯುವಜನತೆ ಮಾಡಬೇಕು. ಪ್ರಸ್ತುತ ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಒಳ್ಳೆಯ ತನವನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಜನಸೇವಕ ಯುವ ಬ್ರಿಗೇಡ್ ಅಧ್ಯಕ್ಷ ರಾಘವೇಂದ್ರ ಡಿ, ಬಿಜೆಪಿ ಮುಖಂಡರೂ ಆದ ಸಮಾಜ ಸೇವಕ ನಂಜುಂಡಸ್ವಾಮಿ, ಕಾರುಣ್ಯ ಮನೆ ವಾರ್ಡನ್ ಸುಲೋಚನಾ, ಪ್ರೊ. ಪ್ರಿಂಸಾಮದ ಸೋದನ್, ಸ್ಪಂದ ರಾಜೇಶ್, ಮತ್ತಿತರರು ಹಾಜರಿದ್ದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ



ಮೈಸೂರು ರಾಮಕೃಷ್ಣನಗರದ ಆರ್.ಕೆ.ಮಂಜು ಸ್ನೇಹ ಬಳಗವು 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಿತ್ತು. ಬಳಗದ ಸಂಸ್ಥಾಪಕ ಆರ್.ಕೆ.ಮಂಜು, ಸದಸ್ಯ ಸಿದ್ದೇಶ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು. ಇದೇ ವೇಳೆ 50ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಚಿನ್ನ–ಬೆಳ್ಳಿ ವರ್ತಕರಿಂದ ರೇಣುಕಾಸ್ವಾಮಿ ಕುಟುಂಬಕ್ಕೆ ನೆರವು



ಮೈಸೂರು ಚಿನ್ನ, ಬೆಳ್ಳಿ ವರ್ತಕರು ಇತ್ತೀಚೆಗೆ ಕೊಲೆಯಾದ ಚಿತ್ರದುರ್ಗದ ರೇಣುಕಾಸ್ವಾಮಿ ಅವರ ಮನೆಗೆ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿ, 60,000 ರೂ. ಆರ್ಥಿಕ ನೆರವು ನೀಡಿದರು. ಜ್ಯುವೆಲ್ಲರಿ ಉದ್ಯಮಿ ರವಿಪ್ರಕಾಶ್, ಲಯನ್ ಸುರೇಶ್ ಗೋಲ್ಡ್, ರಾಘವೇಂದ್ರ ಸೇಟ್, ಗುರು ಡೈಮಂಡ್, ಬಿಜೆಪಿ ಮುಖಂಡ ಗೆಜ್ಜಗಳ್ಳಿ ಮಹೇಶ್, ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ವಿಶ್ವ ಪರಿಸರ ದಿನ: ಹಳೇ ಕೆಸರೆಯಲ್ಲಿ ಸಸಿ ನೆಡುವ ಕಾರ್ಯಕ್ರಮ



ಮೈಸೂರು, ಜೂ. 17– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ, ಸಮುದಾಯ ವೈದ್ಯಕೀಯ ವಿಭಾಗ, ರಾಷ್ಟ್ರೀಯ ಸಮಾಜ ಸೇವಾ ವಿಭಾಗ, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ವತಿಯಿಂದ ಮೈಸೂರು ಜಿಲ್ಲೆಯ ಹಂಚ್ಯಾ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯ ಹಳೇ ಕೆಸರೆ ಗ್ರಾಮದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸಿದ್ದಲಿಂಗಪುರ ಗ್ರಾಂ ಪಂಚಾಯಿತಿ ಅಧ್ಯಕ್ಷ ಮಾದೇಶ್, ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಶ್ರೀಮತಿ ಜ್ಯೋತಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಸವರಾಜ್, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಉಪ ಪ್ರಾಂಶುಪಾಲ ಡಾ.ಪ್ರವೀಣ್ ಕುಲಕರ್ಣಿ, ಅಂಗರಚನಾಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ರವಿಶಂಕರ್, ಡಾ.ಮನು, ಸಹಾಯಕ ಪ್ರಾಧ್ಯಾಪಕರು, ಫಾರ್ಮಾಕಾಲಜಿ ವಿಭಾಗ (ಎನ್‌ಎಸ್‌ಎಸ್ ಅಧಿಕಾರಿಗಳು), ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಶ್ರೀಮತಿ ಗೌರಿ, ಮುಖ್ಯೋಪಾಧ್ಯಾಯಿನಿ–ಸರ್ಕಾರಿ ಪ್ರಾಥಮಿಕ ಶಾಲೆ, ಹಳೇ ಕೆಸರೆ, ಡಾ.ಶ್ವೇತಾ ಎನ್ ಕುರ್ಕುರಿ, ಡಾ.ಸುನಿತಾ ಸಿಂಗ್, ಡಾ. ಮೈಥಿಲಿ ಎಂ ಆರ್, ಅಧ್ಯಾಪಕರು, ವೈದ್ಯಕೀಯ–ಸಾಮಾಜಿಕ ಕಾರ್ಮಿಕರು ಮತ್ತು ಸಮುದಾಯ ವೈದ್ಯಕೀಯ ವಿಭಾಗದ ಸ್ನಾತಕೋತ್ತರ ಪದವೀಧರರು, ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಸಿದ್ದಲಿಂಗಪುರ ಗ್ರಾಮ ಪಂಚಾಯಿತಿಯ ಇತರ ಸದಸ್ಯರು ಭಾಗವಹಿಸಿದ್ದರು.

ಪರಿಸರ ಉಳಿಸುವ ಪ್ರತಿಜ್ಞೆಯನ್ನು ತಗೆದುಕೊಂಡ ವಿದ್ಯಾರ್ಥಿಯರು, ಅರಣ್ಯ ಇಲಾಖೆಯಿಂದ ನೀಡಿದ 120 ಮಹಾಗನಿ ಮತ್ತು ಹೊಂಗೆ ಸಸಿಗಳನ್ನು ಹಳೆ ಕೆಸರೆಯಲ್ಲಿ ನೆಟ್ಟು ದತ್ತು ತೆಗೆದುಕೊಂಡರು. ರಘುಲಾಲ್ ಅಂಡ್ ಕೋ ಮಾಲೀಕ ಎನ್.ರಾಘವನ್ ಅವರು ಸಸಿ ರಕ್ಷಣೆಗಾಗಿ ಟ್ರೀ ಗಾರ್ಡ್‌ಗಳನ್ನು ನೀಡಿದರು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಜೂ. 17– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜೂ.20ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259.

ಪಿಎಚ್.ಡಿ ಪದವಿ



ಮೈಸೂರು: ಡಾ.ಅಕ್ಕ ಮಹಾದೇವಿ ಅವರ ಮಾರ್ಗದರ್ಶನದಲ್ಲಿ ಕೆ.ಎನ್. ಅರುಣ್ ಕುಮಾರ್ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ

ಜಿ.ಎಸ್. ಚಂದನ್



ಮೈಸೂರು, ಜೂ. 17– ಮೈಸೂರಿನ ಸಾತಗಳ್ಳಿ 'ಬಿ' ವಲಯ, ವಿಟಿಯು ಕಾಲೇಜು ಸಮೀಪ, ಹಂಸ ಸರ್ಕಲ್, ನಂ.675 ನಿವಾಸಿ ನಿವೃತ್ತ ಪಿಡಬ್ಲ್ಯೂಡಿ ನೌಕರ ಗುರುಮಲ್ಲಪ್ಪ ಮತ್ತು ಶೈಲಜಾ ದಂಪತಿ ಪುತ್ರ ಜಿ.ಎಸ್.ಚಂದನ್(32) ಜೂನ್ 15ರಂದು ನಿಧನರಾದರು. ಮೃತರು ಪೋಷಕರು, ಸಹೋದರಿ, ಪತ್ನಿ ಮಾನಸ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ವಿದ್ಯಾರಣ್ಯಪುರಂ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಜೂ.16ರಂದು ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ಕೆ. ವೆಂಕಟೇಶಮೂರ್ತಿ



ಮೈಸೂರು: ಮೈಸೂರಿನ ಕನಕದಾಸನಗರ ನಿವಾಸಿ, ಶಿಕ್ಷಣ ಇಲಾಖೆಯ ನಿವೃತ್ತ ಅಧೀಕ್ಷಕರಾದ ಆರ್.ಕೆ. ವೆಂಕಟೇಶಮೂರ್ತಿ(64) ಅವರು ಸೋಮವಾರ ನಿಧನರಾದರು.

ಮೃತರು ಪತ್ನಿ ರಾಮನಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಸುಮತಿ, ಪುತ್ರಿ ಹರ್ಷಿತಾ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 1.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಸಂತೋಷ್



ಮೈಸೂರು: ನಗರದ ಹೊರವಲಯದ ಹಿನಕಲ್ ನಿವಾಸಿ ಹಾಗೂ ಕೇರಳಾಪುರ ಸಂತೋಷ್ ಮಿಲ್ಟ್ರಿ ಹೋಟೆಲ್ ಮಾಲೀಕರೂ ಆದ ಸಂತೋಷ್(33) ಇಂದು ಮಧ್ಯಾಹ್ನ ನಿಧನರಾದರು.

ಮೃತರು ತಂದೆ–ತಾಯಿ, ಪತ್ನಿ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 12 ಗಂಟೆಗೆ ವಿಜಯನಗರ ನಾಲ್ಕನೇ ಹಂತದ ಮುಕ್ತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.06.2024 ಮಂಗಳವಾರ, ಮಳೆ ನಕ್ಷತ್ರ: ಮೃಗಶಿರ, 08.06.2024ರಿಂದ 21.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸೋರಿಯಾಸಿಸ್ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.
- **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ :** 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ : ದೇವಸ್ಥಾನದ ಆವರಣ. ಕಾಳಿದಾಸ ರಸ್ತೆ.
- **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ಪ್ರತಿಷ್ಠಾಪನಾ ವಾರ್ಷಿಕ ಮಹೋತ್ಸವ, ಶ್ರೀ ಗುರುವಾಯೂರಪ್ಪನ್‌ರವರ 18ನೇ ಪ್ರತಿಷ್ಠಾಪನಾ ವಾರ್ಷಿಕ ಮಹೋತ್ಸವ, ಬೆಳಗ್ಗೆ 5.30 ರಿಂದ ಗಣಪತಿ ಹೋಮಂ, ಶ್ರೀ ಗುರುವಾಯೂರಪ್ಪನಿಗೆ ಉದಯಾಸ್ಥಮಾನ ಪೂಜೆ, ನವಗಂ, ಪಂಚಗವ್ಯಂ ಹಾಗೂ ಉಚ್ಛ ಪೂಜೆ, ಮಧ್ಯಾಹ್ನ 12ಕ್ಕೆ ಅನ್ನದಾನ, ಸಂಜೆ 5.30 ರಿಂದ ದೀಪಾರಾಧನೆ, ವಾದ್ಯಗಳೊಂದಿಗೆ ವಿಶೇಷ ಪೂಜೆ, ಅತ್ತಾಳ ಪೂಜಾ, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಮೈಸೂರು.
- **ಮೈಸೂರು ಧರ್ಮಕ್ಷೇತ್ರ, ಓಡಿಪಿ ಸಂಸ್ಥೆ, ಭೂಸಿರಿ ಡೆವಲಪ್‌ಮೆಂಟ್ ಫೌಂಡೇಷನ್:** ವಿಶ್ವ ಪರಿಸರ ದಿನಾಚರಣೆ, ಘೋಷವಾಕ್ಯ: ನಮ್ಮ ಭೂಮಿ–ನಮ್ಮ ಭವಿಷ್ಯ, ಅಧ್ಯಕ್ಷತೆ: ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್, ಉದ್ಘಾಟನೆ: ಜಂಟಿ ಕೃಷಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ಮುಖ್ಯ ಅತಿಥಿಗಳು: ಓಡಿಪಿ ಉಪಾಧ್ಯಕ್ಷ ಅಲ್ಫ್ರೆಡ್ ಜಾನ್ ಮೆಂಡೋನ್ಸಾ, ವಿಸ್ತರಣಾ ಮುಂದಾಳು ಡಾ.ಸಿ.ರಾಮಚಂದ್ರ, ಕೃಷಿ ಇಲಾಖೆ ಸಹಾಯಕ ಕೃಷಿ ನಿರ್ದೇಶಕ ಜಯರಾಮು, ಫಾದರ್ ಸ್ಟ್ಯಾನಿ ಡಿ ಅಲ್ಮೇಡಾ, ಓಡಿಪಿ ನಿರ್ದೇಶಕ ಅಲೆಕ್ಸ್ ಪ್ರಶಾಂತ್ ಸಿಕ್ವೇರಾ, ಹಿರಿಯ ವೈಜ್ಞಾನಿಕ ಅಧಿಕಾರಿ ಎಂ.ಸಿ. ನಿತ್ಯಾನಂದ, ಗ್ರಾಮ ವಿಕಾಸ ಸ್ವಸಹಾಯ ಸಂಘಗಳ ಮಹಾ ಒಕ್ಕೂಟದ ಅಧ್ಯಕ್ಷ ಆರೋಗ್ಯ, ಡಾ.ಎಸ್. ಶಿವರಾಜಪ್ಪ, ಸ್ಥಳ: ಓಡಿಪಿ ಆವರಣ, ಬನ್ನಿಮಂಟಪ, ಬೆಳಗ್ಗೆ 10.30ಕ್ಕೆ.
- **ಭೂಮಿಕಾ ಅಸೋಸಿಯೇಟ್ಸ್ ಮತ್ತು ದಿ.ಮೈಕ್ ಚಂದ್ರು ಗೆಳೆಯರ ಬಳಗ :** ಭಾವಸ್ಪಂದನ ಶೀರ್ಷಿಕೆ ಅಡಿಯಲ್ಲಿ ನಾಡಿನ ಖ್ಯಾತ ಕವಿಗಳ ಗೀತ ಗುಚ್ಛಗಳ ಗಾಯನ ಕಾರ್ಯಕ್ರಮ, ಗೀತೆ ಪ್ರಸ್ತುತ ಪಡಿಸುವವರು: ಸಂತ ಶಿಶುನಾಳ ಷರೀಫರು, ಕುವೆಂಪು, ದ.ರಾ.ಬೇಂದ್ರೆ ಮೊದಲಾದ ಎಲ್ಲಾ ಪ್ರಸಿದ್ಧ ಕವಿಗಳ ಸುಮಾರು 28 ಗೀತೆಗಳನ್ನು ಆಕಾಶವಾಣಿ ಹಾಗೂ ದೂರದರ್ಶನದ ಯುವ ಕಲಾವಿದರು, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಶ್ರದ್ಧೆಯ ಶಿಲ್ಪ' ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು. 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಹೆಚ್. ವಿ. ನಾಗರಾಜರಾವ್, 6.50 ರೈತರಿಗೆ ಸಲಹೆ, 7.15 ಯೋಗೋತ್ಸವ : ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 8.30 ಕಾದಂಬರಿ ವಿಹಾರ: ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್ ಎಸ್.ಎಸ್., 8.45 ನಮ್ಮ ಆರೋಗ್ಯ–ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ, 'ಯೋಗೋತ್ಸವ' ಕುರಿತು ಮೈಸೂರು ಜಿಲ್ಲಾ ಆಯುಷ್ ಅಧಿಕಾರಿ ಡಾ. ಪುಷ್ಪಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.00 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಹೆಚ್.ಎಸ್.ರಮೇಶ್–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳೀಮಠ್

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.20 ಭಾವಗೀತೆಗಳು–ಕೃಪಾ ನಾಡಿಗ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಆಲತ್ತೂರ್ ಸಹೋದರರು –ಯುಗಳ ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ, ಲವ ಕುಶ, ಪ್ರಸ್ತುತಿ: ವಿದ್ವಾನ್ ಆರ್. ಗುರುರಾಜುಲು ನಾಯ್ಡು, 5.30 Pashudhan Se Behthar Jeevan, ಪ್ರಾಯೋಜಕರು : ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 6.50 ಕೃಷಿರಂಗ: ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ರೇಷ್ಮೆ ಹುಳು ಸಾಕಾಣಿಕೆಗೆ ಸೂಕ್ತವಾದ ಮನೆ ನಿರ್ಮಾಣ. ಈ ಕುರಿತು ಮೈಸೂರಿನ ಕೇಂದ್ರ, ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಕೆ.ಬಿ. ಚಂದ್ರಶೇಖರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು:ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಸ್. ಗೋಪಾಲಕೃಷ್ಣನ್ ಮತ್ತು ಎಂ. ಎಸ್.ಅನಂತರಾಮನ್–ಯುಗಳ ವಯೋಲಿನ್ ವಾದನ, 10.00 ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ– ಹೆಚ್.ಎಲ್. ಶ್ರೀಕಂಠ, ವ್ಯಾಖ್ಯಾನ : ಹೆಚ್. ಎಸ್. ಗೋಪಾಲ್, ಪ್ರಸ್ತುತಿ: ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

ಏರಿಸಿರುವ ಪೆಟ್ರೋಲ್, ಡೀಸೆಲ್ ದರ ಇಳಿಸಲ್ಲ...

● ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ● ಇದರಿಂದ ಬರುವ ಹಣವನ್ನು ಅಭಿವೃದ್ಧಿಗೆ ಬಳಸ್ತೇವೆ! ● ದರ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆಗೆ ಎದುರೇಟು



ಬೆಂಗಳೂರು, ಜೂ.17 (ಕೆಎಂಶಿ)– ಪೆಟ್ರೋಲ್, ಡೀಸೆಲ್ ದರ ಇಳಿಸಲ್ಲ ಎಂದು ಸ್ಪಷ್ಟಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಅದರಿಂದ ಬರುವ ಸಂಪನ್ಮೂಲವನ್ನು ರಾಜ್ಯದ ಅಭಿವೃದ್ಧಿಗೆ ಬಳಕೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಬಿಜೆಪಿ ಆಡಳಿತ ನಡೆಸುವ ಹಾಗೂ ದಕ್ಷಿಣ ಭಾರತದ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಇಂಧನ ಬೆಲೆ ಕಡಿಮೆ ಇದೆ ಎಂದು ಅಂಕಿ–ಅಂಶಗಳ ಮೂಲಕ ಅವರು ಸಮರ್ಥನೆ ಮಾಡಿಕೊಂಡರು. ದರ ಏರಿಕೆ ವಿರುದ್ಧ ರಾಜ್ಯ ಬಿಜೆಪಿ ಪ್ರತಿಭಟನೆ ಹಮ್ಮಿಕೊಂಡ ಬೆನ್ನಲ್ಲೇ ತುರ್ತು ಪತ್ರಿಕಾಗೋಷ್ಠಿ ನಡೆಸಿದ ಮುಖ್ಯಮಂತ್ರಿ ಅವರು, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆ ಹೆಚ್ಚಳದಿಂದ ಸಂಗ್ರಹವಾಗುವ ಮೂರು ಸಾವಿರ ಕೋಟಿ ರೂ.ಗಳು ರಾಜ್ಯದ ಖಜಾನೆಗೆ ಸಂದಾಯವಾಗುತ್ತದೆಯೇ ಹೊರತು ನನ್ನ ಜೇಬಿಗಲ್ಲ. ಈ ಹಣವನ್ನು ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುವುದೆಂದು ತಿಳಿಸಿದರು.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ರಾಜ್ಯದ ಪ್ರತಿಯೊಂದು ಯೋಜನೆಗಳಲ್ಲಿಯೂ 40% ತೆರಿಗೆ ಹಣ ಬಿಜೆಪಿ ನಾಯಕರ ಜೇಬಿಗೆ ಹೋಗುತ್ತಿತ್ತು, ಈ ರೀತಿ ಅಂದಾಜು ಒಂದೂವರೆ ಲಕ್ಷ ಕೋಟಿ ರೂ.ಗಳಷ್ಟು ರಾಜ್ಯದ ಜನರ ಬೆವರ ಗಳಿಕೆಯ ತೆರಿಗೆ ಹಣವನ್ನು ಈ ಬಿಜೆಪಿ ನಾಯಕರು ತಮ್ಮ ಜೇಬಿಗೆ ತುಂಬಿಸಿಕೊಂಡಿದ್ದಾರೆ ಎಂದರು. ಇಂತಹ ಲೂಟಿಕೋರ, ಭ್ರಷ್ಟ, ಜನವಿರೋಧಿ ಬಿಜೆಪಿ ನಾಯಕರಿಗೆ ಜನಕಲ್ಯಾಣಕ್ಕಾಗಿ ಸ್ವಲ್ಪ ಪ್ರಮಾಣದ ತೆರಿಗೆ ಹೆಚ್ಚಿಸಿದ್ದನ್ನು ಪ್ರಶ್ನಿಸುವ ಯೋಗ್ಯತೆ ಎಲ್ಲಿದೆ ಎಂದು ಪ್ರಶ್ನಿಸಿದರು. ಗ್ಯಾರಂಟಿ ಯೋಜನೆಗಳಿಗಾಗಿ ರಾಜ್ಯ ಸರ್ಕಾರ 60 ಸಾವಿರ ಕೋಟಿ ರೂ.ಗಳನ್ನು ವ್ಯಯ ಮಾಡುತ್ತಿದೆ, ಇಷ್ಟೂ ಹಣ ರಾಜ್ಯದ ಎಲ್ಲಾ ಜಾತಿ–ಸಮುದಾಯಗಳ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹೋಗುತ್ತದೆ.

ಸದ್ಯದ ಅಲ್ಪ ಪ್ರಮಾಣದ ಡೀಸೆಲ್, ಪೆಟ್ರೋಲ್ ತೆರಿಗೆ ಹೆಚ್ಚಳದಿಂದ ನಮಗೆ ಹೆಚ್ಚುವರಿಯಾಗಿ ಸಂಪನ್ಮೂಲ ಸಂಗ್ರಹ ಆಗುವುದು ಕೇವಲ 3 ಸಾವಿರ ಕೋಟಿ ರೂಪಾಯಿ ಮಾತ್ರ. ಆದರೆ ಗ್ಯಾರಂಟಿಗಳಿಗೆ ನಾವು ಕೊಡುತ್ತಿರುವುದು 60 ಸಾವಿರ ಕೋಟಿ ರೂ., ಆದ್ದರಿಂದ ಬಿಜೆಪಿ ನಾಯಕರ ಪೆದ್ದುತನದ ಮಾತುಗಳಿಗೆ ಅರ್ಥವಿಲ್ಲ ಎಂದರು. ಕೇಂದ್ರ ಸರ್ಕಾರ ಜಿಎಸ್‌ಟಿ ವ್ಯವಸ್ಥೆ ಜಾರಿಗೊಳಿಸಿದ ನಂತರ ರಾಜ್ಯ ಸರ್ಕಾರಗಳ ಸಂಪನ್ಮೂಲ ಕ್ರೋಢೀಕರಣಕ್ಕೆ ಇರುವ ಅವಕಾಶ ಸೀಮಿತಗೊಂಡಿದೆ, ಕೇಂದ್ರ ಸರ್ಕಾರ ಜಿಎಸ್‌ಟಿ, ಆದಾಯ ತೆರಿಗೆ, ಕೇಂದ್ರ ಅಬಕಾರಿ ಸುಂಕ ಮೊದಲಾದ ಮೂಲಗಳಿಂದ ತೆರಿಗೆ ಸಂಗ್ರಹಿಸುತ್ತದೆ.

ರಾಜ್ಯ ಸರ್ಕಾರಕ್ಕೆ ಕೇವಲ ನೋಂದಣಿ ಮತ್ತು ಮುದ್ರಾಂಕ ಶುಲ್ಕ, ವಾಹನ ತೆರಿಗೆ, ಪೆಟ್ರೋಲ್, ಡೀಸೆಲ್ ಮೇಲಿನ ಮಾರಾಟ ತೆರಿಗೆ ಹಾಗೂ ಮದ್ಯದ ಮೇಲಿನ ಮಾರಾಟ ತೆರಿಗೆ ಹೊರತುಪಡಿಸಿ ಯಾವುದೇ ಮೂಲಗಳಿಲ್ಲ. ಇತರ ರಾಜ್ಯಗಳ ಪೆಟ್ರೋಲ್, ಡೀಸೆಲ್ ಬೆಲೆಗೆ ಹೋಲಿಸಿದರೆ ರಾಜ್ಯದ ದರಗಳು ಕಡಿಮೆ ಇವೆ, ರಾಜ್ಯ ಸರ್ಕಾರ ಅಲ್ಪ ಪ್ರಮಾಣದ ತೆರಿಗೆ ಹೆಚ್ಚಳ ಮಾಡಿದೆ ಎಂದು ಮುಖ್ಯಮಂತ್ರಿ ಸ್ಪಷ್ಟ ಪಡಿಸಿದರು.

ಬಿಜೆಪಿ ಅವರಿಗೆ ಪ್ರತಿಭಟನೆ ಮಾಡುವ ನೈತಿಕ ಹಕ್ಕು ಎಲ್ಲಿದೆ ಎಂದು ಪ್ರಶ್ನಿಸಿದ ಅವರು, ಡಾ.ಮನಮೋಹನ್ ಸಿಂಗ್ ಅವಧಿಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 113 ಡಾಲರ್ ಇತ್ತು, 2015ರಲ್ಲಿ ಈ ಬೆಲೆ ಅರ್ಧಕ್ಕರ್ಧ ಕಡಿಮೆಯಾದರೂ, ಬೆಲೆ ಇಳಿಸಿ, ಜನರ ಹೊರೆ ಕಡಿಮೆ ಮಾಡುವ ಕಾಳಜಿಯನ್ನು ನರೇಂದ್ರ ಮೋದಿ ಅವರು ತೋರಲಿಲ್ಲ, ಬಿಜೆಪಿಯವರು ಯಾರ ವಿರುದ್ಧ ಹೋರಾಡಬೇಕು ಎಂದು ಪ್ರಶ್ನಿಸಿದರು.

ಕರ್ನಾಟಕ ರಾಜ್ಯಕ್ಕೆ ಬಿಜೆಪಿ ಸರ್ಕಾರದಿಂದ ನಿರಂತರ ಅನ್ಯಾಯವಾಗುತ್ತಾ ಬಂದರೂ, ಬಿಜೆಪಿಯವರು ದನಿ ಎತ್ತಿಲ್ಲ, ತೆರಿಗೆ ಅನ್ಯಾಯವಾದಾಗ ಸಂಸದರು ಈ ವಿಷಯದ ಕುರಿತು ಮಾತನಾಡಿಲ್ಲ. ರಾಜ್ಯಕ್ಕೆ 15ನೇ ಹಣಕಾಸು ಆಯೋಗವು ವಿಶೇಷ ಅನುದಾನ ನೀಡುವಂತೆ ಶಿಫಾರಸು ಮಾಡಿದ್ದರೂ, ಕೇಂದ್ರ ಸರ್ಕಾರ ನೀಡಿಲ್ಲ, ಭದ್ರಾ ಮೇಲ್ದಂಡೆ ಯೋಜನೆಗೆ ಆಯವ್ಯಯದಲ್ಲಿ ನಿರ್ಮಲಾ ಸೀತಾರಾಮನ್ ಅವರು 5,000 ಕೋಟಿ ರೂ. ಒದಗಿಸುವುದಾಗಿ ಘೋಷಿಸಿದರೂ, ಬಿಡಿಗಾಸೂ ನೀಡಿಲ್ಲ, ಈ ವಿಷಯಗಳ ಕುರಿತು ಬಿಜೆಪಿಯವರು ದನಿ ಎತ್ತಿದ್ದಾರೆಯೇ, ಬಿಜೆಪಿ ಬಡವರು, ದಲಿತ ವಿರೋಧಿ ಧೋರಣೆ ಹೊಂದಿದೆ ಎಂದು ಅವರು ನುಡಿದರು. ರಾಜ್ಯದ ಜನರ ಪಾಲಿನ ಹಣವನ್ನು ಕೇಂದ್ರ ಸರ್ಕಾರ ಕೊಟ್ಟಿದ್ದರೆ ನಮಗೆ ತೆರಿಗೆ ಹೆಚ್ಚಿಸುವ ಅಗತ್ಯವೇ ಬೀಳುತ್ತಿರಲಿಲ್ಲ ಎಂದು ಹೇಳಿದರು.

ರಾಜ್ಯ ಸರ್ಕಾರದಿಂದ ಬಡವರು, ಮಧ್ಯಮ ವರ್ಗದ ಸುಲಿಗೆ



● ಪೆಟ್ರೋಲ್, ಡೀಸೆಲ್ ದರ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ; ಆಕ್ರೋಶ ● ದರ ಇಳಿಕೆವರೆಗೂ ರಾಜ್ಯಾದ್ಯಂತ ಪ್ರತಿಭಟನೆ ಎಚ್ಚರಿಕೆ





ಬೆಂಗಳೂರು, ಜೂ.17 (ಕೆಎಂಶಿ)– ಗ್ಯಾರಂಟಿ ನೆಪದಲ್ಲಿ ಬಡವರು ಮತ್ತು ಮಧ್ಯಮ ವರ್ಗವನ್ನು ಸರ್ಕಾರ ಸುಲಿಗೆ ಮಾಡುತ್ತಿದೆ ಎಂದು ರಾಜ್ಯ ಬಿಜೆಪಿ ಕಿಡಿಕಾರಿದೆ. ಪೆಟ್ರೋಲ್, ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 3 ಹಾಗೂ 3.50 ರೂ.ವರೆಗೆ ಹೆಚ್ಚಳ ಮಾಡಿ ಜನ ವಿರೋಧಿ ನಿರ್ಧಾರವನ್ನು ಕಾಂಗ್ರೆಸ್ ಕೈಗೊಂಡಿದೆ ಎಂದು ಆರೋಪಿಸಿದೆ. ಏರಿಸಿದ ದರ ಹಿಂಪಡೆಯುವವರೆಗೂ ರಾಜ್ಯಾದ್ಯಂತ ಹೋರಾಟ ನಡೆಸುವುದಾಗಿ ಬಿಜೆಪಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಬೆಲೆ ಏರಿಕೆ ಖಂಡಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ರಾಘವೇಂದ್ರ, ವಿಧಾನಸಭೆಯಲ್ಲಿನ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥ್ ನಾರಾಯಣ ಸೇರಿದಂತೆ ಹಲವರು ಪಾಲ್ಗೊಂಡು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ರಾಜ್ಯದ ರೈತರು, ಬಡವರು, ಜನಸಾಮಾನ್ಯರಿಗೆ ನ್ಯಾಯ ಕೊಡಿಸುವ ಕೆಲಸವನ್ನು ನಾವು–ನೀವೆಲ್ಲರೂ ಸೇರಿ ಮಾಡಬೇಕಿದೆ ಎಂದು ಮುಖಂಡರು ತಿಳಿಸಿದರು. ಜನ ವಿರೋಧಿ ಸರಕಾರ ಮತ್ತು ಜನ ವಿರೋಧಿ ಮುಖ್ಯಮಂತ್ರಿಗಳ ವಿರುದ್ಧ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಿ ಹೆಚ್ಚಳ ಮಾಡಿರುವ ದರವನ್ನು ಹಿಂಪಡೆಯುವವರೆಗೂ ನಾವು ವಿಶ್ರಮಿಸುವುದಿಲ್ಲ ಎಂದರು.

ಲೋಕಸಭಾ ಚುನಾವಣೆಯಲ್ಲಿ 18ರಿಂದ 20 ಸ್ಥಾನ ಗೆಲ್ಲುವ ನಿರೀಕ್ಷೆ ಇಟ್ಟುಕೊಂಡಿದ್ದ ಕಾಂಗ್ರೆಸ್ ಮುಖಂಡರು ಫಲಿತಾಂಶ ಬಂದ ಬಳಿಕ ಹತಾಶರಾಗಿದ್ದಾರೆ, ಇನ್ನೊಂದೆಡೆ ಕಾಂಗ್ರೆಸ್ ಶಾಸಕರೇ ಗ್ಯಾರಂಟಿ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ಇದಾವುದನ್ನೂ ಸಹಿಸಿಕೊಳ್ಳದ ಮುಖ್ಯಮಂತ್ರಿ ಅವರು, ಜನರ ಮೇಲೆ ಹೊಸ ತೆರಿಗೆ ಹಾಕಿ ಸೇಡು ತೀರಿಸಿಕೊಳ್ಳಲು ಮುಂದಾಗಿದ್ದಾರೆ.

ಲೋಕಸಭಾ ಚುನಾವಣಾ ಸೋಲಿನಿಂದ ಸಿದ್ದರಾಮಯ್ಯ ವಿಚಲಿತರಾಗಿ ಬಡವರು ಮತ್ತು ಮಧ್ಯಮ ವರ್ಗದವರ ಮೇಲೆ ಸೇಡು ತೀರಿಸಿಕೊಳ್ಳಲು ಹೊರಟಿರುವುದು ಎಷ್ಟು ನ್ಯಾಯ ಎಂದು ಪ್ರಶ್ನಿಸಿದರು.

ಬೆಳಗ್ಗೆ ಏಳುತ್ತಲೇ ತೆರಿಗೆ ಏರಿಕೆ ಆಲೋಚನೆ: ಬೆಳಗ್ಗೆ ಎದ್ದರೆ ಬಡವರ ಬಗ್ಗೆಯೇ ಮಾತನಾಡುವ ಸಿದ್ದರಾಮಯ್ಯ ಅವರಿಗೆ ಇಂತಹ ತೆರಿಗೆ ಹೇರಲು ಮನಸ್ಸು ಬಂದಿದ್ದಾದರೂ ಹೇಗೆ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್ ಸರಕಾರಕ್ಕೆ ಕಳೆದ ಒಂದು ವರ್ಷದ ಅಧಿಕಾರದಲ್ಲಿ ಒಂದೇ ಒಂದು ರೂಪಾಯಿಯನ್ನೂ ಅಭಿವೃದ್ಧಿಗೆ ಕೊಡಲು ಸಾಧ್ಯವಾಗಿಲ್ಲ ಎಂದು ಆಕ್ಷೇಪಿಸಿದರು.

ಮುದ್ದೇಬಿಹಾಳದ ಕಾಂಗ್ರೆಸ್ ಶಾಸಕ ನಾಡಗೌಡರು ಅಭಿವೃದ್ಧಿ ಕಾರ್ಯ ಸ್ಥಗಿತವಾದ ಕುರಿತು ಹೇಳಿಕೆ ಕೊಟ್ಟಿದ್ದಾರೆ, ತಾವು ಕ್ಷೇತ್ರದಲ್ಲಿ ತಲೆ ಎತ್ತಿ ಓಡಾಡಲೂ ಆಗದ ಸ್ಥಿತಿ ಇದೆ ಎಂದು ಗಮನ ಸೆಳೆದಿದ್ದಾರೆ. ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಲೂ ಸಿದ್ಧ ಎಂದು ಹೇಳಿದ್ದಾರೆ. ರಸ್ತೆ, ಶಾಲೆಗಳ ಅಭಿವೃದ್ಧಿ, ಆಸ್ಪತ್ರೆಗಳ ವಿಚಾರದಲ್ಲೂ ಅಭಿವೃದ್ಧಿ ಎಂಬುದು ಕನಸಾಗಿದೆ ಎಂದು ಟೀಕಿಸಿದರು.


ಬಿಜೆಪಿ ಸರಕಾರ ಅಧಿಕಾರದಿಂದ ಕೆಳಕ್ಕಿಳಿಯುವಾಗ ರಾಜ್ಯದ ಬೊಕ್ಕಸ ತುಂಬಿತ್ತು. ಹೆಚ್ಚು ಸಾಲಗಳೂ ಇರಲಿಲ್ಲ, ಸಿದ್ದರಾಮಯ್ಯ ಮುಖ್ಯಮಂತ್ರಿ ಆದ ಒಂದೇ ಒಂದು ವರ್ಷದಲ್ಲಿ ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿ ಸಂಪೂರ್ಣ ಹದಗೆಟ್ಟಿದೆ, ದಿವಾಳಿ ಅಂಚಿಗೆ ಹೋಗಿದೆ. ಯಾವ ಪುರುಷಾರ್ಥಕ್ಕೆ ಆಡಳಿತ ನಡೆಸುತ್ತಿದ್ದೀರಿ ಎಂದು ಪ್ರಶ್ನಿಸಿದರು.

ಬೆಲೆ ಏರಿಕೆ, ಹಣದುಬ್ಬರದ ಕುರಿತು ತಿಳಿದಿದ್ದರೂ ಅನುಭವಿ ಸಿದ್ದರಾಮಯ್ಯನವರು ಲೋಕಸಭಾ ಚುನಾವಣೆ ನಂತರ ಪೆಟ್ರೋಲ್, ಡೀಸೆಲ್ ದರ ಹೆಚ್ಚಳದ ಈ ಜನ ವಿರೋಧಿ ನಿರ್ಧಾರ ಮಾಡಿದ್ದು, ಇದು ಅಕ್ಷಮ್ಯ ಅಪರಾಧ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದರು.

ಹಿಂದೆ ಅವರು ವಿರೋಧ ಪಕ್ಷದಲ್ಲಿದ್ದಾಗ ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಯನ್ನು ಖಂಡಿಸಿದ್ದರು ಎಂದು ಸಿದ್ದರಾಮಯ್ಯನವರ ವಿಡಿಯೋ ಪ್ರದರ್ಶಿಸಿದರು. ಸಿದ್ದರಾಮಯ್ಯನವರು ಮಾನ–ಮರ್ಯಾದೆ ಇಲ್ಲದ ಕಾಂಗ್ರೆಸ್ಸಿಗೆ ಸೇರಿದವರು. ಸಿದ್ರಾಮಣ್ಣ ನುಂಗಣ್ಣ ಎಂದರಲ್ಲದೆ, ವಾಲ್ಮೀಕಿ ನಿಗಮಕ್ಕೆ ಸೇರಿದ 187 ಕೋಟಿ ರೂ. ನುಂಗಿದ ನಾಗೇಂದ್ರರ ವಿಕೆಟ್ ಪತನವಾಗಿದೆ, ಈಗ ಎರಡನೇ ವಿಕೆಟ್ ಸಿದ್ದರಾಮಯ್ಯ ಅವರದು ಎಂದು ತಿಳಿಸಿದರು. ಸಿದ್ದರಾಮಯ್ಯನವರು ತಾವು ಮಾತ್ರ ಟೋಪಿ ಹಾಕುವುದಲ್ಲ, ಜನರಿಗೂ ಟೋಪಿ ಹಾಕುತ್ತಿದ್ದಾರೆ. ಟೋಪಿ ಹಾಕಿ, ನಾಮ ಹಾಕಿ, ಜನರಿಗೆ ಚೆಂಬು ನೀಡುತ್ತಿದ್ದಾರೆ ಎಂದು ಆಕ್ಷೇಪಿಸಿದರು.

ಇನ್ನೊಂದು ಧರ್ಮ ಪ್ರೀತಿಸುವ ಗುಣ ಬೆಳೆಸಿಕೊಳ್ಳಬೇಕು

● ಬಕ್ರೀದ್ ಪ್ರಾರ್ಥನೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜನತೆಗೆ ಕರೆ ● ಸರ್ವಧರ್ಮ ಸಮನ್ವಯ, ನಮ್ಮ ಬದುಕಾಗಬೇಕು



ಬೆಂಗಳೂರು, ಜೂ.17 (ಕೆಎಂಶಿ)– ಎಲ್ಲರಲ್ಲೂ ಮನುಷ್ಯತ್ವ ಬೆಳೆಯಲಿ, ಸಹಿಷ್ಣುತೆ, ಪ್ರೀತಿ ವಿಶ್ವಾಸ ಬೆಳೆಯಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಕರೆ ನೀಡಿದ್ದಾರೆ.

ಬಕ್ರೀದ್ ಆಚರಣೆ ಅಂಗವಾಗಿ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಮುಸಲ್ಮಾನ ಬಾಂಧವರಿಗೆ ಶುಭಾಶಯ ಕೋರಿ ಮಾತನಾಡಿದ ಅವರು, ಸಮಾಜದಲ್ಲಿ ನಾವೆಲ್ಲರೂ ಅಣ್ಣ–ತಮ್ಮಂದಿರಂತೆ ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳಬೇಕು. ಇನ್ನೊಂದು ಧರ್ಮವನ್ನು ಪ್ರೀತಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಎಲ್ಲಾ ಧರ್ಮ, ಜಾತಿ, ಭಾಷೆ, ಪ್ರಾಂತ್ಯದವರು ಒಟ್ಟಾಗಿ ಬಾಳಬೇಕು. ಮನುಷ್ಯತ್ವ ಬಹಳ ದೊಡ್ಡದು. ಎಲ್ಲರೂ ಪರಸ್ಪರ ಪ್ರೀತಿಸಬೇಕು. ಪ್ರತಿಯೊಬ್ಬರೂ ಸಹಿಷ್ಣುತೆಯನ್ನು ಪಾಲಿಸಬೇಕು. ಆಗ ಮಾತ್ರ ರಾಷ್ಟ್ರ, ಸಮಾಜ ಹಾಗೂ ಎಲ್ಲಾ ಧರ್ಮಗಳೂ ಏಳಿಗೆಯಾಗುತ್ತವೆ.

ಸರ್ವ ಧರ್ಮ ಸಮನ್ವಯ, ಸಂವಿಧಾನದಲ್ಲಿ ನಂಬಿಕೆ ಇಟ್ಟಿರುವ ಸರ್ಕಾರ ನಮ್ಮದು. ಸಂವಿಧಾನ ಹೇಳುವಂತೆ ನಡೆದುಕೊಳ್ಳುತ್ತೇವೆ. ಯಾವುದೇ ತಾರತಮ್ಯ ಮಾಡುವುದಿಲ್ಲ. ಕರ್ನಾಟಕದ ಏಳು ಕೋಟಿ ಜನರ ರಕ್ಷಣೆ ಮಾಡುವ ಜವಾಬ್ದಾರಿ ನಮ್ಮದು. ಈ ಕೆಲಸವನ್ನು ತಾರತಮ್ಯವಿಲ್ಲದೆ ಮಾಡುತ್ತೇವೆ ಎಂದರು.

ಅಲ್ಪಸಂಖ್ಯಾತರು ಯಾವುದೇ ಕಾರಣಕ್ಕೂ ಭಯ, ಆತಂಕ ಪಡಬೇಕಾದ ಅಗತ್ಯವಿಲ್ಲ. ನಮ್ಮ ಸರ್ಕಾರದಲ್ಲಿ ಅಲ್ಪಸಂಖ್ಯಾತರು ಹಾಗೂ ಬಹುಸಂಖ್ಯಾತರನ್ನು ಒಂದೇ ರೀತಿಯಲ್ಲಿ ರಕ್ಷಣೆ ಮಾಡುವ ಕೆಲಸ ಮಾಡುತ್ತೇವೆ. ನಾಡಿನ ಅಭಿವೃದ್ಧಿಗೆ ಒಳ್ಳೆ ಮಳೆ, ಬೆಳೆಯಾಗಲಿ ಎಂದು ಹಾರೈಸಿದರು.

ಕಾಂಚನಜುಂಗಾ ರೈಲು ಅಪಘಾತ: ಲೋಕೋ ಪೈಲಟ್ ಸೇರಿ 10ಕ್ಕೂ ಹೆಚ್ಚು ಪ್ರಯಾಣಿಕರು ಸಾವು!

60 ಮಂದಿಗೆ ಗಾಯ



ಹೊಸದಿಲ್ಲಿ, ಜೂ.17–ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ಫನ್ಸಿಡೆವಾ ಸಮೀಪ ಕಾಂಚನಜುಂಗಾ ಎಕ್ಸ್‌ಪ್ರೆಸ್ ರೈಲು ಅಪಘಾತಕ್ಕೀಡಾಗಿದ್ದು, 10 ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ. ಇನ್ನು 60 ಮಂದಿಗೆ ಗಂಭೀರ ಗಾಯಗಳಾಗಿವೆ.

ಸೋಮವಾರ ಬೆಳಗ್ಗೆ ಈ ಘಟನೆ ನಡೆದಿದ್ದು, ನಿಲ್ದಾಣ ಸಮೀಪ ಸಿಗ್ನಲ್‌ಗಾಗಿ ಕಾಯುತ್ತಿದ್ದ ಕಾಂಚನಜುಂಗಾ ಎಕ್ಸ್‌ಪ್ರೆಸ್ ರೈಲಿಗೆ ಹಿಂದಿನಿಂದ ಗೂಡ್ಸ್ ರೈಲು ಬಂದು ಡಿಕ್ಕಿ ಹೊಡೆದಿದೆ. ಘಟನೆಯಿಂದ ರೈಲಿನ ಎರಡು ಬೋಗಿಗಳಿಗೆ ಭಾರೀ ಹಾನಿಯಾಗಿದೆ. ಪ್ರಯಾಣಿಕರ ಸಾವು–ನೋವು ಹೆಚ್ಚುವ ಸಾಧ್ಯತೆಗಳಿದ್ದು, ಸದ್ಯ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಅಪಘಾತದಲ್ಲಿ ರೈಲಿನ ಲೋಕೋ ಪೈಲಟ್ ಸೇರಿ 10ಕ್ಕೂ ಅಧಿಕ ಪ್ರಯಾಣಿಕರು ಸಾವನ್ನಪ್ಪಿದ್ದಾರೆ. 60–65 ಮಂದಿಗೆ ಗಂಭೀರ ಗಾಯವಾಗಿವೆ. ಗೂಡ್ಸ್ ರೈಲು ಕಾಂಚನಜುಂಗಾ ಎಕ್ಸ್‌ಪ್ರೆಸ್‌ಗೆ ಡಿಕ್ಕಿ ಹೊಡೆದು ಈ ಘಟನೆ ಸಂಭವಿಸಿದೆ ಎಂದು ಡಾರ್ಜಿಲಿಂಗ್ ಎಸ್‌ಪಿ ಅಭಿಷೇಕ್ ರಾಯ್ ಮಾಹಿತಿ ನೀಡಿದ್ದಾರೆ. ಗಾಯಗೊಂಡಿರುವವರನ್ನು ನ್ಯೂ ಜಲ್‌ಪೈಗುರಿ ಜಂಕ್ಷನ್ ಸಮೀಪದ ಆಸ್ಪತ್ರೆಗೆ ದಾಖಲು ಮಾಡಲಾಗುತ್ತಿದೆ.

ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ಭಾರತೀಯ ರೈಲ್ವೆ ಪ್ರಮುಖ ರೈಲು. ಪಶ್ಚಿಮ ಬಂಗಾಳವನ್ನು ಅಸ್ಸಾಂ ಮತ್ತು ತ್ರಿಪುರದೊಂದಿಗೆ ಸಂಪರ್ಕಿಸುತ್ತದೆ. ಅಗರ್ತಲಾದಿಂದ ಸೀಲ್ದಾಹ್‌ಗೆ ಪ್ರಯಾಣಿಸುತ್ತಿದ್ದು, ರಂಗಪಾಣಿ ಮತ್ತು ಚಥರ್‌ಹತ್ ನಿಲ್ದಾಣದ ಮಧ್ಯೆ ಅಪಘಾತಕ್ಕೀಡಾಗಿ ಹಳಿ ತಪ್ಪಿದೆ.

ಘಟನೆಯ ಬಗ್ಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಟ್ವೀಟರ್ (ಎಕ್ಸ್) ಜಾಲತಾಣದಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ರೈಲು ಅಪಘಾತದ ಬಗ್ಗೆ ತಿಳಿದು ಆಘಾತವಾಗಿದೆ. ಕಾಂಚನ ಜುಂಗಾ ಎಕ್ಸ್‌ಪ್ರೆಸ್‌ಗೆ ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆದಿದೆ ಎಂದು ವರದಿಯಾಗಿದೆ. ವೈದ್ಯರು, ಆಂಬ್ಯುಲೆನ್ಸ್‌ಗಳು ಮತ್ತು ವಿಪತ್ತು ರಕ್ಷಣಾ ತಂಡಗಳು ಯುದ್ಧೋಪಾದಿಯಲ್ಲಿ ಕಾರ್ಯಾಚರಣೆ ಕೈಗೊಂಡಿವೆ ಎಂದಿದ್ದಾರೆ.

ಮಾನವ ನಿರ್ಲಕ್ಷ್ಯ ಕಾರಣ?: ಮೇಲ್ನೋಟಕ್ಕೆ ಈ ಅಪಘಾತಕ್ಕೆ ಮಾನವ ದೋಷವನ್ನು ಕಾರಣವೆಂದು ಸೂಚಿಸುತ್ತದೆ. ಸಿಗ್ನಲ್ ನಿರ್ಲಕ್ಷ್ಯವಾಗಿರಬಹುದು. ರೈಲ್ವೆ ಕವಚ ಯೋಜನೆಯನ್ನು ವಿಸ್ತರಿಸುವ ಅಗತ್ಯವಿದೆ ಎಂದು ರೈಲ್ವೆ ಮಂಡಳಿಯ ಅಧ್ಯಕ್ಷ ಮತ್ತು ಸಿಇಒ ಜಯ ವರ್ಮ ಸಿನ್ಹಾ ತಿಳಿಸಿದ್ದಾರೆ.

ಮೃತರಿಗೆ ಮೋದಿ ಪರಿಹಾರ: ಪಶ್ಚಿಮ ಬಂಗಾಳದಲ್ಲಿ ಸಂಭವಿಸಿದ ರೈಲ್ವೆ ಅಪಘಾತದಲ್ಲಿ ಮೃತಪಟ್ಟ ಪ್ರತಿಯೊಬ್ಬರ ಮುಂದಿನ ಸಂಬಂಧಿಕರಿಗೆ ಪ್ರಧಾನಿ ಮೋದಿ ಅವರು ರೂ.2 ಲಕ್ಷ, ಗಾಯ ಗೊಂಡವರಿಗೆ ರೂ. 50,000 ಪರಿಹಾರವನ್ನು ನೀಡಲಾಗುವುದು ಎಂದು ಘೋಷಣೆ ಮಾಡಿದ್ದಾರೆ.

ದುರಾಡಳಿತದ ನೇರ ಪರಿಣಾಮ: ಪಶ್ಚಿಮ ಬಂಗಾಳದ ರೈಲು ಅಪಘಾತದಲ್ಲಿ ಮೃತಪಟ್ಟವರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಂತಾಪ ಸೂಚಿಸಿದ್ದಾರೆ. ಇದೇ ವೇಳೆ ಅವರು ಮೋದಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಪ್ರತಿಭಟನೆ ವೇಳೆ ಸುಸ್ತಾಗಿದ್ದ ಬಿಜೆಪಿಯ ಹಿರಿಯ ನಾಯಕ ಭಾನುಪ್ರಕಾಶ್ ನಿಧನ



ಶಿವಮೊಗ್ಗ, ಜೂ.17– ಬಿಜೆಪಿಯ ಹಿರಿಯ ನಾಯಕ, ಮಾಜಿ ಎಂಎಲ್‌ಸಿ ಎಂಬಿ ಭಾನುಪ್ರಕಾಶ್ (68) ಹೃದಯಾಘಾತದಿಂದ ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಪೆಟ್ರೋಲ್ ಬೆಲೆ ಏರಿಕೆ ವಿರೋಧಿಸಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಸುಸ್ತಾಗುತ್ತಿದೆ ಎಂದು ಹೇಳಿ ಅವರು ಕಾರಿನಲ್ಲಿ ಕುಳಿತುಕೊಂಡರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಯಿತು. ಆದರೆ ಅಲ್ಲಿ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು.

ಶಿವಮೊಗ್ಗ ತಾಲೂಕಿನ ಮತ್ತೂರು ಗ್ರಾಮದ ಎಂ.ಬಿ.ಭಾನುಪ್ರಕಾಶ್ ಬಿಜೆಪಿ ಸಂಘಟನೆಯಲ್ಲಿ ಹಲವಾರು ಹುದ್ದೆಗಳನ್ನು ನಿರ್ವಹಿಸಿದ್ದರು. ನಳೀನ್ ಕುಮಾರ್ ಕಟೀಲ್ ರಾಜ್ಯ ಬಿಜೆಪಿ ಅಧ್ಯಕ್ಷರಾಗಿದ್ದ ಸಮಯದಲ್ಲಿ 2019ರಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷರಾಗಿ ಕೂಡ ಕರ್ತವ್ಯ ನಿರ್ವಹಿಸಿದ್ದರು. ವಿಧಾನ ಪರಿಷತ್ ಸದಸ್ಯರಾಗಿಯೂ ಆಯ್ಕೆ ಯಾಗಿದ್ದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಟ್ಟಾ ಅನುಯಾಯಿಯಾಗಿದ್ದ ಭಾನುಪ್ರಕಾಶ್, ಮಾಜಿ ಸಿಎಂ ದಿ.ಬಂಗಾರಪ್ಪ ಬಿಜೆಪಿ ತೊರೆದು ಸಮಾಜವಾದಿ ಪಕ್ಷದಿಂದ ಶಿವಮೊಗ್ಗ ಲೋಕಸಭಾ ಕ್ಷೇತ್ರಕ್ಕೆ ಸ್ಪರ್ಧಿಸಿದ್ದಾಗ ಬಿಜೆಪಿಯಿಂದ ಬಂಗಾರಪ್ಪ ಎದುರು ನಿಂತಿದ್ದರು.

ಸದ್ಯಕ್ಕೆ ಬಸ್ ಟಿಕೆಟ್ ದರ ಏರಿಸಲ್ಲ

ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ




ಬೆಂಗಳೂರು: ಇಂಧನ ದರ ಏರಿಕೆ ಬೆನ್ನಲ್ಲೇ ಸರ್ಕಾರಿ ಬಸ್ ಟಿಕೆಟ್ ದರ ಹೆಚ್ಚಳ ಮಾಡಲಾಗುತ್ತದೆ ಎಂದು ಹೇಳಲಾಗುತ್ತಿತ್ತು. ಆದರೆ ಇದೀಗ ರಾಜ್ಯದಲ್ಲಿ ಸದ್ಯಕ್ಕೆ ಸರ್ಕಾರಿ ಬಸ್ ಟಿಕೆಟ್ ದರ ಹೆಚ್ಚಳ ಮಾಡಲ್ಲ. ಇಲಾಖೆಯೊಂದಿಗೆ ಚರ್ಚೆ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಗ್ಯಾರಂಟಿ ಯೋಜನೆಗಳಿಗೆ ಹಣ ನೀಡಲು ತೈಲ ಬೆಲೆ ಏರಿಕೆ ಮಾಡಿಲ್ಲ. ಬದಲಿಗೆ, ಆರ್ಥಿಕ ಮೂಲಗಳಾದ ಮದ್ಯ ಮತ್ತು ತೈಲದಿಂದ ಹೆಚ್ಚಿನ ಆದಾಯ ಬಂದರೆ, ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತದೆ ಅಂತ ತೈಲ ಬೆಲೆ ಏರಿಕೆ ಮಾಡಿದ್ದೇವೆ ಎಂದು ಹೇಳಿದರು.

ಪೆಟ್ರೋಲ್ ಹಾಗೂ ಡಿಸೇಲ್ ಮೇಲೆ ರೂ.3 ಹೆಚ್ಚಳ ಮಾಡಲಾಗಿದೆ. ಆದರೆ, ಬಿಜೆಪಿ ಸರ್ಕಾರ ಆಡಳಿತ ಇರುವ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ತೈಲ ಬೆಲೆ ಕಡಿಮೆ ಇದೆ. ನಮ್ಮ ಅಕ್ಕ–ಪಕ್ಕದ ರಾಜ್ಯದಲ್ಲಿ ತೈಲ ಬೆಲೆ ಹೆಚ್ಚಿದೆ, ನಮ್ಮಲ್ಲಿ ಅಲ್ಲಿಗಿಂತ ದರ ಕಡಿಮೆ ಇದೆ. ಬಿಜೆಪಿ ಆಡಳಿತ ಇರುವ ಮಹಾರಾಷ್ಟ್ರ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ತೈಲಬೆಲೆ ಇಲ್ಲಿಗಿಂತ ಅಧಿಕವಾಗಿದೆ. ಆದರೂ, ಬಿಜೆಪಿ ನಾಯಕರು ಇಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ನಮ್ಮ ವಿರುದ್ಧದ ಬದಲು ಬಿಜೆಪಿಯವರು ಕೇಂದ್ರದ ವಿರುದ್ಧ ಧರಣಿ ಮಾಡಬೇಕು ಎಂದರು.

ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಸಾಧನೆ



ಮೈಸೂರು, ಜು.17– ಮೈಸೂರು ಬನ್ನಿಮಂಟಪ ಸಂತ ಜೋಸೆಫ್ ಶಾಲೆಯ ಮೂರನೇ ತರಗತಿ ವಿದ್ಯಾರ್ಥಿ ಕೆ.ಯು. ಅಶ್ವಿ ಉತ್ತಪ್ಪ, ಇತ್ತೀಚೆಗೆ ಮೈಸೂರಿನ ಸ್ಪೋರ್ಟ್ಸ್ ಪೆವಿಲಿಯನ್‌ನ ಜಿಮ್ನಾಷಿಯಂ ಹಾಲ್‌ನಲ್ಲಿ ನಡೆದ ಗೋಜು ವಾರಿಯರ್ಸ್ ಕಪ್–2024, ಮುಕ್ತ ರಾಷ್ಟ್ರೀಯ ಕರಾಟೆ ಚಾಂಪಿಯನ್ ಷಿಪ್‌ನಲ್ಲಿ 8 ವರ್ಷದ ವಿಭಾಗ ಕತಾದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾಳೆ. ಈಕೆ ಮೈಸೂರು ನಾಯ್ಡುನಗರದ ಪೂಜಾ ಉತ್ತಪ್ಪ ಹಾಗೂ ಹರೀಶ್ ಉತ್ತಪ್ಪ ದಂಪತಿ ಪುತ್ರಿ. ಈಕೆ ಮೈಸೂರಿನ ಎಸ್‌ಎಸ್‌ಜಿಆರ್ ಕರಾಟೆ ಮತ್ತು ಸ್ಪೋರ್ಟ್ಸ್ ಅಸೋಸಿಯೇಷನ್‌ನ ಲೋಕೇಶ್‌ರಿಂದ ತರಬೇತಿ ಪಡೆದಿದ್ದಾಳೆ.

ಫುಟ್‌ಪಾತಲ್ಲಿ ಮಲಗಿದ್ದ ಕಾರ್ಮಿಕರ ಮೇಲೆ ಹರಿದ ಕಾರು; ಇಬ್ಬರು ಸಾವು

ನಾಗ್ಪುರ (ಮಹಾರಾಷ್ಟ್ರ): ಪಾದಚಾರಿ ಮಾರ್ಗದಲ್ಲಿ ಮಲಗಿದ್ದ 9 ಕಾರ್ಮಿಕರ ಮೇಲೆ ಅತಿವೇಗದಿಂದ ಬಂದ ಕಾರೊಂದು ಹರಿದು, ಇಬ್ಬರು ಮೃತಪಟ್ಟ ಘಟನೆ ಮಹಾರಾಷ್ಟ್ರದ ವಾಥೋಡಾ ಪೊಲೀಸ್ ಠಾಣಾ ವ್ಯಾಪ್ತಿಯ ದಿಘೋರಿ ಚೌಕ್ ಸಮೀಪ ನಡೆದಿದೆ.

ಭಾನುವಾರ ತಡರಾತ್ರಿ 12 ಗಂಟೆಗೆ ಸುಮಾರಿಗೆ ಘಟನೆ ನಡೆದಿದ್ದು, ರಾಜಸ್ಥಾನ ಮೂಲದ 9 ಕಾರ್ಮಿಕರು ಪಾದಚಾರಿ ಮಾರ್ಗದಲ್ಲಿ ಮಲಗಿದ್ದಾಗ, ಬರ್ತಡೇ ಪಾರ್ಟಿಯಿಂದ ಹಿಂದಿರುಗುತ್ತಿದ್ದ ಆರು ಯುವಕರು ಇವರ ಮೇಲೆ ಕಾರು ಚಲಾಯಿಸಿದ್ದಾರೆ. ಇಬ್ಬರು ಸ್ಥಳದಲ್ಲೇ ಮೃತಪಟ್ಟರೆ, ಉಳಿದ ಏಳು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ಅಪಘಾತಕ್ಕೊಳಗಾದವರಲ್ಲಿ ಮಹಿಳೆಯರು, ಮಕ್ಕಳು ಸೇರಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ದಿನಗೂಲಿ ಕಾರ್ಮಿಕರಾದ ಇವರು ಬೀದಿಗಳಲ್ಲಿ ಆಟಿಕೆಗಳನ್ನು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದರು ಎಂದು ತಿಳಿದುಬಂದಿದೆ. ಬರ್ತಡೇ ಪಾರ್ಟಿಯಿಂದ ಹಿಂದಿರುಗುತ್ತಿದ್ದ 6 ಯುವಕರು ಫುಟ್‌ಪಾತ್‌ನಲ್ಲಿ ಮಲಗಿದ್ದ ಒಂಬತ್ತು ರಾಜಸ್ಥಾನಿ ಕಾರ್ಮಿಕರ ಮೇಲೆ ತಮ್ಮ ಕಾರನ್ನು ಹರಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಬಂಧಿಸಿದ್ದು, ಒಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ ಎಂದು ವಾಥೋಡಾ ಪೊಲೀಸ್ ಠಾಣಾ ಅಧಿಕಾರಿ ವಿಜಯ್ ದಿಘೆ ತಿಳಿಸಿದ್ದಾರೆ.ಇತ್ತೀಚೆಗೆ ಪುಣೆಯಲ್ಲಿ ಇದೇ ರೀತಿಯ ಘಟನೆ ನಡೆದಿದ್ದು, ಪಾರ್ಟಿ ಮುಗಿಸಿ ಪೋಶೆ ಕಾರಿನಲ್ಲಿ ಹಿಂದಿರುಗುತ್ತಿದ್ದ ಬಾಲಕನೊಬ್ಬ ಬೈಕ್‌ಗೆ ಡಿಕ್ಕಿ ಹೊಡೆದಿದ್ದ. ಪರಿಣಾಮ ಇಬ್ಬರು ಟೆಕಿಗಳು ಸ್ಥಳದಲ್ಲೇ ಮೃತಪಟ್ಟಿದ್ದರು. ತನಿಖೆಯಲ್ಲಿ ಬಾಲಕ ಮದ್ಯ ಸೇವಿಸಿದ್ದನೆಂದು ತಿಳಿದುಬಂದಿತ್ತು.

ಪಿಜಿ ಸಿಇಟಿ ಅರ್ಜಿ ಸಲ್ಲಿಸಲು ಜೂ.20ರವರೆಗೂ ಅವಕಾಶ

ಬೆಂಗಳೂರು, ಜೂ.17– 2024–25ನೇ ಸಾಲಿನ ಸ್ನಾತಕೋತ್ತರ ಕೋರ್ಸ್‌ಗಳಾದ ಎಂಬಿಎ, ಎಂಸಿಎ., ಎಂ.ಟೆಕ್, ಎಂಇ., ಎಂ.ಆರ್ಕಿಟೆಕ್ಚರ್ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಕೊನೆ ದಿನಾಂಕವನ್ನು ಜೂನ್ 20ರವರೆಗೆ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಾಹಿತಿ ನೀಡಿದ್ದಾರೆ. ಶುಲ್ಕ ಪಾವತಿಸಲು ಜೂ.21ರವರೆಗೆ ಅವಕಾಶ ನೀಡಲಾಗಿದೆ. ಈ ಹಿಂದೆ ಪಿಜಿ ಸಿಇಟಿ ಪರೀಕ್ಷೆಗೆ ಮೇ 27ರಿಂದ ಜೂನ್ 17ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಆದರೆ ಈಗ ಮತ್ತೆ ಮೂರು ದಿನ ವಿಸ್ತರಣೆ ಮಾಡಲಾಗಿದೆ.

ಗೇಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ಪಿಜಿ ಸಿಇಟಿ–24ಗೆ ಹಾಜರಾಗುವ ಅಗತ್ಯ ಇಲ್ಲ. ಆದರೆ, ಅಂತಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ, ಪ್ರವೇಶಕ್ಕೆ ಅರ್ಹರಾಗಬೇಕಾಗುತ್ತದೆ. ಗೇಟ್ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆಯೇ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುತ್ತದೆ.

2024–25ನೇ ಸಾಲಿನ ಸ್ನಾತಕೋತ್ತರ ಕೋರ್ಸ್‌ಗಳ (ಎಂಬಿಎ, ಎಂಸಿಎ., ಎಂ.ಟೆಕ್, ಎಂಇ., ಎಂ.ಆರ್ಕಿಟೆಕ್ಚರ್) ಪ್ರವೇಶಕ್ಕೆ ಜುಲೈ 13 ಮತ್ತು 14ರಂದು ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ (ಪಿಜಿ ಸಿಇಟಿ–24) ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಿರ್ಧರಿಸಿದೆ. ಎಂಇ, ಎಂ.ಟೆಕ್, ಎಂ.ಆರ್ಕಿಟೆಕ್ಚರ್ ಕೋರ್ಸ್ ಪ್ರವೇಶ ಪರೀಕ್ಷೆ ಜುಲೈ 13ರಂದು ಹಾಗೂ ಎಂಸಿಎ ಮತ್ತು ಎಂಬಿಎ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಜುಲೈ 14ರಂದು ನಡೆಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಈಗಾಗಲೇ ತಿಳಿಸಿದ್ದಾರೆ.

ಕಾಂಚನಜುಂಗಾ ರೈಲು ಅಪಘಾತ: ಸಿಗ್ನಲ್ ದಾಟಲು ಅನುಮತಿಸಿದ್ದ ಸ್ಟೇಷನ್ ಮಾಸ್ಟರ್

ನವದೆಹಲಿ: ಹಲವರ ಸಾವಿಗೆ ಕಾರಣವಾಗಿರುವ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ಹಾಗೂ ಗೂಡ್ಸ್ ರೈಲು ನಡುವಿನ ಅಪಘಾತದಲ್ಲಿ ಕೆಂಪು ಸಿಗ್ನಲ್ ದೀಪವನ್ನು ದಾಟಲು ಸ್ಟೇಷನ್ ಮಾಸ್ಟರ್ ಅನುಮತಿ ನೀಡಿದ್ದರು ಎಂಬ ಅಂಶ ಆಂತರಿಕ ದಾಖಲೆಗಳಿಂದ ತಿಳಿದುಬಂದಿರುವುದಾಗಿ ವರದಿಯಾಗಿದೆ. ಕೆಂಪು ದೀಪವನ್ನು ದಾಟಲು ಲೋಕೊ ಪೈಲೆಟ್‌ಗೆ ರಾಣಿಪತ್ರಾ ಸ್ಟೇಷನ್ ಮಾಸ್ಟರ್ ಅನುಮತಿಸಿದ್ದಾರೆ ಎಂದು ರೈಲ್ವೆ ಮೂಲಗಳು ತಿಳಿಸಿವೆ.

ಸ್ವಯಂ ಚಾಲಿತ ಸಿಗ್ನಲ್ ವ್ಯವಸ್ಥೆ ವಿಫಲಗೊಂಡಿದೆ. ಹೀಗಾಗಿ ರಾಣಿಪತ್ರಾ ರೈಲ್ವೆ ನಿಲ್ದಾಣದಿಂದ ಚತ್ರಹಾಟ್ ಜಂಕ್ಷನ್‌ವರೆಗೆ ಎಲ್ಲೆಲ್ಲಿ ಇಂಥ ಸ್ವಯಂ ಚಾಲಿತ ಸಿಗ್ನಲ್ ಇವೆಯೋ, ಅವುಗಳನ್ನು ದಾಟಬಹುದು ಎಂದು ಅನುಮತಿಸಲಾಗಿತ್ತು. ಈ ಎರಡು ಜಂಕ್ಷನ್‌ಗಳ ನಡುವೆ ಒಟ್ಟು 9 ಸಿಗ್ನಲ್‌ಗಳಿವೆ. ಈ ಎಲ್ಲಾ ಸಿಗ್ನಲ್‌ಗಳಲ್ಲಿ ಕೆಂಪು, ಹಳದಿ ಅಥವಾ 2 ಹಳದಿ ದೀಪಗಳು ಇದ್ದರೂ ವೇಗವಾಗಿಯೇ ದಾಟಲು ಅನುಮತಿಸಲಾಗಿತ್ತು ಎಂದೆನ್ನಲಾಗಿದೆ. ಯಾವುದೇ ಮಾರ್ಗದಲ್ಲಿ ಯಾವ ರೀತಿಯ ತಡೆಯೂ ಇಲ್ಲದಿದ್ದಲ್ಲಿ ರೈಲುಗಳಿಗೆ ಟಿಎ 912 ನೀಡಲಾಗುತ್ತದೆ. ಇದರಿಂದ ಯಾವ ಬಣ್ಣದ ಸಿಗ್ನಲ್ ದೀಪವಿದ್ದರೂ, ಅದನ್ನು ದಾಟಲು ಅನುಮತಿ ಸಿಕ್ಕಂತೆ. ಆದರೆ, ಸ್ಟೇಷನ್ ಮಾಸ್ಟರ್ ಇದನ್ನು ಹೇಗೆ ನೀಡಿದರು ಎಂಬುದರ ಕುರಿತು ತನಿಖೆಯಾಗಬೇಕು. ಈ ನಿಲ್ದಾಣದಿಂದ ಗೂಡ್ಸ್ ರೈಲಿಗಿಂತ ಹಿಂದೆ ಹೋಗಿದ್ದ ರೈಲು ಮುಂದಿನ ಸ್ಟೇಷನ್ ದಾಟಿದೆ ಎಂದು ಭಾವಿಸಿ ನೀಡಿದರೇ ಎಂಬುದೂ ತನಿಖೆಯಿಂದ ತಿಳಿಯಬೇಕಿದೆ ಎಂದು ಮೂಲಗಳು ಹೇಳಿವೆ.

ಈ ಎರಡು ನಿಲ್ದಾಣಗಳ ನಡುವೆ ಸೋಮವಾರ ಬೆಳಿಗ್ಗೆ 5.50ರಿಂದ ಸಿಗ್ನಲ್ ದೀಪದಲ್ಲಿ ಸಮಸ್ಯೆ ಇತ್ತು. ಇದರ ಮಾಹಿತಿ ಇಲ್ಲದ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲು ಎಲ್ಲಾ ಸಿಗ್ನಲ್ ದೀಪದಲ್ಲೂ ನಿಲ್ಲಿಸಿಕೊಂಡು ಹೋಗಿದೆ. 8.37ಕ್ಕೆ ಹೊರಟ ರೈಲಿಗೆ ಟಿಎ 912 ನೀಡಲಾಗಿತ್ತು. 8.42ಕ್ಕೆ ರಂಗಾಪಾನಿಯಿಂದ ಹೊರಟ ಗೂಡ್ಸ್ ರೈಲು ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲಿಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಇದರಿಂದಾಗಿ ರೈಲು ಹಳಿ ತಪ್ಪಿದೆ.

ಸಿಗ್ನಲ್ ದೀಪವನ್ನು ಪಾಲಿಸದಿರುವುದೇ ಈ ಅಪಘಾತಕ್ಕೆ ಕಾರಣ ಎಂದು ರೈಲ್ವೆ ಮಂಡಳಿ ಈ ಮೊದಲು ಹೇಳಿತ್ತು. 'ಅಪಘಾದಲ್ಲಿ ಒಟ್ಟು 9 ಜನ ಮೃತಪಟ್ಟು, ಮಕ್ಕಳು ಸೇರಿದಂತೆ 41 ಜನ ಗಂಭೀರವಾಗಿ ಗಾಯಗೊಂಡಿದ್ದಾರೆ' ಎಂದು ರೈಲ್ವೆ ಸಚಿವಾಲಯ ಹೇಳಿದೆ.

ನಕ್ಕರೆ ಅದೇ ಸ್ವರ್ಗ

ಗುಂಡ : ಬೊಗಳೋ ನಾಯಿ ಕಚ್ಚೋದಿಲ್ಲ ಯಾಕೆ?
ಸಂತು : ಯಾಕೆಂದರೆ, ಒಂದೇ ಸಮಯದಲ್ಲಿ ಎರಡು ಕೆಲಸ ಮಾಡೋಕೆ ಆಗೋದಿಲ್ಲ ಅದಕ್ಕೆ.

ಮೈಸೂರು ಮಿತ್ರ
ಮಂಗಳವಾರ, 18 ಜೂನ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಹಣ ಮನುಷ್ಯನನ್ನು ಬದಲಿಸುವುದಿಲ್ಲ. ಮನುಷ್ಯನ ನಿಜ ಸ್ವರೂಪವನ್ನು ಹೊರಗೆ ಹಾಕುತ್ತದೆ ಅಷ್ಟೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಲಿಯ ಬಣ್ಣವನ್ನು ಮೆಚ್ಚಿ, ನರಿ ತನ್ನ ಕೂದಲನ್ನು ಭಸ್ಮ ಮಾಡಿಕೊಂಡಂತೆ.

ನಿಮ್ಮ ಪತ್ರಗಳು

■ ರೇಣುಕಾಸ್ವಾಮಿ ಕೊಲೆ ಪ್ರಕರಣ : ರಾಜ್ಯದ ಪೊಲೀಸರ ತನಿಖಾ ಕಾರ್ಯ ಶ್ಲಾಘನೀಯ!

ಮಾನ್ಯರೇ,

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿಗಳನ್ನು ಪತ್ತೆ ಹಚ್ಚಲು ಪ್ರಾಮಾಣಿಕವಾದ ತನಿಖಾ ಹಾದಿಯನ್ನು ಹಿಡಿದು ಹೊರಟ ಬೆಂಗಳೂರಿನ ಪೊಲೀಸರು, ಕೊನೆಗೆ ಕೈಗೆ ಬೇಡಿ ಹಾಕಿದ್ದು, ಚಲನಚಿತ್ರ ನಟ ದರ್ಶನ್‌ಗೆ, ಪವಿತ್ರ ಗೌಡ ಎಂಬ ದರ್ಶನ್‌ನ ಆಪ್ತೆಗೆ. ಅಶ್ಲೀಲ ಸಂದೇಶವೊಂದನ್ನು ಕಳುಹಿಸಿದ ಎಂಬ ಕಾರಣಕ್ಕೆ ರೇಣುಕಾಸ್ವಾಮಿ ಎಂಬ ತನ್ನ ಅಭಿಮಾನಿಯನ್ನೇ ದರ್ಶನ್ ಸೂಚನೆ ಮೇರೆಗೆ ಆತನ ಸಹಚರರು ಅಪಹರಣ ಮಾಡಿ ಚಿತ್ರದುರ್ಗದಿಂದ ಬೆಂಗಳೂರಿಗೆ ಕರೆತಂದದ್ದು. ನಂತರ ದರ್ಶನ್, ಅವನ ಸಹಚರರು ಸೇರಿಕೊಂಡು ಜೂನ್ 8 ರಂದು ಚಿತ್ರಹಿಂಸೆ ನೀಡಿ ಹತ್ಯೆ ಮಾಡಿರುವುದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಹಾಗೇ ಇತ್ತ ಎಷ್ಟೇ ದೊಡ್ಡ ಮಟ್ಟದ ನಟನಾದರೂ, ರಾಜಕೀಯದ ಪ್ರಬಲ ಶಕ್ತಿಗಳ ಬಲ ಇದ್ದರೂ ಮತ್ತು ಕೆಲ ಪ್ರಭಾವಿಗಳ ಒತ್ತಡ ಇದ್ದರೂ ಬೆಂಗಳೂರಿನ ಪೊಲೀಸರು ಇದಾವುದನ್ನು ಲೆಕ್ಕಿಸದೇ ಬಂಧಿಸಿ ನ್ಯಾಯಾಧೀಶರ ಮುಂದೆ ಕೈಕಟ್ಟಿ ನಿಲ್ಲುವ ಹಾಗೇ ಮಾಡಿ ಮತ್ತೆ ವಶಕ್ಕೆ ಪಡೆದು ಸಂಪೂರ್ಣವಾಗಿ ಕೊಲೆ ಆರೋಪಿಗಳ ತನಿಖೆ ಮುಂದುವರಿಸುವ ದಿಟ್ಟ ಹೆಜ್ಜೆ ಇಟ್ಟಿರುವುದು ನಿಜಕ್ಕೂ ಅಭಿನಂದನೀಯ. ಪೊಲೀಸರ ಈ ಪ್ರಾಮಾಣಿಕವಾದ ಕೆಲಸದಿಂದ ದರ್ಶನ್ ಮತ್ತು ಸಹಚರರಿಂದ ಕೊಲೆಯಾದ ಅಮಾಯಕ ರೇಣುಕಾಸ್ವಾಮಿಯ ಕುಟುಂಬಕ್ಕೆ ನ್ಯಾಯ ಸಿಗುವ ಭರವಸೆ ಮೂಡಿದೆ. ಅಲ್ಲದೆ ಈ ಆರೋಪಿಗಳಿಗೆ ಕಠಿಣ ಶಿಕ್ಷೆ ಆಗುವ ನಂಬಿಕೆಯು ಸಹ ನಮ್ಮ ಪೊಲೀಸರ ಈ ಕಾರ್ಯ ದಕ್ಷತೆಯಿಂದ ಹುಸಿಯಾಗದೇ ಉಳಿಯಲಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ.


■ ಶಕ್ತಿ ಯೋಜನೆಯಿಂದ ನಿಶ್ಯಕ್ತವಾದ ಸರ್ಕಾರ

ಮಾನ್ಯರೇ,

ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಹಪಾಹಪಿಸಿದ್ದ ಕಾಂಗ್ರೆಸ್ ಪಕ್ಷ, ಹಲವಾರು ಆಮಿಷಗಳನ್ನು ಶಕ್ತಿ ಯೋಜನೆಯ ಮೂಲಕ ನೀಡಿದ್ದು, ಅಧಿಕಾರಕ್ಕೆ ಬಂದ ಒಂದೇ ವರುಷದಲ್ಲಿ ನಿಶ್ಯಕ್ತವಾಗಿದೆ. ಬಿಟ್ಟಿ ಭಾಗ್ಯಗಳನ್ನು ಸರಿದೂಗಿಸಲು ಸರಕಾರದ ಬೊಕ್ಕಸಕ್ಕೆ ಮದ್ಯದ ದರ, ವಿದ್ಯುತ್ ದರ ಹೆಚ್ಚಿಸಿದ ಸರ್ಕಾರ, ಇದೀಗ ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಹೆಚ್ಚಿಸಿ ಜನರಿಗೆ ದರ ಹೆಚ್ಚಳದ ಗದಾಪ್ರಹಾರ ಮಾಡಿದೆ. ಪೆಟ್ರೋಲ್, ಡೀಸೆಲ್ ದರ ಹೆಚ್ಚಿದಲ್ಲಿ ಸಾರಿಗೆ ಬಸ್ ದರ, ಕ್ಯಾಬ್, ಆಟೋ ಹೀಗೆ ಇವುಗಳ ದರವೂ ಹೆಚ್ಚುತ್ತವೆ. ನಂತರದಲ್ಲಿ ಹಾಲಿನ ಸಾಗಾಣಿಕೆ ದರ ಎಂದು ಹಾಲು, ತರಕಾರಿ ದರ ಹೀಗೆ ಎಲ್ಲವೂ ದುಬಾರಿಯಾಗಲಿದೆ. ಒಟ್ಟಿನಲ್ಲಿ ಒಂದು ವರ್ಗದ ಮತದಾರ ಬಂಧುಗಳನ್ನು ಗುರಿಯಾಗಿಸಿ ನೀಡಿದ್ದ ಶಕ್ತಿ ಯೋಜನೆಯ ಬಿಟ್ಟಿ ಭಾಗ್ಯಗಳು ನಿಶ್ಯಕ್ತವಾಗುತ್ತಿದ್ದು, ರಾಜ್ಯದ ಜನರು ಇದೀಗ ಪರಿತಪಿಸುವಂತಿದೆ. ಬಹುಶಃ ರಾಜ್ಯದ ಮತದಾರ ತಮ್ಮ ಕೈ ಹಿಡಿಯದಿದ್ದಕ್ಕೆ ಪರೋಕ್ಷವಾಗಿ ನೀಡಿದ ಶಿಕ್ಷೆ ಇದಾಗಿದೆ ಎಂದರೆ ತಪ್ಪಾಗುವುದಿಲ್ಲ. ಅಲ್ಲದೆ ಬಿಟ್ಟಿ ಭಾಗ್ಯಗಳು ಕೆಲವೇ ದಿನಗಳಲ್ಲಿ ನೇಪಥ್ಯಕ್ಕೆ ಸರಿದ ನಂತರ, ಸರ್ಕಾರದ ನಿಜ ಬಣ್ಣ ತಿಳಿಯಲಿದೆ.

–ವಿಜಯ್ ಹೆಮ್ಮಿಗೆ, ಮೈಸೂರು

■ ಲೋಕಾಯುಕ್ತ ಕಚೇರಿ ಬಳಿ ಎರಡು ವೃತ್ತಗಳ ಕಿರಿಕಿರಿ



ಮಾನ್ಯರೆ,

ಮೈಸೂರಿನ ಚಾಮುಂಡಿ ಅತಿಥಿಗೃಹದ ಹಿಂಭಾಗದ ಲೋಕಾಯುಕ್ತ ಕಚೇರಿ ವೃತ್ತದಲ್ಲಿ ಯಾವುದೋ ಉದ್ದೇಶದಿಂದ ಹಳ್ಳ ತೋಡಿ ಸುತ್ತಲೂ ಬ್ಯಾರಿಕೇಡ್ ಹಾಕಲಾಗಿದೆ. ಹೋಗಲಿ ಬೇಗ ಕೆಲಸ ಮುಗಿಸುವ ಕನಿಷ್ಠ ನಾಗರಿಕ ಕಳಕಳಿ ಇಲ್ಲದಿರುವುದು ಅತ್ಯಂತ ವಿಷಾದಕಾರಿ ಸಂಗತಿ. ಸನಿಹದಲ್ಲೇ ದೇವರಾಜ ಪೊಲೀಸ್ ಠಾಣೆ, ವಾಣಿಜ್ಯ ತೆರಿಗೆ ಇಲಾಖೆ, ನ್ಯಾಯಾಧೀಶರ ಅತಿಥಿಗೃಹ, ಮಸೀದಿ ಇದೆ. ಸಾವಿರಾರು ವಾಹನಗಳು ನಿತ್ಯವೂ ಇಲ್ಲಿ ಸಂಚರಿಸುತ್ತವೆ. ಜನಜಂಗುಳಿ ಇರುವ ರಸ್ತೆ ಇದು. ಜೊತೆಗೆ ಬೆಳಗ್ಗೆ ಹಾಗೂ ಸಂಜೆ ವೇಳೆಯಲ್ಲಿ ಶಾಲಾ ಮಕ್ಕಳ ವಾಹನಗಳು ಹಾಗೂ ಶುಕ್ರವಾರದಂದು ವೃತ್ತದಲ್ಲಿ ಇರುವ ಮಸೀದಿಯ ಧಾರ್ಮಿಕ ಕಾರ್ಯದ ದಿನದಲ್ಲಂತೂ ಟ್ರಾಫಿಕ್ ಜಾಮ್. ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಇತ್ತ ಗಮನಹರಿಸಿ ಹಳ್ಳ ತೋಡಿ ಬ್ಯಾರಿಕೇಡ್ ಹಾಕಿರುವಲ್ಲಿ ಆಗಬೇಕಾದ ಕೆಲಸವನ್ನು ಶೀಘ್ರವಾಗಿ ಮಾಡಿ, ಆ ಮೂಲಕ ಜನರಿಗೆ ಕಿರಿಕಿರಿ ತಪ್ಪಿಸಲಿ.

–ಪಡುವಾರಹಳ್ಳಿ ಎಂ ರಾಮಕೃಷ್ಣ, ವಕೀಲರು, ಮೈಸೂರು.

■ ವಾಹನ ಸವಾರರಿಗೆ ತೈಲ ದರ ಹೆಚ್ಚಳದ ಬರೆ

ಮಾನ್ಯರೆ,

ಲೋಕಸಭಾ ಚುನಾವಣೆ ಫಲಿತಾಂಶ ಪ್ರಕಟವಾದ ಕೆಲವೇ ದಿನಗಳಲ್ಲಿ ರಾಜ್ಯ ಸರ್ಕಾರ ಜನರಿಗೆ ತೈಲ ಬೆಲೆ ಏರಿಕೆ ಮಾಡಿ, ಬರೆ ಎಳೆದಿದೆ. ಸಾಮಾನ್ಯವಾಗಿ ದ್ವಿಚಕ್ರ ವಾಹನ ಹೊಂದಿರುವವರು ಶ್ರಮಜೀವಿಗಳು ಹಾಗೂ ಮಧ್ಯಮ ವರ್ಗದ ಜನರು. ದುಡಿಯುವ ಅಸಂಘಟಿತ ಕೂಲಿ ಕಾರ್ಮಿಕರು ತಮ್ಮ ದಿನನಿತ್ಯ ದುಡಿಮೆಗಾಗಿ ಏಳರಿಂದ ಹತ್ತು ಕಿಲೋಮೀಟರ್‌ಗಳಷ್ಟು ದೂರ ದ್ವಿಚಕ್ರ ವಾಹನಗಳ ಮೂಲಕ ಸಾಗಬೇಕಾಗುತ್ತದೆ. ಹೀಗೆ ಹೋಗುವ ದುಡಿಯುವ ವರ್ಗಕ್ಕೆ ಚುನಾವಣೆ ಮುಗಿದ ಬೆನ್ನಲ್ಲೇ ರಾಜ್ಯ ಸರ್ಕಾರ ಪೆಟ್ರೋಲ್ ದರವನ್ನು ಹೆಚ್ಚಿಸುವುದರ ಮೂಲಕ ಕೂಲಿ ಕಾರ್ಮಿಕರ ಜೇಬಿಗೆ ಕತ್ತರಿ ಹಾಕಿ ಅವರು ಮತ್ತಷ್ಟು ಸಂಕಷ್ಟ ಪರಿಸ್ಥಿತಿ ಎದುರಿಸುವಂತೆ ಮಾಡಿದೆ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಸ್ಫೂರ್ತಿ ಸೆಲೆ ಸ್ವಾಮಿ ವಿವೇಕಾನಂದ

ಸನ್ಯಾಸಿ ಮತ್ತು ಸನ್ಯಾಸ ಎಂಬ ಪದಗಳಿಗೆ ಕಳಸಪ್ರಾಯವಾಗಿ ನಿಲ್ಲುವ ಏಕೈಕ ವ್ಯಕ್ತಿತ್ವ ಎಂದರೆ ಅದು ಸ್ವಾಮಿ ವಿವೇಕಾನಂದರು. ಇವರು ಕೇವಲ ಒಬ್ಬ ವ್ಯಕ್ತಿ ಅಲ್ಲ, ಅವರು ಒಂದು ಮೇರು ಶಕ್ತಿ. ಅಷ್ಟೇ ಅಲ್ಲ ಎಂತಹ ಜಡ್ಡುಗಟ್ಟಿದ ಕಲ್ಲು ಮನಸ್ಸುಗಳನ್ನು ಜಾಗೃತಗೊಳಿಸುವ ಸ್ಫೂರ್ತಿಯ ಚೈತನ್ಯದ ಚಿಲುಮೆ. ಸ್ವಾಮಿ ವಿವೇಕಾನಂದ ಈ ಒಂದು ಹೆಸರೇ ಸಾಕು ಎಂತಹ ಅಶಕ್ತನಲ್ಲೂ ಪುಟಿದೇಳುವಂತಹ ಚೈತನ್ಯವನ್ನು ತಂದೊಡ್ಡುತ್ತದೆ. ಅವರ ಒಂದೊಂದು ಮಾತು ಗಾಢ ಪರಿಣಾಮವನ್ನು ಬೀರುತ್ತದೆ. ಬದುಕು, ಬಡತನ, ಧರ್ಮ, ಮೌಲ್ಯ, ಪ್ರಾಮಾಣಿಕತೆ, ದೇಶಪ್ರೇಮ ಹೀಗೆ ಪ್ರತಿಯೊಂದು ವಿಷಯದ ಬಗ್ಗೆಯೂ ಸ್ವಾಮೀಜಿ ಹೇಳಿರುವ ವಿಚಾರಗಳು ಅನಕರಣೀಯ, ಅನನ್ಯವಾದವುಗಳು.

*****

ಜೀವನ ಎಂದರೆ ಅದೊಂದು ಅವಿರತ ಹೋರಾಟ – ಪರಿಸರ ಪರಿಸ್ಥಿತಿಗಳು ಮನುಷ್ಯನನ್ನು ಕೆಳಕ್ಕೆ ಒತ್ತುತ್ತಲೇ ಇರುತ್ತವೆ– ಗುರುತ್ವಾಕರ್ಷಣೆಯು ವಸ್ತುಗಳನ್ನು ಕೆಳಕ್ಕೆಳೆಯುವಂತೆ. ಇವುಗಳನ್ನು ಎದುರಿಸಿ ನಿಂತು ಹೋರಾಡುವುದೇ ಜೀವನ. ಜೀವನ ಎಂದ ಮೇಲೆ ಪ್ರತಿ ದಿನ, ಅನುಕ್ಷಣವೂ ಅವಿರತವಾಗಿ ಹೋರಾಟವನ್ನು ನಡೆಸಲೇ ಬೇಕಾಗಿರುತ್ತದೆ. ಕೆಲವೊಮ್ಮೆ ಅಂದುಕೊಂಡ ಹಾಗೆ ಏನು ನಡೆಯದೆ, ನಿರೀಕ್ಷಿಸದ ಘಟನೆಗಳು ನಡೆದಾಗಲೂ ಅದರ ಬಗ್ಗೆಯೇ ಚಿಂತಿಸದೆ ಕೈಕಟ್ಟಿ ಕೂರಬಾರದು. ಹೇಗೆ ಒಂದು ಚೆಂಡನ್ನು ಮೇಲಕ್ಕೆ ಎಸೆದಾಗ ಅದು ಭೂಮಿಯ ಗುರುತ್ವಾಕರ್ಷಣೆ ಕಾರಣದಿಂದ ನೆಲಕ್ಕೆ ಬೀಳುವುದೋ ಹಾಗೆಯೇ ಪರಿಸ್ಥಿತಿ, ಸಂದರ್ಭಗಳು ಮನುಷ್ಯನನ್ನು ಕುಗ್ಗಿಸುವ ಪ್ರಯತ್ನವನ್ನು ಮಾಡುತ್ತಲೇ ಇರುತ್ತದೆ. ಇವುಗಳನ್ನು ಎದುರಿಸಿ ಧೈರ್ಯದಿಂದ ಮುನ್ನಡೆದಾಗ ಮಾತ್ರ ಜೀವನಸಾಗಲು ಸಾಧ್ಯ. ಕಷ್ಟಗಳಿಗೆ ಬೆನ್ನು ತೋರಿಸದೆ, ನಿಂದನೆಯ ಮಾತುಗಳಿಗೆ ತಲೆಕೆಡಿಸಿಕೊಳ್ಳದೆ ಏನೇ ಬಂದರೂ ಕೆಚ್ಚೆದೆಯಿಂದ ನಿಂತಾಗ ಮಾತ್ರ ಏನಾದರೂ ಸಾಧನೆ ಮಾಡಲು ಸಾಧ್ಯ. ಅಂತಹ ದೃಢತೆ ನಮ್ಮಲ್ಲಿರಬೇಕೆಂಬ ಕಾರಣದಿಂದಾ ಗಿಂಯೇ ಜೀವನ ಎಂದರೆ ಅದು ಅವಿರತ ಹೋರಾಟ ಎಂದು ಹೇಳಿದ್ದಾರೆ.

*****

ಮನುಷ್ಯನಿಗೆ ತೀವ್ರ ಹಂಬಲವೊಂದಿದ್ದರೆ ಏನನ್ನಾದರೂ ಸಾಧಿಸಬಹುದು–ಬೇಕಾದರೆ ಪರ್ವತಗಳನ್ನೇ ಕುಟ್ಟಿ ಪುಡಿ ಪುಡಿ ಮಾಡಿಬಿಡಬಹುದು. ಸಾಧಿಸುವ ಛಲ, ಹಠ ಇದ್ದರೆ ಮನುಷ್ಯ ಏನು ಬೇಕಾದರೂ ಸಾಧನೆ ಮಾಡಬಲ್ಲ. ಸಾಧನೆ ಮಾಡಲು ಮೊದಲು ಬೇಕಾಗಿರುವುದು ಹಂಬಲ. ಆ ಹಂಬಲ ತೀವ್ರವಾಗಿದ್ದರೆ ಖಂಡಿತವಾಗಿಯು ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಶಕ್ತಿ ಮನುಷ್ಯರಲ್ಲಿ ಅಡಗಿರುತ್ತದೆ. ನಮ್ಮಲ್ಲಿ ಬಹುತೇಕರಿಗೆ ಕೆಲಸ ಆರಂಭಿಸುವಾಗ ಇರುವ ಹುಮ್ಮಸ್ಸು ನಂತರ ಇರುವುದಿಲ್ಲ. ಹೀಗಾದಾಗ ಏನೂ ಸಾಧಿಸಲಾಗದು. ಸ್ವಾಮೀಜಿ ಹೇಳಿರುವಂತೆ ಬೇಕಾದರೆ ಪರ್ವತಗಳನ್ನ ಕುಟ್ಟಿ ಪುಡಿ, ಪುಡಿ ಮಾಡಿಬಿಡಬಹುದು. ಯಾರಾದರೂ ಇದು ಎಲ್ಲಾದರೂ ಸಾಧ್ಯವೇ ಎಂದು ಅನುಮಾನಿಸಿದರೆ ಅಂತವರು ತನ್ನ ಮಡದಿಯ ಸಾವಿಗೆ ಕಾರಣವಾದ ಬೆಟ್ಟವನ್ನು ಕೊರೆದು ತಮ್ಮ ಹಳ್ಳಿಯ ಜನರಿಗೆ ದಾರಿ ಮಾಡಿಕೊಟ್ಟ ಬಿಹಾರದ ದಶರಥ್ ಮಾಂಝಿಯ ಕಥೆಯನ್ನು, ಕೃತಕ ಕಾಲಿನ ಮೂಲಕ ಅತೀ ಎತ್ತರವಾದ ಶಿಖರ ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ ಮೊದಲ ಅಂಗವಿಕಲ ಮಹಿಳೆ ಅರುಣಿಮಾ ಸಿನ್ಹಾ ಅವರ ಜೀವನದ ಪ್ರಸಂಗಗಳನ್ನು ತಿಳಿದರೆ ಮನುಷ್ಯನಿಗೆ ಅಸಾಧ್ಯವಾದುದು ಯಾವುದು ಇಲ್ಲ ಎಂಬುದನ್ನು ತಿಳಿಯುವುದರ ಜೊತೆಗೆ ತೀವ್ರವಾದ ಹಂಬಲ ಏನು ಬೇಕಾದರೂ ಸಾಧನೆ ಮಾಡಲು ಪ್ರೇರಣೆ ನೀಡಬಲ್ಲದು ಎಂಬುದನ್ನು ಸಾರಿ ಹೇಳುತ್ತದೆ.

*****

ಕಷ್ಟಗಳು ಪರ್ವತೋಪಮವಾಗಿ ದಾರಿಗಡ್ಡವಾಗಿ ನಿಂತು ನಿಮ್ಮನ್ನು ಬೆದರಿಸಬಹುದು. ರಾಕ್ಷಸಾಕಾರ ತಳೆದು ನಿಮ್ಮನ್ನು ಕಬಳಿಸಲೆತ್ನಿಸಬಹುದು. ಆದರೂ ಅಂಜಬೇಡಿ. ಅದನ್ನು ಎದುರಿಸಿ ನಿಲ್ಲಿ; ಕುಟ್ಟಿ ಪುಡಿ ಪುಡಿ ಮಾಡಿಬಿಡಿ!–ಕಷ್ಟಗಳು ಮನುಷ್ಯನ ಸಾಮರ್ಥ್ಯವನ್ನು ಒರೆಗೆ ಹಚ್ಚಿ ನೋಡುವ ಕೆಲಸವನ್ನು ಮಾಡುತ್ತದೆ. ಅಂತಹ ಸಂದರ್ಭ ಎದುರಾದಾಗ ಅದಕ್ಕೆ ಅಂಜದೇ ಏನೇ ಬಂದರೂ ಅದನ್ನು ಬಗೆಹರಿಸುವ ಕೆಲಸವನ್ನು ಮಾಡಬೇಕು. ಚಿನ್ನ ತನ್ನ ಬೆಲೆಯನ್ನು ಹೆಚ್ಚಿಸಿಕೊಳ್ಳ ಬೇಕಾದರೆ ಅದು ಬೆಂಕಿಯಲ್ಲಿ ಬೆಂದು ಪೆಟ್ಟುಗಳನ್ನು ತಿಂದು ಒಂದೊಳ್ಳೆಯ ರೂಪವನ್ನು ಪಡೆಯಲೇಬೇಕಾಗಿರುತ್ತದೆ. ಜೀವನವು ಹಾಗೆಯೇ, ಸಮಸ್ಯೆಗಳು ಬಂದರೆ ಅಯ್ಯೋ ಎಂದು ಕೈಕಟ್ಟಿ ಕೂರುವ ಬದಲು ಅದನ್ನು ಎದುರಿಸಿ ಹೋರಾಡಲೇಬೇಕು. ಒಂದು ಉತ್ತಮ ಶಿಲೆಯಾಗಬೇಕಾದರೆ ಅದು ಉಳಿಪೆಟ್ಟುಗಳನ್ನು ತಿನ್ನಲೇ ಬೇಕಾಗಿರುತ್ತದೆ. ಹಾಗೆಯೇ ಮನುಷ್ಯರಿಗೆ ಸಮಸ್ಯೆಗಳು ಮೇಲಿಂದ ಮೇಲೆ ಪೆಟ್ಟುಗಳನ್ನು ನೀಡುತ್ತಲೇ ಹೋಗುತ್ತದೆ. ಆ ಪೆಟ್ಟುಗಳನ್ನು ಸಹಿಸಿಕೊಂಡು ಅದರಿಂದ ಸಕಾರಾತ್ಮಕವಾಗಿ ಹೊರಬಂದಾಗಲೇ ಮನುಷ್ಯ ಉತ್ತಮ ಶಿಲೆಯಂತೆ ಪರಿ ಪೂರ್ಣತೆಯನ್ನು ಪಡೆಯಬಲ್ಲ. ಕೆಲವೊಮ್ಮೆ ಕೆಲವರಿಗೆ ಮೇಲಿಂದ ಮೇಲೆ ಕಷ್ಟಗಳು ಬಂದಾಗ ಕುಗ್ಗಿ ಹೋಗುವ ಸಾಧ್ಯತೆ ಹೆಚ್ಚಿರುತ್ತದೆ. ಅಂಥವರು ಒಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕು ಸಮಸ್ಯೆಗಳನ್ನು ಸಹಿಸುವ, ಎದುರಿಸುವ ಶಕ್ತಿ ಯಾರಲ್ಲಿ ಹೆಚ್ಚಾಗಿ ಅಡಕವಾಗಿರುವುದೋ ಅಂಥವರಿಗೆ ಕಷ್ಟಗಳು ಪದೇ ಪದೆ ಭೂತಾಕಾರವಾಗಿ ಕಾಡುತ್ತದೆ. ಅಂತಹ ಸಂದರ್ಭದಲ್ಲಿ ಧೈರ್ಯವಾಗಿ ನಿಂತು ಅವುಗಳನ್ನು ಹಿಮ್ಮೆಟ್ಟಿಸುವ ಕೆಲಸವನ್ನು ಮಾಡಬೇಕು. ಏನೇ ಕಷ್ಟಗಳು ಯಾವ ರೂಪದಲ್ಲಿ ಎಷ್ಟೇ ಬೃಹದಾಕಾರವಾಗಿ ನುಗ್ಗಿ ಬಂದರೂ ಭಯಪಡದೆ ಅದನ್ನು ಅಷ್ಟೇ ಸಮರ್ಥವಾಗಿ ಎದುರಿಸಿ ನಿಂತರೆ ಸಮಸ್ಯೆಗಳು ಮಂಜಿನಂತೆ ಕರಗಬಲ್ಲದು.

*****



ಇತರರ ಬಗ್ಗೆ ನಮಗಿರುವ ಅಭಿಪ್ರಾಯವೇ ಅವರೊಂದಿಗಿನ ನಮ್ಮ ವರ್ತನೆಯಲ್ಲಿ ಕಂಡುಬರುವುದು. ನಾವು ಬಾಯಿಬಿಟ್ಟು ಹೇಳದಿದ್ದರೂ ಇತರರು ಅದನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕಂತೆಯೇ ಪ್ರತಿಕ್ರಿಯಿ ಸುತ್ತಾರೆ –ಅಕ್ಷರಶಃ ಸತ್ಯವಾದ ನುಡಿಯಿದು. ನಾವು ಏನನ್ನು ನೀಡುತ್ತೇವೊ ಅದೇ ನಮಗೆ ಮರಳಿ ಬರುತ್ತದೆ. ಮನುಷ್ಯನ ಜೀವನ ಕನ್ನಡಿ ಇದ್ದಂತೆ. ಹೇಗೆ ಕನ್ನಡಿ ನಮ್ಮ ಪ್ರತಿಬಿಂಬವನ್ನು ತೋರಿಸುತ್ತದೆಯೋ ಹಾಗೆಯೇ ಮನುಷ್ಯರು ನಾವು ಅವರೊಂದಿಗೆ ಹೇಗೆ ನಡೆದುಕೊಳ್ಳುತ್ತೇವೆ ಹಾಗೆ ಅವರು ನಮ್ಮೊಂದಿಗೆ ನಡೆದು ಕೊಳ್ಳುತ್ತಾರೆ. ಈ ಮಾತನ್ನು ಹೇಳುವಾಗ ಸಂಸ್ಕೃತದಲ್ಲಿ ಇರುವ ಒಂದು ಮಾತು ನೆನಪಿಗೆ ಬರುತ್ತದೆ. ಯದ್ಭಾವಂ ತದ್ಭವತಿ ಅಂದರೆ ನಾವು ಹೇಗೆ ನೋಡುತ್ತೇವೆ ಹಾಗೆ ನಮಗೆ ಆ ದೃಶ್ಯ ಅಥವಾ ಸನ್ನಿವೇಶಗಳು ಗೋಚರಿಸುತ್ತವೆ. ದೃಷ್ಟಿಯಂತೆ ಸೃಷ್ಟಿ ಎನ್ನುವ ಮಾತು ಕೂಡ ಇದನ್ನೇ ಸಾಬೀತುಪಡಿಸುತ್ತದೆ. ನೋಡುವ ನೋಟ ಸರಿಯಾಗಿದ್ದರೆ ಎಲ್ಲವೂ ಸರಿಯಾಗಿಯೇ ಇರುತ್ತವೆ. ಮಹಾಭಾರತದ ಸನ್ನಿವೇಶ ಎಂದು ಹೇಳಲಾಗುವ ಒಂದು ಪ್ರಸಂಗ ನೆನಪಿಗೆ ಬರುತ್ತದೆ.

*****

ಒಂದು ಕಾರ್ಯದ ನಿಮಿತ್ತ ಒಮ್ಮೆ ದುರ್ಯೋಧನ ಮತ್ತು ಧರ್ಮರಾಯನೊಂದಿಗೆ ಅವರ ತಾತ ಭೀಷ್ಮಾಚಾರ್ಯರು ಒಮ್ಮೆ ಪರ ಊರಿಗೆ ಹೋಗಿದ್ದರು. ಒಂದು ಮರದ ನೆರಳಿನಲ್ಲಿ ಕುಳಿತು ವಿಶ್ರಾಂತಿ ಪಡೆಯುತ್ತಿದ್ದಾಗ ಭೀಷ್ಮರಿಗೆ ಆ ಊರಿನ ಬಗ್ಗೆ ತಿಳಿದುಕೊಳ್ಳುವ ಮನಸ್ಸಾಯಿತು. ಅದಕ್ಕಾಗಿ ದುರ್ಯೋಧನ ಮತ್ತು ಧರ್ಮರಾಯನನ್ನು ಒಂದೊಂದು ದಿಕ್ಕಿಗೆ ಹೋಗಿ ಆ ಊರಿನ ಬಗ್ಗೆ ತಿಳಿದುಕೊಂಡು ಬರಲು ಕಳುಹಿಸಿದರು. ಸ್ವಲ್ಪ ಹೊತ್ತಿನ ನಂತರ ಬಂದ ಧರ್ಮರಾಯ ಈ ಊರಿನಲ್ಲಿ ಇರುವ ಒಳ್ಳೆಯತನ, ಒಳ್ಳೆಯ ಜನ ಬಹುಶಃ ಬೇರೆಲ್ಲೂ ಸಿಗಲಾರರು ಅನ್ನಿಸುತ್ತದೆ ಎಂದು ಹೇಳಿದ. ಧರ್ಮರಾಯನ ತರುವಾಯ ಬಂದ ದುರ್ಯೋಧನ, ಈ ಊರಿನಲ್ಲಿ ಇರುವಷ್ಟು ಕೆಟ್ಟಜನ, ಕೆಟ್ಟತನ ಬೇರೆ ಎಲ್ಲಿಯೂ ಇರಲಾರದು ಎಂದು ತಿಳಿಸಿದ. ಸನ್ನಿವೇಶ ಒಂದೇ. ನೋಡಿದ ಮನುಷ್ಯರ ವ್ಯಕ್ತಿತ್ವ ಬದಲಾಗಿದೆ ಅಷ್ಟೇ. ಪ್ರಸಂಗ ನಡೆದಿತ್ತೇ ಇಲ್ಲವೇ ಅದರ ಬಗ್ಗೆ ಚರ್ಚೆಗಿಂತ ಪ್ರಸಂಗ ಕಟ್ಟಿಕೊಡುವ ವಿಷಯದ ಆಳ ಮಹತ್ತರವಾದುದು. ನಾವು ಹೇಗೆ ಮತ್ತೊಬ್ಬರ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇವೆ ಹಾಗೆಯೇ ಅವರು ಕೂಡ ನಮ್ಮ ಬಗ್ಗೆ ಅದೇ ಅಭಿಪ್ರಾಯವನ್ನು ಪ್ರಕಟಪಡಿಸುತ್ತಾರೆ.

*****

ಮನುಷ್ಯನಿಗೆ ಶಾಂತಿಯನ್ನು ತಂದುಕೊಡುವುದೇ ಧರ್ಮದ ಮೂಲೋ ದ್ದೇಶ: ಪ್ರಸ್ತುತ ಸನ್ನಿವೇಶದಲ್ಲಿ ಅರ್ಥ ಮಾಡಿಕೊಳ್ಳಲೇಬೇಕಾದ ಮಾತಿದು. ನಮ್ಮ ಧರ್ಮ ಶ್ರೇಷ್ಠ, ಮತ್ತೊಬ್ಬರ ಧರ್ಮ ಕನಿಷ್ಠ ಎಂದೋ ಅಥವಾ ಧರ್ಮಗಳ ಹೆಸರಿನಲ್ಲಿ ಸಂಘರ್ಷವನ್ನು ನಡೆಸುವಂತವರಿಗೆ ಅಗತ್ಯವಾಗಿ ತಿಳಿಸಬೇಕಾದ ಮಾತಿದು. ಧರ್ಮದ ಮೂಲ ಉದ್ದೇಶ ಮನುಷ್ಯನಿಗೆ ಶಾಂತಿಯನ್ನು ತಂದುಕೊಡಬೇಕು ಎನ್ನುವ ಈ ಒಂದು ಸಾಲಿನ ನುಡಿಯನ್ನು ಸರಿಯಾಗಿ ಅರ್ಥೈಸಿ ಕೊಂಡು ಆಚರಣೆಗೆ ತಂದದ್ದೆ ಆದಲ್ಲಿ ನಿಜವಾದ ಧರ್ಮದ ಸಾರ ಎಲ್ಲೆಡೆ ತನ್ನ ಪ್ರಖರತೆಯನ್ನು ಬೀರಬಲ್ಲದು.

*****

ಯಾರು ಇತರರಿಗಾಗಿ ಬದುಕುತ್ತಾರೆಯೋ ಅವರದು ಮಾತ್ರವೇ ಜೀವನ; ಉಳಿದವರು ಬದುಕಿದ್ದರೂ ಸತ್ತಂತೆಯೇ: ನಾನು, ನನ್ನದು ಎಂಬ ಸ್ವಾರ್ಥಭಾವನೆಯಿಂದ ಜೀವಿಸುವವರೇ ಹೆಚ್ಚಾಗಿರುವ ಸಂದರ್ಭದಲ್ಲಿ ಈ ಸಂದೇಶದ ಅಗತ್ಯವಿದೆ. ಪರರ ಬಗ್ಗೆ ಚಿಂತಿಸುತ್ತಾ ಅವರಿಗಾಗಿ ಪರಿತಪಿಸುವ, ಮರುಗುವ, ಕೈಲಾದ ಸಹಾಯಹಸ್ತವನ್ನು ಕೈ ಚಾಚುವವರು ಮಾತ್ರ ನಿಜವಾದ ಅರ್ಥದಲ್ಲಿ ಜೀವನ ನಡೆಸುತ್ತಾರೆ.ಪರರ ಬಗ್ಗೆ ಚಿಂತೆ ಮಾಡದೇ ಸ್ವಾರ್ಥ ಜೀವನ ನಡೆಸುವವರು ಬದುಕಿದ್ದರೆ ಸತ್ತಂತೆಯೇ ಎಂಬ ನುಡಿ ಹುಟ್ಟಿ ಬಂದ ಬಳಿಕ ಇತರರಿಗಾಗಿ ಮರುಗುವ, ಸ್ಪಂದಿಸುವ ಗುಣ ಮೈಗೂಡಬೇಕೆಂಬ ಕಾಳಜಿ, ಕಳಕಳಿ ವ್ಯಕ್ತವಾಗುತ್ತದೆ.

ನಾವೇ ತೊಂದರೆಯಲ್ಲಿರುವಾಗ ಸಹಾಯ ಮಾಡುವುದಾದರೂ ಹೇಗೆ? ಇದು ಬಹುತೇಕರು ನೀಡುವ ತೇಲಿಕೆಯ ಉತ್ತರ. ಆದರೆ ಗಮನಿಸಬೇಕಾದ ವಿಚಾರವೊಂದಿದೆ. ಹಣಕಾಸಿನ ಸಹಾಯವೇ ಮಾಡಬೇಕೆಂದಿಲ್ಲ ದುಃಖದಲ್ಲಿದ್ದವರಿಗೆ ನಾಲ್ಕು ಸಮಾಧಾನದ ನುಡಿ ಗಳನ್ನಾಡಿ ಧೈರ್ಯ ತುಂಬುವುದು, ಭರವಸೆ ಕಳೆದು ಕೊಂಡವರಿಗೆ ಪ್ರೇರಣಾತ್ಮಕ ನುಡಿಗಳನ್ನಾಡುವುದು, ದೊಡ್ಡ ಮೊತ್ತದಲ್ಲಿ ಆಗದಿದ್ದರೂ ಸಣ್ಣ ಮೊತ್ತದಲ್ಲಾ ದರೂ ಸಹಾಯ ಮಾಡುವುದು. ನಾವು ಮಾಡುವ ಸಣ್ಣ ಸಹಾಯ ಕೂಡ ಸಂಕಟದಲ್ಲಿರುವವರ ಪಾಲಿಗೆ ದೊಡ್ಡದೇ ಆಗಿರಬಲ್ಲದು.

ಉದಾಹರಣೆಗೆ ಹೇಳುವುದಾದರೆ ಹಸಿದವರಿಗೆ ಒಂದು ಹೊತ್ತಿನ ಊಟ ಕೊಟ್ಟರೆ ಅದಕ್ಕಿಂತ ದೊಡ್ಡದು ಬೇರೇನು ಇರುವುದಿಲ್ಲ. ಆ ಕ್ಷಣದಲ್ಲಿ ಹಸಿದವನ ಪಾಲಿಗೆ ನೀವೇ ದೇವರಾಗಿ ಬಿಡುವಿರಿ. ಹೀಗೆ ಪರರ ಬಗ್ಗೆ ಚಿಂತಿಸುವವರು ಮಾತ್ರ ಸಾರ್ಥಕ ಜೀವನ ನಡೆಸುತ್ತಾರೆ ಎಂಬ ನುಡಿ ಸರ್ವಕಾಲದಲ್ಲಿಯೂ ಉಲ್ಲೇಖಾರ್ಹವಾದುದು.

*****


ಸ್ವಾಮಿ ವಿವೇಕಾನಂದರ ತತ್ವಗಳು ಸಮುದ್ರದಂತೆ ವಿಶಾಲವಾದುದು, ಕಲ್ಪನೆಗೂ ಮೀರಿದಂತದ್ದು, ಅನನ್ಯವಾದದು. ಅವುಗಳನ್ನು ಅರ್ಥಮಾಡಿಕೊಂಡು ನಮ್ಮ ಬದುಕಿನಲ್ಲಿಯೂ ಅಳವಡಿಸಿ ಕೊಂಡಿದ್ದಲ್ಲಿ ಉತ್ತಮವಾದ ಜೀವನ ನಡೆಸಬಹುದು.

*****

ಸ್ವಾ –ಸ್ವಾಭಿಮಾನದಿಂದ ಸ್ವ ಅನುಭವದ ಮೂಲಕ
ಮಿ –ಮಿತ ನುಡಿಗಳಲ್ಲೇ ಅಪರಿಮಿತ ಸಂದೇಶಗಳನ್ನು ಪ್ರಚುರ ಪಡಿಸುತ್ತಾ
ವಿ –ವಿಶಿಷ್ಟವಾದ ಬಹುಮುಖ ಪ್ರತಿಭೆಯೆ ತಾವಾಗಿ ಮೆರೆದು
ವೇ –ವೇದ ಅಧ್ಯಯನಗಳ ಸಾರವನ್ನು ಎಲ್ಲೆಡೆ ಪಸರಿಸಿದ
ಕಾ –ಕಾರುಣ್ಯ ಮೂರ್ತಿಯೇ ತಾವಾಗಿ ಬಡವರಿಗೆ ಕರುಣೆಯ ತೋರಿ
ನಂ –ನಂದದ ನಂದಾದೀಪವಾಗಿ ಪ್ರಜ್ವಲಿಸುವ
ದ –ದಟ್ಟ ಅಂಧಕಾರದಲ್ಲಿ ಕುಳಿತ್ತಿದ್ದವರಿಗೆ ಭರವಸೆಯ ಬೆಳಕನ್ನು ನೀಡಿದ ಮಹಾಚೇತನರು – ಸ್ವಾಮಿ ವಿವೇಕಾನಂದರು.

ಹಚ್ಚಹಸಿರಿಂದ ನಳನಳಿಸುತ್ತಿದೆ ಬಂಡೀಪುರ ಅಭಯಾರಣ್ಯ

● ವನ್ಯಜೀವಿಗಳ ಲವಲವಿಕೆ ಕಣ್ಣಿಗೆ ಹಬ್ಬ ● ಹಸಿರು ಹೊದಿಕೆ, ವನ್ಯಜೀವಿಗಳ ಚೆಲ್ಲಾಟದಿಂದ ಪ್ರವಾಸಿಗರು ಫುಲ್ ಖುಷ್







ಮೈಸೂರು,ಜೂ.17(ಎಂಟಿವೈ)– ತೀವ್ರ ಬರಗಾಲ, ಮಳೆ ಕೊರತೆ ಹಾಗೂ ಬಿಸಿಲು ಬೇಗೆಗೆ ಒಣಗಿ ಹುಲ್ಲಾಗಿದ್ದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಮುಂಗಾರು ಮಳೆಗೆ ಹಸಿರಿನ ಹೊದಿಕೆಯೊಂದಿಗೆ ನಳನಳಿಸುತ್ತಿದೆ. ಅಭಯಾರಣ್ಯದಲ್ಲಿ ವನ್ಯಜೀವಿಗಳ ಕಲರವ ಪ್ರವಾಸಿಗರ ಕಣ್ಣಿಗೆ ಹಬ್ಬ ತಂದಿದೆ.

ಕಳೆದ 2 ವರ್ಷಗಳಿಂದ ಹವಾಮಾನ ವೈಪರೀತ್ಯದಿಂದಾಗಿ ನಿಗದಿತ ಪ್ರಮಾಣದ ಸಾಂಪ್ರದಾಯಿಕ ಮಳೆ ಬಾರದ ಹಿನ್ನೆಲೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ವನ್ಯಜೀವಿಗಳಿಗೂ 'ಬರ' ಸಿಡಿಲು! ಕಳೆದ ವರ್ಷ ಬರದ ಜೊತೆಗೆ ಬಿರು ಬಿಸಿಲಿನಿಂದಾಗಿ ಅರಣ್ಯ ಪ್ರದೇಶ ಬರಡು ಪ್ರದೇಶದಂತಾಗಿತ್ತು. ಕಾಡ್ಗಿಚ್ಚು ಸಂಭವಿಸುವ ಆತಂಕವೂ ಎದುರಾಗಿತ್ತು. ಆದರೆ, ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಸುರಿದ ಭಾರಿ ಮಳೆ, ಬಂಡೀಪುರ ಅಭಯಾರಣ್ಯದ ಇಳೆ ತಂಪಾಗಿಸಿದ್ದು, 15 ದಿನದಲ್ಲೇ ಅರಣ್ಯ ಪ್ರದೇಶದ ಚಿತ್ರಣವೇ ಬದಲಾಗಿದೆ.

ಈ ಸಾಲಿನ ಏಪ್ರಿಲ್, ಮೇ 2ನೇ ವಾರದವರೆಗೂ ಒಣ ಮರುಭೂಮಿಯಂತೆ ಭಾಸವಾಗುತ್ತಿದ್ದ ಅರಣ್ಯ ಪ್ರದೇಶ ಈಗ ಹಸಿರು ಹೊದಿಕೆಯಿಂದ ಕಂಗೊಳಿಸುತ್ತಿದೆ. ಬರಿದಾಗಿದ್ದ ಕೆರೆಗಳು ಮೈದುಂಬಿಕೊಂಡಿವೆ. ಅರಣ್ಯ ಭಾಗದಲ್ಲಿ ಹಸಿರು ಹುಲ್ಲು ಬೆಳೆದು ನಿಂತಿದೆ. ಬಂಡೀಪುರದ ಎಲ್ಲಾ 13 ವಲಯಗಳಲ್ಲಿ ಅರಣ್ಯ ಪ್ರದೇಶ ಹಸಿರಿನಿಂದ ಕಂಗೊಳಿಸುತ್ತಿರುವುದರಿಂದ ಬೇಸಿಗೆಯಲ್ಲಿ ವಿವಿಧೆಡೆ ವಲಸೆ ಹೋಗಿದ್ದ ಜಿಂಕೆ, ಆನೆ, ಕಾಡೆಮ್ಮೆ, ಸಾಂಬರ್ ಸೇರಿದಂತೆ ಸಸ್ಯಹಾರಿ ಪ್ರಾಣಿಗಳು ಮರಳಿದ್ದು, ಸಫಾರಿ ಪ್ರಿಯರಿಗೆ ಪ್ರಾಣಿಗಳ ದರ್ಶನ ವಿಶೇಷ ಮುದ ನೀಡುತ್ತಿದೆ.

ಬೇಸಿಗೆ ವೇಳೆ ನುಗು ಹಾಗೂ ಕಬಿನಿ ಹಿನ್ನೀರಿನ ಪ್ರದೇಶದತ್ತ ಆನೆ, ಕಾಡೆಮ್ಮೆ, ಸಾಂಬರ್‌ನಂತಹ ಪ್ರಾಣಿಗಳು ವಲಸೆ



ಹೋಗುವುದು ವಾಡಿಕೆ. ಈ ಸಂದರ್ಭದಲ್ಲಿ ಸಫಾರಿಗೆ ತೆರಳಿದ್ದವರಿಗೆ ಹುಲಿ,





ಬಂಡೀಪುರ ಅರಣ್ಯದಲ್ಲಿ ಸಫಾರಿಗರಿಗೆ ಕಂಡು ಬಂದ ಆನೆಗಳ ಹಿಂಡು, ಕಾಡೆಮ್ಮೆ, ಕರಡಿ, ಸಾಂಬರ್, ಮರವೇರಿರುವ ಚಿರತೆ, ವಿರಮಿಸುತ್ತಿರುವ ಸಾಂಬರ್, ಜಿಂಕೆಗಳ ಹಿಂಡು, ಮರದ ಮೇಲೆ ನವಿಲನ್ನು ಚಿತ್ರದಲ್ಲಿ ಕಾಣಬಹುದು.


ಚಿತ್ರಗಳು
ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

ಕೆರೆಗಳು ಭರ್ತಿಯಾಗಿವೆ, ಪ್ರಾಣಿಗಳಿಗೆ ಯಥೇಚ್ಛ ಆಹಾರ ಲಭ್ಯವಾಗುತ್ತಿದೆ



ಬಿರು ಬೇಸಿಗೆ ಬಳಿಕ ಉತ್ತಮ ಮಳೆ ಆಗಿರುವುದರಿಂದ ಬಂಡೀಪುರ ಅರಣ್ಯದ ಎಲ್ಲಾ ಕೆರೆಗಳಿಗೂ ನೀರು ಬಂದಿದೆ. ಇದರಿಂದ ವನ್ಯಜೀವಿಗಳಿಗೆ ಕುಡಿಯುವ ನೀರಿನ ಅಭಾವ ನೀಗಿದೆ. ಅಲ್ಲದೆ, ಅರಣ್ಯ ಪ್ರದೇಶ ಹಚ್ಚಹಸಿರಿನಿಂದ ಕೂಡಿರುವುದಲ್ಲದೆ, ಸಫಾರಿಗರಿಗೆ ಆನೆಗಳ ಹಿಂಡು, ಕಾಡೆಮ್ಮೆ ಸೇರಿದಂತೆ ಯಥೇಚ್ಛವಾಗಿ ಪ್ರಾಣಿಗಳ ದರ್ಶನವಾಗುತ್ತಿರುವುದರಿಂದ ಪ್ರವಾಸಿಗರು ಸಂಭ್ರಮಿಸುತ್ತಿದ್ದಾರೆ.

–ಎಸ್.ಪ್ರಭಾಕರನ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ



ಜಿಂಕೆ, ಚಿರತೆ ಮಾತ್ರ ಕಾಣಸಿಗುತ್ತಿದ್ದವು. ಅಲ್ಲದೆ, ಸಣ್ಣ ಸಣ್ಣ ಮರಿಗಳೊಂದಿಗೆ ಆನೆಗಳು ಸಿಗುತ್ತಿದ್ದವು. ಆದರೆ, ಇದೀಗ ಮೇವು, ನೀರಿನ ಲಭ್ಯತೆಯಿಂದಾಗಿ ಸಫಾರಿ ವಲಯಗಳಲ್ಲಿ ಪ್ರಾಣಿಗಳು ಕಂಡು ಬರುತ್ತಿದ್ದು, ಪ್ರವಾಸಿಗರಿಗೆ ಮುದ ನೀಡುತ್ತಿವೆ.

ಕಳೆದ 15 ದಿನದಿಂದ ಸಫಾರಿಗರಿಗೆ ಹಬ್ಬದ ವಾತಾವರಣ ಸೃಷ್ಟಿಯಾಗಿದ್ದು, ಎಲ್ಲೆಲ್ಲೂ ಹಿಂಡು ಆನೆ, ಗುಂಪಿನಿಂದ ಕೂಡಿರುವ ಕಾಡೆಮ್ಮೆ, ಕರಡಿ, ಹುಲಿ, ಚಿರತೆಯಂತಹ ಪ್ರಾಣಿಗಳು ಸಿಗುತ್ತಿವೆ. ಸಾಲು ರಜೆ ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ರಜೆ ಇದ್ದ ಕಾರಣ ದೇಶದ ವಿವಿಧೆಡೆಯಿಂದ ಬಂಡೀಪುರಕ್ಕೆ ಸಫಾರಿಗೆಂದು ಬರುವವರ ಸಂಖ್ಯೆಯೂ ಹೆಚ್ಚಾಗಿದೆ. ಮಳೆಯಿಂದ ಕಳೆಕಟ್ಟಿದ ಬಂಡೀಪುರ ನೋಡುಗರ ಕಣ್ಮನ ಸೆಳೆಯುತ್ತಿದ್ದು, ಪ್ರಾಣಿಗಳ ದರ್ಶನವೂ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಮಂಗಳವಾರ 18 ಜೂನ್ 2024

ಜೂ.27, ಮೈಸೂರಲ್ಲಿ ಅದ್ದೂರಿ ಕೆಂಪೇಗೌಡರ ಜಯಂತಿ ಆಚರಣೆ

ಒಕ್ಕಲಿಗ ಸಂಘ-ಸಂಸ್ಥೆಗಳ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ



ಆದಿಚುಂಚನಗಿರಿ ಶಾಖಾ ಮಠದಲ್ಲಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಕೆಂಪೇಗೌಡರ ಜಯಂತಿಯ ಪೂರ್ವಭಾವಿ ಸಭೆಯಲ್ಲಿ ಶಾಸಕ ಕೆ.ಹರೀಶ್‌ಗೌಡರು ಮಾತನಾಡುತ್ತಿರುವುದು.

ಮೈಸೂರು, ಜೂ.17(ಜಿಎ)–ಮೈಸೂರಿನಲ್ಲಿ ಜೂ.27ರಂದು ಕೆಂಪೇಗೌಡರ ಜಯಂತಿಯನ್ನು ಜಿಲ್ಲಾಡಳಿತದ ಜೊತೆಗೂಡಿ ಅದ್ದೂರಿಯಾಗಿ ಆಚರಿಸಲು ಒಕ್ಕಲಿಗ ಸಂಘ-ಸಂಸ್ಥೆಗಳು, ಸಮುದಾಯದ ಜನಪ್ರತಿನಿಧಿಗಳು ಹಾಗೂ ಮುಖಂಡರು ನಿರ್ಧರಿಸಿದ್ದಾರೆ.

ಮೈಸೂರಿನ ಹೆಬ್ಬಾಳಿನ ಲಕ್ಷ್ಮೀಕಾಂತ ದೇವಸ್ಥಾನದ ಆವರಣದಲ್ಲಿರುವ ಆದಿಚುಂಚನಗಿರಿ ಶಾಖಾ ಮಠದಲ್ಲಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಕೆಂಪೇಗೌಡರ ಜಯಂತಿಯ ಪೂರ್ವಭಾವಿ ಸಭೆಯಲ್ಲಿ ಮುಖಂಡರು ಚರ್ಚಿಸಿದರು.

ಸಭೆಯಲ್ಲಿ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಅಂದು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕಲಾಮಂದಿರದವರೆಗೂ ನಡೆಯುವ ಮೆರವಣಿಗೆಗೆ ಕನ್ನಡ ಮತ್ತು ಸಂಸ್ಕೃತ ಇಲಾಖೆ ವತಿಯಿಂದ ಹೆಚ್ಚುವರಿ ಸ್ತಬ್ಧಚಿತ್ರಗಳನ್ನು ನೀಡುವಂತೆ ಸಚಿವರಿಗೆ ಮನವಿ ಮಾಡುತ್ತೇನೆ. ನಾಡಪ್ರಭು ಕೆಂಪೇಗೌಡರ ಸಮುದಾಯದ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಜಯಂತಿ ಯಶಸ್ವಿಗೊಳಿಸಿ ಎಂದರು.

ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು ಮಾತನಾಡಿ, ನಾವೆಲ್ಲರೂ ಎಲ್ಲಾ ವರ್ಗದವರನ್ನು ಪ್ರೀತಿಸುತ್ತೇವೆ. ಹಾಗೇ ನಮ್ಮ ಸಮುದಾಯವನ್ನು ಪ್ರೀತಿಸಿ, ಕೆಂಪೇಗೌಡರ ಜಯಂತಿಯಲ್ಲಿ ಭಾಗವಹಿಸಿ, ಈ ಹಿಂದೆ ಕೆಂಪೇಗೌಡರ ಜಯಂತಿಗೆ ವಿಶೇಷ ಸಮಿತಿ ರಚಿಸುವಂತೆ ಮನವಿ ಮಾಡಲಾಗಿದೆ. ಅದು ಜಾರಿಯಾಗಬೇಕಿದೆ. ಕಳೆದ ಬಾರಿಗಿಂತ ಅಚ್ಚುಕಟ್ಟಾಗಿ ಮಾಡೋಣ ಎಂದು ತಿಳಿಸಿದರು.

ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಬೇಕು. ಸಮುದಾಯದ ಪರವಾಗಿ ಅನೇಕ ವರ್ಷಗಳಿಂದ ಶ್ರಮಿಸುತ್ತಿರುವವರನ್ನು ಗುರುತಿಸಿ ಗೌರವಿಸಬೇಕು. ಹಾಗೇ ಈ ಬಾರಿ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಗೆದ್ದಿರುವವರನ್ನು ಅಭಿನಂದಿಸಬೇಕು ಎಂದು ಕೆಲ ಮುಖಂಡರು ಸಲಹೆ ನೀಡಿದರು.

ಸಭೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಒಕ್ಕಲಿಗ ಸಂಘದ ಪದಾಧಿಕಾರಿಗಳು, ಮಾಜಿ ಕಾರ್ಪೊರೇಟರ್‌ಗಳು, ಸಮುದಾಯದ ಮುಖಂಡರು ಇದ್ದರು.

ನೇರ ಸಂದರ್ಶನ ಫೋನ್-ಇನ್ ಕಾರ್ಯಕ್ರಮ

ಮೈಸೂರು, ಜೂ.17–ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ರೇಡಿಯೋ 91.2 ಎಫ್.ಎಂ. ಸಮುದಾಯ ಬಾನುಲಿ ಕೇಂದ್ರವು ಜೂ. 19ರ ಬುಧವಾರ ಬೆಳಗ್ಗೆ 11.30ರಿಂದ 12.30ರವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಡಿ.ರಂದೀಪ್ ಅವರ ಜೊತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿರುವ ಸೇವಾ ಸೌಲಭ್ಯಗಳು ಹಾಗೂ ಇಲಾಖೆಯ ಇತರೇ ಯೋಜನೆಗಳ ಕುರಿತು ನೇರ ಸಂದರ್ಶನ ಫೋನ್-ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸಾರ್ವಜನಿಕರು ಸರ್ಕಾರಿ ಆಸ್ಪತ್ರೆಯಲ್ಲಿ ಲಭ್ಯವಿರುವ ಚಿಕಿತ್ಸೆಗಳು, ಶಸ್ತ್ರಚಿಕಿತ್ಸೆಗಳು ಹಾಗೂ ಇತರೇ ಆರೋಗ್ಯ ಸೇವಾ



ಡಿ.ರಂದೀಪ್

ಸೌಲಭ್ಯಗಳ ಕುರಿತು ಯಾವುದೇ ಪ್ರಶ್ನೆಗಳು ಅಥವಾ ಸಲಹೆಗಳು ಇದ್ದಲ್ಲಿ ಕರೆ ಮಾಡಿ ನೇರವಾಗಿ ಆಯುಕ್ತರ ಜೊತೆ ಹಂಚಿ ಕೊಳ್ಳಬಹುದು. ಅದಕ್ಕಾಗಿ ನೀವು ಕರೆಮಾಡಬೇಕಾದ ನಿಲಯದ ದೂ. ಸಂಖ್ಯೆ: 0821-25 46 563. ಜೆಎಸ್‌ಎಸ್ ರೇಡಿಯೋವನ್ನು ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪ್ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಾದರೂ ಆಲಿಸಬಹುದು.

ಮಾವು ಬೆಳೆಯಲ್ಲಿ ಉತ್ತಮ ಸಾಧನೆ ಮಾಡಿದ ಕುಮಾರ್‌ಗೆ ಸಿಎಂ ಅಭಿನಂದನೆ



ಮೈಸೂರು, ಜೂ.17–ವರುಣ ಕ್ಷೇತ್ರದ ಬಡಗಲಹುಂಡಿ ಗ್ರಾಮದ ಈರುಳ್ಳಿ ಕುಮಾರ್ ಅವರು ತಮ್ಮ ಮೂರೂವರೆ ಎಕರೆ ಜಮೀನಿನಲ್ಲಿ ಸುಮಾರು 629 ತಳಿಗಳ ಮಾವು ಬೆಳೆದು ಯಶಸ್ವಿಯಾಗಿದ್ದಾರೆ. ಈ ಬಾರಿಯ ಮಾವಿನ ಮೇಳದಲ್ಲಿ ಅವರು ಉತ್ತಮ ಮಾವಿನ ತಳಿಯನ್ನು ಪ್ರದರ್ಶಿಸಿದರು.

ಜಿಲ್ಲೆಗೆ ಪ್ರಥಮ ಬಹುಮಾನ ಪಡೆದ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಆತ್ಮೀಯವಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ.ಎಚ್.ಎಂ. ನಾಗರಾಜ್, ಪ್ರಗತಿಪರ ರೈತ ಈರುಳ್ಳಿ ಜವರೇಗೌಡ. ಬಡಗಲಹುಂಡಿ ಜವರಪ್ಪ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಓದಿನಲ್ಲೂ ಶಿಸ್ತು ಹೊಂದಿರಬೇಕು

ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅಭಿಮತ



ಮೈಸೂರಿನ ಜ್ಯೋತಿ ಸಂಯುಕ್ತ ಪಿಯು ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಕಾರ್ಯಕ್ರಮವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು.

ಮೈಸೂರು, ಜೂ.17(ಎಸ್‌ಪಿಎನ್)–ವಿದ್ಯಾರ್ಥಿಗಳು ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿಗಳಿಸಬೇಕಾದರೆ, ಓದಿನಲ್ಲಿ ಶಿಸ್ತು ರೂಢಿಸಿಕೊಳ್ಳಬೇಕು ಎಂದು ಶಾಸಕ ಟಿ.ಎಸ್. ಶ್ರೀವತ್ಸ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಜ್ಯೋತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಶಾಸಕರು, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಉನ್ನತ ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದರು.

ಜ್ಯೋತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮುದ್ದುವೀರಪ್ಪ, ಕಾರ್ಯದರ್ಶಿ ಎ.ಎಸ್ ಚನ್ನಬಸಪ್ಪ, ಬಿಜೆಪಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಶಿಕ್ಷಣ ತಜ್ಞ ಕೆ.ಎಂ.ಸುಂದರಂ, ಪ್ರಣಮ್ಯ ಶಿಕ್ಷಣ ಸಂಸ್ಥೆ ಅಧ್ಯಕ್ಷ ವಿ.ಪಿ.ಸವಿತಾಗೌಡ, ಕಾರ್ಯದರ್ಶಿ ಮಹಿಮಹೇಶ್, ಕಾಲೇಜ್ ಆಡಳಿತಾಧಿಕಾರಿ ಎ.ಸಿ.ಅರವಿಂದ್, ಪ್ರಾಂಶುಪಾಲ ಡಾ.ಭರತ್‌ರಾಜ್, ಸತ್ಯನಾರಾಯಣ, ಗೋಪಾಲರಾಜ್ ಅರಸ್, ನೂತನ ವಿದ್ಯಾರ್ಥಿಗಳು, ಪೋಷಕರು, ಹಾಗೂ ಕಾಲೇಜಿನ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಬಿಜೆಪಿ ಮಹಿಳಾ ಘಟಕದಿಂದ ಸಂಸದ ಯದುವೀರರಿಗೆ ಅಭಿನಂದನೆ

ನಾಡಿನ ಮಹಿಳೆಯರ ಪಾತ್ರ ಹಿರಿದು; ಆರೋಗ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಗರ ಮಹಿಳಾ ಮೋರ್ಚಾ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನೂತನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಜೂ.17(ಜಿಎ)–ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಗರ ಮಹಿಳಾ ಮೋರ್ಚಾ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನೂತನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಅಭಿನಂದಿಸಲಾಯಿತು.

ಮಹಿಳಾ ಮೋರ್ಚಾದ ಪದಾಧಿಕಾರಿಗಳು ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ನೂತನ ಸಂದಸರಾಗಿ ಆಯ್ಕೆಯಾಗಿರುವ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ಗೆ ಮೈಸೂರು ಪೇಟ ತೊಡಿಸಿ, ಬೃಹತ್ ಹಾರ ಹಾಕಿ ಆತ್ಮೀಯವಾಗಿ ಅಭಿನಂದಿಸಿದರು.

ಈ ವೇಳೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಕಾರ್ಯಕರ್ತರು ಮತ್ತು ಪಕ್ಷದ ಮುಖಂಡರ ಪರವಾಗಿ ನಾನು ಎಲ್ಲಾ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸುತ್ತಿದ್ದೇನೆ. ಈ ಗೆಲುವು ನನ್ನದಲ್ಲ. ತಾಯಿ ಚಾಮುಂಡೇಶ್ವರಿ, ಕಾವೇರಮ್ಮ ಅಯೋಧ್ಯೆಯ ಬಾಲರಾಮ, ಕಾರ್ಯಕರ್ತರ ಗೆಲುವಾಗಿದೆ ಎಂದರು.

ನಾಡಿನ ಬೆಳವಣಿಗೆಯಲ್ಲಿ ಹಿಂದಿನಿಂದಲೂ ಮಹಿಳೆಯರ ಪಾತ್ರ ಹಿರಿದು. ಪಕ್ಷ ಸಂಘಟನೆ ಗಟ್ಟಿ ಇರಬೇಕಾದರೆ ಮಹಿಳಾ ಮೋರ್ಚಾ ಮುಖ್ಯ, ಪಕ್ಷವು ಇನ್ನಷ್ಟು ದೊಡ್ಡದಾಗಿ ಬೆಳೆಯಬೇಕು. ಮಹಾರಾಣಿ ಲಕ್ಷ್ಮಮ್ಮಣ್ಣಿ ಅವರ ಕಾಲದಿಂದಲೂ ಈ ನಾಡನ್ನು ನೋಡಿದ್ದೇವೆ. ಬ್ರಿಟಿಷರು ಅವರನ್ನು ಬಂಧಿಸಿದ್ದರೂ, ಅವರ ಸಹಕಾರವನ್ನೇ ಪಡೆದು ಮತ್ತೆ ಆಳ್ವಿಕೆ ನಡೆಸಿದ್ದರು. ಆಗ ನಮ್ಮ ಕೈಗೆ ಆಡಳಿತ ಬರದಿದ್ದರೆ ರಾಜ್ಯ ಇಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತಿರಲಿಲ್ಲ ಎಂದರು.

ಆ ನಂತರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತ ಅವಧಿಯನ್ನು ನಾವು ಸುವರ್ಣ ಯುಗ ಎಂದು ಕರೆಯುತ್ತೇವೆ. ಆದರೆ ಅದರ ಹಿಂದಿನ ಪರಿಶ್ರಮ ವಾಣಿವಿಲಾಸ ಸನ್ನಿಧಾನ ಅವರದ್ದು. ನಾಲ್ವಡಿ ಅವರ ಸುವರ್ಣ ಯುಗದ ಬೀಜ ಹಾಕಿದ್ದು ವಾಣಿವಿಲಾಸ ಸನ್ನಿಧಾನ ಅವರು. ಆದ್ದರಿಂದ ಮಹಿಳೆಯ ಪಾತ್ರ ದೊಡ್ಡದು ಎಂದು ಅವರು ಹೇಳಿದರು.

ಲಕ್ಷ್ಮಮ್ಮಣ್ಣಿ ಮತ್ತು ವಾಣಿವಿಲಾಸ ಸನ್ನಿಧಾನ ಅವರು ಆರೋಗ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ. ಈಗ ನಾವು ಕೋವಿಡ್ ಎಂದು ಹೇಳುತ್ತೇವೆ. ಆಗಲೇ ಮಲೇರಿಯಾ, ಕಾಲರಾಕ್ಕೆ ಔಷಧ ನೀಡಿದ್ದು, ಆಸ್ಪತ್ರೆಗಳನ್ನು ನಿರ್ಮಿಸಿದ್ದು ಮೈಸೂರು ರಾಜವಂಶದ ಮಹಿಳೆಯರು ಎಂದರು.

ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಸಾರ್ವಜನಿಕರು ಬಿಜೆಪಿ ಕಚೇರಿಗೆ ಬರುವುದು ಪಕ್ಷದ ಮೇಲೆ ಇರುವ ನಂಬಿಕೆ ಮತ್ತು ಗೌರವದ ಕಾರಣ. ಇಲ್ಲಿ ನೆರೆದಿರುವ ಮಹಿಳೆಯರನ್ನು ನೋಡಿದರೆ ಪಕ್ಷಕ್ಕೆ ಮತ್ತೆ ಬಲ ಬರುತ್ತದೆ. ಈ ಕಾರ್ಯಕ್ರಮದ ಮೂಲಕ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದವರಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ಶ್ಲಾಘನೀಯ. ದುಡ್ಡು, ಆಸ್ತಿ ಮಾಡಿದರೆ ಕಳುವಾಗುತ್ತದೆ, ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಆದರೆ ವಿದ್ಯೆಯನ್ನು ಹಾಗೆ ಕಸಿಯಲು ಸಾಧ್ಯವಿಲ್ಲ ಎಂದರು.

ಮಾಜಿ ಮೇಯರ್ ಸಂದೇಶ್ ಸ್ವಾಮಿ ಮಾತನಾಡಿ, ಯದುವೀರ್ ಒಡೆಯರ್ ಅವರಿಗೆ ಈ ಬಾರಿ ಚುನಾವಣೆಯಲ್ಲಿ ಹೆಚ್ಚು ಮಹಿಳೆಯರ ಬೆಂಬಲ ಸಿಕ್ಕಿದೆ. ನಾವು ಮೈಸೂರಿನವರು ವಾಣಿವಿಲಾಸ ಸನ್ನಿಧಾನ ಅವರ ಕಾಣಿಕೆಯನ್ನು ಮರೆಯುವಂತಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜು, ಪ್ರಧಾನ ಕಾರ್ಯದರ್ಶಿಗಳಾದ ಚಂದ್ರಕಲಾ, ಮಮತಾ ಶೆಟ್ಟಿ, ಮಾಜಿ ಉಪಮೇಯರ್ ಜಿ.ರೂಪಾ ಇತರರು ಉಪಸ್ಥಿತರಿದ್ದರು.

ರಾಜ್ಯ ಸರ್ಕಾರದ ಬೆಲೆ ಏರಿಕೆ ಖಂಡಿಸಿ ಬಿಜೆಪಿ ಹೋರಾಟ

ಮೈಸೂರು,ಜೂ.17(ಜಿಎ)–ರಾಜ್ಯ ಸರ್ಕಾರದ ಬೆಲೆ ಏರಿಕೆಯ ಜನ ವಿರೋಧಿ ನಿಲುವನ್ನು ಖಂಡಿಸಿ ಬಿಜೆಪಿ ಹೋರಾಟ ನಡೆಸಲಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರವು ಜನ ವಿರೋಧಿ ನಿಲುವನ್ನು ಹೊಂದಿದೆ. ಬೆಲೆ ಏರಿಕೆಯಿಂದ ಜನಸಾಮಾನ್ಯರಿಗೆ ತೊಂದರೆಯಾಗಿದೆ. ಬಿಜೆಪಿ ವತಿಯಿಂದ ಈಗಾಗಲೇ ಹೋರಾಟ ಆರಂಭಿಸಲಾಗಿದೆ. ಮಂಗಳವಾರ ಮೈಸೂರಿನಲ್ಲಿಯೂ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ರಾಜ್ಯ ಸರ್ಕಾರದ ಧೋರಣೆ ವಿರುದ್ಧ ನಮ್ಮ ಹೋರಾಟ ಮುಂದುವರೆಯುತ್ತದೆ. ರಾಜ್ಯದಲ್ಲಿ ಮುಂಗಾರು ವಿಫಲಗೊಂಡಿರುವ ಹಿನ್ನೆಲೆಯಲ್ಲಿ ಮೈಸೂರು, ಕೊಡಗು ಭಾಗದಲ್ಲಿ ಪ್ರವಾಸ ಹಮ್ಮಿಕೊಂಡು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ ಎಂದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಬಿಜೆಪಿ ಅಧಿಕಾರದ ಅವಧಿಯಲ್ಲಿ ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಳದ ವಿರುದ್ಧ ಸಿದ್ದರಾಮಯ್ಯ ಹೋರಾಟ ಮಾಡಿದ್ದರು. ನಮ್ಮ ಅವಧಿಯಲ್ಲಿ ಪೆಟ್ರೋಲ್, ಡೀಸೆಲ್ ಮೇಲಿನ ಮಾರಾಟ ತೆರಿಗೆ ಕಡಿತ ಮಾಡಲಾಗಿತ್ತು. ಆದರೆ ಈಗ ಕಾಂಗ್ರೆಸ್ ಸರ್ಕಾರ ತೆರಿಗೆ ಹೆಚ್ಚಿಸಿ ಸಾಮಾನ್ಯ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಕಿತ್ತೊಗಿರುವ ಯೋಜನೆಗಳಿಗೆ ಹಣ ಹೊಂದಿಸಲು ಬೆಲೆ ಏರಿಸಲಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದು ಬಿದ್ದಿದೆ ಎಂದು ವಾಗ್ದಾಳಿ ನಡೆಸಿದರು.

ಕುಕ್ಕರಹಳ್ಳಿ ಕೆರೆಯಲ್ಲಿ ಪಕ್ಷಿ ವೀಕ್ಷಣಾ ಕಾರ್ಯಕ್ರಮ



ಮೈಸೂರು, ಜೂ. 17– ಮೈಸೂರ್ ಸೈನ್ಸ್ ಫೌಂಡೇಶನ್ ಮತ್ತು ಟೆರೆಷಿಯನ್ ಬಾಲಕಿಯರ ಪ್ರೌಢಶಾಲೆ ಸಹಯೋಗದಲ್ಲಿ ಪಕ್ಷಿ ವೀಕ್ಷಣಾ ಕಾರ್ಯಕ್ರಮವನ್ನು ಕುಕ್ಕರಹಳ್ಳಿ ಕೆರೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಪರಿಸರವಾದಿ ಮತ್ತು ವನ್ಯಜೀವಿ ಛಾಯಾಗ್ರಾಹಕ ಸಪ್ತಗಿರೀಶ್, ಪಕ್ಷಿ ವೀಕ್ಷಣಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕೆರೆಗಳು ಜೀವ ವೈವಿಧ್ಯತೆಯನ್ನು ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಅದರಲ್ಲೂ ನಗರದ ಕೇಂದ್ರ ಭಾಗದಲ್ಲಿರುವಂತಹ ಕುಕ್ಕರ ಹಳ್ಳಿ, ಕಾರಂಜಿ ಕೆರೆಗಳು, ಮೈಸೂರಿನ ಶ್ವಾಸಕೋಶದಂತಿವೆ. ಇವು ನಗರದಲ್ಲಿ ಉಂಟಾಗುವ ಇಂಗಾಲದ ಡೈಆಕ್ಸೈಡ್ ಪ್ರಮಾಣವನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಕುಕ್ಕರಹಳ್ಳಿ ಕೆರೆಯು ರಾಜರು ಮೈಸೂರು ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಕಟ್ಟಿದಂತಹ ಕೆರೆಯಾಗಿದೆ. ಇಂದು ಅದು ಸಾಕಷ್ಟು ಮಲಿನಗೊಂಡು, ಇಲ್ಲಿನ ಕುಡಿಯಲು ಯೋಗ್ಯವಾಗಿಲ್ಲ. ಈ ಕೆರೆಯನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಕೆರೆಗೆ ಪ್ರತಿವರ್ಷ ಹೊರದೇಶಗಳಿಂದಲೂ ಪಕ್ಷಿಗಳು ಆಗಮಿಸುತ್ತವೆ. ಇಲ್ಲಿಯೇ ಸಂತಾನೋತ್ಪತ್ತಿಯನ್ನು ಮಾಡಿಕೊಂಡು ತೆರಳುತ್ತವೆ. ಕೆರೆ ಎಂದರೆ ಕೇವಲ ನೀರು ಅಷ್ಟೇ ಅಲ್ಲ, ಅದಕ್ಕೆ ಹೊಂದಿಕೊಂಡು ಹಲವಾರು ಸಸ್ಯಗಳು ಮರಗಳು, ಕೀಟಗಳಿರುತ್ತವೆ, ಪ್ರಾಣಿ ಪಕ್ಷಿಗಳು ಇರುತ್ತವೆ. ಕಣ್ಣಿಗೆ ಕಾಣದ ಕೋಟ್ಯಾಂತರ ಸೂಕ್ಷ್ಮಾಣು ಜೀವಿಗಳಿರುತ್ತವೆ. ಆದ್ದರಿಂದ ಒಂದು ಕೆರೆಯ ನಾಶ ಇವೆಲ್ಲವನ್ನು ನಾಶ ಮಾಡಿಬಿಡುತ್ತದೆ. ಮುಂದಿನ ಪೀಳಿಗೆಗಾಗಿ ಈ ಕೆರೆಯನ್ನು ಉಳಿಸಿಕೊಳ್ಳುವುದು ನಿಮ್ಮೆಲ್ಲರ ಜವಾಬ್ದಾರಿಯಾಗಿದೆ. ಇಲ್ಲವಾದಲ್ಲಿ ಉಸಿರಾಡಲು ಉತ್ತಮವಾದ ಗಾಳಿ ಕುಡಿಯಲು ಒಳ್ಳೆಯ ನೀರು ಸಿಗುವುದು ಕಷ್ಟಕರವಾಗಿ ಬಿಡುತ್ತದೆ ಎಂದರು.

ಕೆರೆ ಪಕ್ಷಿಗಳ ವಾಸಸ್ಥಾನ ಅದನ್ನು ನಾವು ಗೌರವಿಸಬೇಕು. ಅವುಗಳ ಮನೆಯನ್ನು ಪ್ಲಾಸ್ಟಿಕ್‌ನಂತಹ ಕಸಗಳನ್ನು ಹಾಕಿ ಹಾಳು ಮಾಡಬಾರದು. ಜೋರಾಗಿ ಕಿರುಚಾಡುವುದು, ಮಾತನಾಡುವುದು, ಮೊಬೈಲ್‌ಗಳಲ್ಲಿ ಜೋರಾಗಿ ಹಾಡು ಹಾಕುವುದು. ಹೀಗೆ ನಾನಾ ರೀತಿ ತೊಂದರೆ ಕೊಡುವುದನ್ನು ಮಾಡಬಾರದು. ಸುಮಾರು 40ಕ್ಕೂ ಹೆಚ್ಚು ಪಕ್ಷಿಗಳನ್ನು ವೀಕ್ಷಿಸಿದ ವಿದ್ಯಾರ್ಥಿಗಳು ಬಹಳ ಸಂತಸವನ್ನು ವ್ಯಕ್ತಪಡಿಸಿದರು. ಶಾಲೆಯ ವಿಜ್ಞಾನ ಸಂಘದ ಸಂಯೋಜಕಿ ಶ್ರೀಮತಿ ಮಮತಾ, ಮೈಸೂರ್ ಸೈನ್ಸ್ ಫೌಂಡೇಶನ್‌ನ ಕಾರ್ಯದರ್ಶಿ ಜಿ.ಬಿ.ಸಂತೋಷ್‌ಕುಮಾರ್ ಇತರರಿದ್ದರು.

ಇಂಧನ ಬೆಲೆ ಏರಿಕೆ; ರಾಜ್ಯಪಾಲರಿಗೆ ಮನವಿ ಸಲ್ಲಿಸಲು ಎಬಿಪಿಪಿ ನಿರ್ಧಾರ



ಮೈಸೂರು, ಜೂ. 17–ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಚಾಮುಂಡಿಪುರಂನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಇಂಧನ ಬೆಲೆ ಏರಿಕೆ ಖಂಡಿಸಿ, ರಾಜ್ಯಪಾಲರು ಮಧ್ಯ ಪ್ರವೇಶಿಸುವಂತೆ ಕೋರಿ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

ಈ ವೇಳೆ ಮಾತನಾಡಿದ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಸಿ.ಎಸ್.ಚಂದ್ರಶೇಖರ್, ಲೋಕಸಭಾ ಚುನಾವಣೆ ನಂತರ ರಾಜ್ಯದ ವಾಹನ ಸವಾರರಿಗೆ ರಾಜ್ಯ ಸರ್ಕಾರ ಪೆಟ್ರೋಲ್ 3 ರೂ, ಡೀಸೆಲ್ 3.50 ರೂ. ದರ ಹೆಚ್ಚಳದ ಮೂಲಕ ಗ್ಯಾರಂಟಿ ಬರೆ ನೀಡಿದೆ. ಅಂತರ ರಾಷ್ಟ್ರೀಯ ತೈಲ ಬೆಲೆ ಕಂಪನಿಗಳು ಪ್ರತಿದಿನ ಬೆಳಗ್ಗೆ 6 ಗಂಟೆಗೆ ಹೊಸ ಭಾರತೀಯ ತೈಲಬೆಲೆಗಳನ್ನು ಬಿಡುಗಡೆ ಮಾಡುತ್ತವೆ. ಇಲ್ಲಿ ಯಾವುದೇ ಏರಿಕೆಗಳು ಇಲ್ಲದಿದ್ದರೂ ಕೂಡ ರಾಜ್ಯ ಸರ್ಕಾರ ತೆರಿಗೆ ಹೆಚ್ಚಿಸಿ, ವಾಹನ ಸವಾರರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದರು.

ಒಂದು ಕಡೆ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ ಇನ್ನೊಂದು ಕಡೆ ಗ್ರಾಹಕರ ಜೇಬಿಗೆ ಕತ್ತರಿ ಹಾಕೋ ಕೆಲಸವನ್ನು ರಾಜ್ಯ ಸರ್ಕಾರ ಮಾಡಿದ್ದು ಇದು ಅತ್ಯಂತ ಅವೈಜ್ಞಾನಿಕ ಕ್ರಮವಾಗಿದೆ. ಗ್ರಾಹಕರು ಬೀದಿಗಿಳಿಯುವ ಮುಂಚೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯನ್ನು ತಕ್ಷಣ ಹಿಂಪಡೆಯಬೇಕೆಂದು ಒತ್ತಾಯಿಸಿದರು. ಇದೇ ವೇಳೆ ಹಿರಿಯ ವಕೀಲ ರವೀಂದ್ರ, ಅಪೂರ್ವ ಸುರೇಶ್, ಸಚಿನ್ ನಾಯಕ್, ಜಯರಾಮ್, ದಯಾನಂದ್, ಸುಚಿತ್ರ, ಆದರ್ಶ, ಚಕ್ರಪಾಣಿ, ಶ್ರೀನಿವಾಸ್, ಮೋಹನ್ ಕುಮಾರ್ ಇನ್ನಿತರರು ಹಾಜರಿದ್ದರು.

ಉಚಿತ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು, ಜೂ. 17– ಮೈಸೂರಿನ ಅಮೃತಾಂಶು ಟ್ರಸ್ಟ್, ನಾರಾಯಣ ಹೃದಯಾಲಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ,



ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ, ಕೆ.ಆರ್.ಆಸ್ಪತ್ರೆ ಸಂಯುಕ್ತ ಆಶ್ರಯದಲ್ಲಿ ಜೂ.20ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ 2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ ಇಲ್ಲಿ ಉಚಿತ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.9945270646, 88867259815 ಸಂಪರ್ಕಿಸಬಹುದು.

ಆಧ್ಯಾತ್ಮಿಕ ಜ್ಞಾನದಿಂದ ಯುವಕರು ಮನೋಬಲ ಹೆಚ್ಚಿಸಿಕೊಳ್ಳಲು ಸಾಧ್ಯ

ವ್ಯಕ್ತಿತ್ವ ವಿಕಸನ ಮೌನ ಭಟ್ಟಿ ಕಾರ್ಯಕ್ರಮ ಉದ್ಘಾಟಿಸಿದ ಬ್ರಹ್ಮಾ ಕುಮಾರ ಶಕ್ತಿರಾಜ್ ಅಭಿಮತ



ಮೈಸೂರು, ಜೂ. 17– ಇಂದಿನ ಯುವಕರಲ್ಲಿ ನಕಾರಾತ್ಮಕತೆ ಹೆಚ್ಚಾಗುತ್ತಿದ್ದು, ಸಮಾಜದಲ್ಲಿ ಅಶಾಂತಿ ಮೂಡುತ್ತಿದೆ. ಸಕಾರಾತ್ಮಕತೆಗೆ ಆಧಾರ ಆಧ್ಯಾತ್ಮಿಕತೆಯಾಗಿದೆ. ಆಧ್ಯಾತ್ಮಿಕತೆಯು ಯುವಜನರಲ್ಲಿ ಮನೋಬಲವನ್ನು ಮೂಡಿಸಿ ಸುಖಮಯ ಸಮಾಜವನ್ನು ಸ್ಥಾಪಿಸಲು ಸಾಧ್ಯ ಎಂದು ಅಬು ಪರ್ವತದಿಂದ ಆಗಮಿಸಿರುವ ಅಂತರರಾಷ್ಟ್ರೀಯ ಮನೋಬಲ ತರಬೇತುದಾರ ರಾಜಯೋಗಿ ಬ್ರಹ್ಮಾ ಕುಮಾರ ಶಕ್ತಿರಾಜ್ ಅಭಿಪ್ರಾಯಪಟ್ಟರು.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಜ್ಞಾನ ಸರೋವರ ರಾಜಯೋಗ ರಿಟ್ರೀಟ್ ಸೆಂಟರ್‌ನಲ್ಲಿ ಯುವಾ ಬ್ರಹ್ಮಾ ಕುಮಾರ, ಬ್ರಹ್ಮಾಕುಮಾರಿಯರಿಗಾಗಿ ಐದು ದಿನಗಳ ವ್ಯಕ್ತಿತ್ವ ವಿಕಸನ ಮೌನ ಭಟ್ಟಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸ್ವಚ್ಛ ಮತ್ತು ಆರೋಗ್ಯ ಸಮಾಜಕ್ಕಾಗಿ ಆಧ್ಯಾತ್ಮಿಕ ಸಶಕ್ತೀಕರಣ ಬಹಳ ಅವಶ್ಯಕ. ಆಧ್ಯಾತ್ಮಿಕ ಸಂಪನ್ನ ಮತ್ತು ಸಂಪೂರ್ಣತೆ ಜೀವನಕ್ಕಾಗಿ ತಮ್ಮನ್ನು ತಾವು ವಿಶ್ವ ಕಲ್ಯಾಣದ ಸೇವೆಯಲ್ಲಿ ತೊಡಗಿಸಿಕೊಳ್ಳಲು ತುಂಬಾ ಅವಶ್ಯಕವಾಗಿದೆ. ದುಃಖವನ್ನು ಎಂದು ಯಾರಿಗೂ ಕೊಡಬಾರದು. ದುಃಖವನ್ನು ಕೊಟ್ಟರೆ ದುಃಖದಿಂದಲೇ ಸಾಯಬೇಕಾಗುತ್ತದೆ ಸುಖವನ್ನು ಕೊಡುವುದರಿಂದ ಎಲ್ಲರಿಂದ ಆಶೀರ್ವಾದ ಪ್ರಾಪ್ತಿಯಾಗುತ್ತದೆ ಎಂದರು.

ಕಾರ್ಯಕ್ರಮದ ಆಯೋಜಕರಾದ ಮೈಸೂರು ಉಪವಲಯದ ಈಶ್ವರೀಯ ವಿಶ್ವವಿದ್ಯಾಲಯಗಳ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜೀ ಮಾತನಾಡಿ, ಬ್ರಹ್ಮಾಕುಮಾರ ಶಕ್ತಿರಾಜ್ ಅವರು ಪ್ರೇರಣದಾಯಕ ಭಾಷಣಕಾರರಾಗಿ ಪ್ರಖ್ಯಾತರಾಗಿದ್ದಾರೆ. ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಪರ್ಯಟನೆ ಮಾಡಿ ಭಾರತೀಯ ಸಂಸ್ಕೃತಿಯ ಮತ್ತು ಆಧ್ಯಾತ್ಮದ ಸೊಗಡನ್ನು ತಮ್ಮ ಪ್ರೇರಣದಾಯಕ ಮಾತುಗಳಿಂದ ಪಸರಿಸುತ್ತಾ ಜನರಲ್ಲಿ ಹೊಸ ಸಂಚಲನ ಮೂಡಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಮೈಸೂರು ನಗರಕ್ಕೆ ಆಗಮಿಸಿ ನಮ್ಮ ಯುವಾ ಬ್ರಹ್ಮಾಕುಮಾರ, ಬ್ರಹ್ಮಾಕುಮಾರಿಯರಿಗೆ ಪ್ರೇರಣೆ ನೀಡುತ್ತಿರುವುದು ನಮ್ಮ ಸೌಭಾಗ್ಯ ಎಂದರು.

ಕಾರ್ಯಕ್ರಮದಲ್ಲಿ ಓಂ ಶಾಂತಿ ನ್ಯೂ ಸರ್ವಿಸ್‌ನ ಬಿ.ಕೆ.ಆರಾಧ್ಯ, ಪ್ರಾಂಶುಪಾಲ ಬಿ.ಕೆ.ರಂಗನಾಥ್ ಶಾಸ್ತ್ರೀಜಿ, ಬಿ.ಕೆ. ಶಾರದಾ, ಬಿ.ಕೆ.ಪ್ರಾಣೇಶ್, ಬಿ.ಕೆ.ನಾಗರಾಜ್, ಬಿ.ಕೆ. ಧನಲಕ್ಷ್ಮೀ, ಆರೋಗ್ಯ ಇಲಾಖೆಯ ಗೀತಾ, ಇಂಜಿನಿಯರ್ ಮಹೇಶ್, ಅರ್ಚಕರಾದ ಸ್ವಾಮೀಜಿ, ಬಿಕೆ ಸಂತೋಷ್ ಇದ್ದರು.

ಭಾರತದ ಸಂವಿಧಾನ ಮನುಷ್ಯನ ಘನತೆ ಎತ್ತಿ ಹಿಡಿಯುತ್ತದೆ

ದತ್ತಿ ಉಪನ್ಯಾಸದಲ್ಲಿ ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಎಚ್.ಬಿಲ್ಲಪ್ಪ ಅಭಿಮತ



ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಹಿರಿಯ ಮುತ್ಸದ್ದಿ ಕೆ.ಪುಟ್ಟಸ್ವಾಮಿಯವರ ನೆನಪಿಗಾಗಿ 5ನೇ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎಚ್.ಬಿಲ್ಲಪ್ಪ ಉದ್ಘಾಟಿಸಿದರು.

ಮೈಸೂರು, ಜೂ. 17– ಸೂರ್ಯ-ಚಂದ್ರ, ಮಳೆ, ಬಿಸಿಲು, ಗಾಳಿ ಎಲ್ಲವೂ ಪ್ರಕೃತಿಯ ಕೈಯ್ಯಲ್ಲಿದೆ. ಅವೇನಾದರೂ ಮನುಷ್ಯನ ಕೈಯಲ್ಲಿದ್ದಿದ್ದರೆ ಆತನ ಸ್ವಾರ್ಥಕ್ಕೆ ಅವೆಲ್ಲವು ಬಳಕೆಯಾಗುತ್ತಿದ್ದವು. ತನಗಾಗದವರಿಗೆ ಮನುಷ್ಯ ಅವೆಲ್ಲವನ್ನು ದಕ್ಕದಂತೆ ಮಾಡುತ್ತಿದ್ದ. ಭಾರತದ ಪ್ರಜೆಗಳಾದ ನಾವು ಎಂದು ಶುರು ವಾಗುವ ಭಾರತದ ಸಂವಿಧಾನವು ಮನುಷ್ಯನ ಘನತೆಯನ್ನು ಎತ್ತಿಹಿಡಿಯುತ್ತದೆ. ವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿ ಘನತೆ, ಮಾನವ ಹಕ್ಕುಗಳ ಕುರಿತು ಭಾರತದ ಸಂವಿಧಾನ ನೀಡುವಷ್ಟು ಒತ್ತನ್ನು ಭಾರತದಲ್ಲಿ ಮತ್ಯಾವ ಗ್ರಂಥವು ನೀಡುವುದಿಲ್ಲ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎಚ್.ಬಿಲ್ಲಪ್ಪ ಹೇಳಿದರು.

ವಿದ್ಯಾವರ್ಧಕ ಕಾನೂನು ಕಾಲೇಜಲ್ಲಿ ಹಿರಿಯ ಮುತ್ಸದ್ದಿ ಕೆ.ಪುಟ್ಟಸ್ವಾಮಿಯವರ ನೆನಪಿಗಾಗಿ 5ನೇ ದತ್ತಿ ಉಪನ್ಯಾಸ ಕಾರ್ಯಕ್ರಮದ ಭಾಗವಾಗಿ ಆಯೋಜಿಸಿದ್ದ ಸಾಂವಿಧಾನಿಕ ಮೌಲ್ಯಗಳು ಕುರಿತ ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ಭಾರತದ ಮಹಿಳೆಯರ ಸ್ಥಿತಿಗತಿಗಳು ಅತ್ಯಂತ ಶೋಚನೀಯವಾಗಿದ್ದವು. ಎಲ್ಲೆಡೆಯೂ ತಾರತಮ್ಯವನ್ನು ಭಾರತೀಯ ಮಹಿಳೆಯರು ಪ್ರತಿನಿತ್ಯ ಅನುಭವಿಸಲೇಬೇಕಿತ್ತು. ಇಂತಹ ವಿಷಮ ಸ್ಥಿತಿಯನ್ನು ತೊಡೆದುಹಾಕಿದ್ದೇ ಭಾರತದ ಸಂವಿಧಾನ. ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಉದ್ಯೋಗ ಮೊದಲಾದ ಕ್ಷೇತ್ರಗಳಲ್ಲಿ ಮಹಿಳೆಯ ರಕ್ಷಣೆ ಮತ್ತು ಆತ್ಮ ಗೌರವಗಳಿಗಾಗಿ ಭಾರತ ಸಂವಿಧಾನದ ಕಾರಣದಿಂದಲೇ ಕೇಂದ್ರ, ರಾಜ್ಯ ಸರ್ಕಾರಗಳು ಅನೇಕ ಅಭಿವೃದ್ಧಿಪೂರಕ ಯೋಜನೆಗಳನ್ನು ರೂಪಿಸಿ ಜಾರಿಗೆ ತರುವಂತಾಯಿತು ಎಂದು ನ್ಯಾಯಮೂರ್ತಿ ಬಿಲ್ಲಪ್ಪ ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ ಮಾತನಾಡಿ, ಕಾನೂನು ವ್ಯಾಸಂಗಕ್ಕೆ ಈ ತಲೆಮಾರಿನ ಯುವಜನತೆ ಆಸಕ್ತಿ ತೋರುವುದು ನಿಜಕ್ಕೂ ಹೆಮ್ಮೆಪಡುವಂತದ್ದು. ಮೆಡಿಕಲ್, ಇಂಜಿನಿಯರಿಂಗ್ ಕಲಿಕೆಗೆ ಹೆಚ್ಚು ಒತ್ತು ನೀಡುತ್ತಿದ್ದ ವಿದ್ಯಾರ್ಥಿಗಳು ಈಗ ಕಾನೂನು ಕಲಿಯಲು ಬರುತ್ತಿದ್ದಾರೆ. ಸ್ವಾತಂತ್ರ್ಯೋತ್ತರದ ಮೊದಲ ದಿನಗಳಲ್ಲಿ ಕರ್ನಾಟಕದಲ್ಲಿ ಹೆಚ್ಚು ಕಾನೂನು ಕಾಲೇಜುಗಳು ಇರಲಿಲ್ಲ. ಆಗ ಕರ್ನಾಟಕದ ಬಹುತೇಕ ವಿದ್ಯಾರ್ಥಿಗಳು ದಿಲ್ಲಿ, ಪುಣೆ, ಮಹಾರಾಷ್ಟ್ರಗಳಲ್ಲಿ ಕಲಿಯಲು ಹೋಗುತ್ತಿದ್ದರು. ಆ ಸಂದರ್ಭದಲ್ಲಿ ಕೆ.ಪುಟ್ಟಸ್ವಾಮಿಯವರ ದೂರದೃಷ್ಟಿಯಿಂದ ಮೈಸೂರಿನಲ್ಲಿ ಕಾನೂನು ಕಾಲೇಜುಗಳು ಶುರುವಾದವು. ವಿದ್ಯಾವರ್ಧಕ ಕಾನೂನು ಕಾಲೇಜು ಐವತ್ತು ವರ್ಷಗಳನ್ನು ಪೂರೈಸಿದ್ದು ಒಂದು ಸ್ಮರಣೀಯ ಸಂಗತಿಯೇ ಸರಿ. ಈಗ ಪರಿಸ್ಥಿತಿ ಸಾಕಷ್ಟು ಸುಧಾರಿಸಿದೆ. ಕರ್ನಾಟಕದಲ್ಲಿಯೇ ನೂರಕ್ಕೂ ಹೆಚ್ಚು ಕಾನೂನು ಕಾಲೇಜುಗಳು, ಹತ್ತಕ್ಕೂ ಹೆಚ್ಚಿನ ಕಾನೂನು ವಿಶ್ವವಿದ್ಯಾಲಯಗಳಲ್ಲಿ ಕಾನೂನು ಕಲಿಕೆಗೆ ಅವಕಾಶವಿದೆ. ಕಾನೂನು ಓದಿಗೆ ಕರ್ನಾಟಕ ಇಡೀ ದೇಶದಲ್ಲಿಯೇ ಮಾದರಿ ರಾಜ್ಯವಾಗಿದೆ ಎಂದು ಹೇಳಿದರು.

ಇದೇ ವೇಳೆ ವಿದ್ಯಾವರ್ಧಕ ಕಾನೂನು ಕಾಲೇಜಿನ ವಾರ್ಷಿಕ ಪತ್ರಿಕೆ 'ವಿಕಾಸ' ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಹಾಗೂ ಕೆ.ಪುಟ್ಟಸ್ವಾಮಿಯವರ ಪುತ್ರ ಪಿ.ವಿಶ್ವನಾಥ್, ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿ ಸದಸ್ಯ ಶಿವಲಿಂಗಯ್ಯ, ಕೆ.ಪುಟ್ಟಸ್ವಾಮಿಯವರ ಮತ್ತೊಬ್ಬ ಪುತ್ರ ಡಾ.ಪಿ.ಚಂದ್ರಶೇಖರ್, ವಿದ್ಯಾವರ್ಧಕ ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ.ಪಿ.ದೀಪು ಇದ್ದರು.

ಕಿಕ್ಕೇರಿಯಲ್ಲಿ ಸಡಗರದ ಬಕ್ರೀದ್



ಕಿಕ್ಕೇರಿ, ಜೂ.17– ಪಟ್ಟಣದಲ್ಲಿ ಮುಸ್ಲಿಂ ಬಾಂಧವರು ಬಕ್ರೀದ್ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಣೆ ಮಾಡಿದರು.

ಪಟ್ಟಣದಲ್ಲಿನ ಜಮೀಂಯಾ ಮಸೀದಿಯಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದ ನಂತರ ಕೋಟೆ ಗಣಪತಿ, ಆಂಜನೇಯ, ಉಪ್ಪರಿಗೆ ಬಸವೇಶ್ವರ, ಅಂಗಡಿ ಬೀದಿಯಲ್ಲಿ ಮೆರವಣಿಗೆ ಮೂಲಕ ಸಾಗಿ ಮಂದಗೆರೆ ರಸ್ತೆಯಲ್ಲಿನ ಹೊರವಲಯದಲ್ಲಿರುವ ಈದ್ಗಾ ಮೈದಾನದಲ್ಲಿ ಒಟ್ಟಿಗೆ ಸೇರಿದರು.

ಧರ್ಮಗುರು ಫಕ್ರಿಯಾ ಆಲಂರವರು ಹಣ, ಆಸ್ತಿ, ಮೋಹ ಮರೆತು ತ್ಯಾಗದ ಬದುಕು ಸಾಗಿಸಿ. ತ್ಯಾಗ, ಪರಿಶ್ರಮ, ಸಹನೆ ರೂಢಿಸಿಕೊಳ್ಳಿ. ಏಕತೆ, ಸಮಾನತೆ, ಸೌಹಾರ್ದತೆ ಮೈಗೂಡಿಸಿಕೊಂಡು ಬದುಕಲು ಮುಂದಾಗಬೇಕು ಎಂದು ಕುರಾನ್ ಪಠಣೆ ಮಾಡುವ ಮೂಲಕ ಸಂದೇಶ ನೀಡಿದರು.

ಹೊಸ ಉಡುಗೆ ತೊಡುಗೆ ತೊಟ್ಟು ಪರಸ್ಪರ ಆಲಿಂಗನ ಮಾಡಿಕೊಂಡು ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಮಂದಗೆರೆ ಹಾಗೂ ಆನೆಗೊಳ ಗ್ರಾಮದಲ್ಲಿಯೂ ಮುಸ್ಲಿಂರು ಹೊಸಬಟ್ಟೆ ತೊಟ್ಟು ಅಲ್ಲಿನ ಪ್ರಾರ್ಥಿಸುವ ಮೂಲಕ ಸಂಭ್ರಮದಿಂದ ಆಚರಣೆ ಮಾಡಿದರು.

ಶಾಂತಿನಿಕೇತನ ಶಾಲೆಯಲ್ಲಿ ಚುನಾವಣಾ ಜಾಗೃತಿ



ಭಾರತೀನಗರ, ಜೂ.17– ಮಕ್ಕಳಲ್ಲಿ ನಾಯಕತ್ವ ಗುಣ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ತಿಳಿಸಿಕೊಡುವ ಉದ್ದೇಶದಿಂದ ಶಾಲೆಯಲ್ಲಿ ಮಕ್ಕಳ ಮತದಾನ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಎಂದು ಶಾಂತಿನಿಕೇತನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಎಚ್.ಸಿ.ಉಮೇಶ್ ತಿಳಿಸಿದರು.

ಇಲ್ಲಿನ ಶಾಂತಿನಿಕೇತನ ಶಾಲೆಯಲ್ಲಿ ಆಯೋಜಿಸಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರಾಜ್ಯ ಮತ್ತು ಸಂಸತ್ ಚುನಾವಣೆ ಯಾವ ರೀತಿ ನಡೆಯುತ್ತದೋ ಅದೇ ಮಾದರಿಯಲ್ಲಿ ಚುನಾವಣೆ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ. ಅದರ ಅರಿವನ್ನು ಮನದಟ್ಟು ಮಾಡಿಕೊಡುವ ಉದ್ದೇಶ ಈ ಚುನಾವಣೆಯದ್ದಾಗಿದೆ ಎಂದರು.

ಶಾಲೆಯ ಆಡಳಿತಾಧಿಕಾರಿ ರಾಜಶೇಖರ್ ಅವರು ಮಾತನಾಡಿ, ಚುನಾವಣೆಗಳಲ್ಲಿ ಆಮಿಷಗಳನ್ನು ಒಡ್ಡಿ ಮತಗಳನ್ನು ಕಸಿಯಲು ಪ್ರಯತ್ನಿಸುತ್ತಾರೆ. ಯೋಗ್ಯರಿಗೆ ಮತ ನೀಡಿ ಆಯ್ಕೆಮಾಡಬೇಕು. ಪ್ರಸ್ತುತ ದಿನದಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಇದನ್ನು ಶುದ್ಧೀಕರೀಸಲು ಇಂದಿನ ಯುವ ಪೀಳಿಗೆ ಮುಂದಾಗಬೇಕೆಂದು ಕರೆ ನೀಡಿದರು.

ಶಾಲೆಯಲ್ಲಿ ಆಯೋಜಿಸಿರುವ ಚುನಾವಣಾ ಜಾಗೃತಿ ಕಾರ್ಯಕ್ರಮ ಮುಂದಿನ ದಿನಗಳಲ್ಲಿ ನೀವು ಹೇಗೆ ಮತದಾನ ಮತಬೇಕು, ಎಂತಹವರನ್ನು ಆಯ್ಕೆ ಮಾಡಬೇಕೆಂಬುದನ್ನು ತಿಳಿಸಿಕೊಡುತ್ತಿದೆ ಎಂದರು.

ಈ ಚುನಾವಣೆಯಲ್ಲಿ 30 ವಿದ್ಯಾರ್ಥಿಗಳು ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. 3ನೇ ತರಗತಿಯಿಂದ 10 ನೇ ತರಗತಿಯ ವಿದ್ಯಾರ್ಥಿಗಳು ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು. ಅತೀ ಹೆಚ್ಚು ಯಾರು ಮತವನ್ನು ಪಡೆಯುತ್ತಾರೋ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ ಇನ್ನುಳಿದ 6 ವಿದ್ಯಾರ್ಥಿಗಳಿಗೆ ಮಂತ್ರಿಮಂಡಲ ರಚಿಸಲಾಗುವುದು ಎಂದರು.

ಶಾಲೆಯ ವಿದ್ಯಾರ್ಥಿಗಳು ಆಧಾರ್ ಕಾರ್ಡ್ ಹಿಡಿದು ಸರತಿ ಸಾಲಿನಲ್ಲಿ ನಿಂತು ಹರ್ಷದಿಂದ ಮತದಾನ ಮಾಡಿದರು. ಶಾಲೆಯ 2 ಕೊಠಡಿಯಲ್ಲಿ ಮತದಾನ ಪ್ರಕ್ರಿಯೆ ನಡೆಯಿತು.

ಶಾಲೆಯ ಮುಖ್ಯಚುನಾವಣಾ ಆಯುಕ್ತರಾಗಿ ಮುಖ್ಯಶಿಕ್ಷಕ ದೇವೇಗೌಡ ಅವರು ಕಾರ್ಯನಿರ್ವಹಿಸಿದರು. ಚುನಾವಣಾಧಿಕಾಯಾಗಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಮಂಗಳಗೌರಮ್ಮ, ರಂಜಿತ್ ಕುಮಾರ್, ಹನುಮಂತಪ್ಪ, ರಘು, ನಿಶ್ಕಲ, ಪಲ್ಲವಿ, ಶೋಭಾ, ಸರೋಜಮ್ಮ, ಪ್ರಮೋದಿನಿ, ಸೇರಿದಂತೆ ಹಲವರಿದ್ದರು.

ಪೆಟ್ರೋಲ್, ಡೀಸೆಲ್ ದರ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ

ಮಂಡ್ಯ, ಜೂ.17– ರಾಜ್ಯ ಸರ್ಕಾರ ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆ ಮಾಡಿರುವುದನ್ನು ವಿರೋಧಿಸಿ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಜೆ.ಸಿ. ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು, ಬೈಕ್‌ಗೆ ಹಗ್ಗ ಬಿಗಿದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬಿಂಬಿಸುವಂತಹ ಅಣಕು ಪ್ರದರ್ಶನ ನೀಡಿ, ವಿನೂತನ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದರು. ಕೆಲಕಾಲ ಮಾನವ ಸರಪಳಿ ನಿರ್ಮಿಸಿ ರಸ್ತೆ ಸಂಚಾರಕ್ಕೆ ತಡೆಯೊಡ್ಡಿದರು. ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರು, ವಾಹನ ಸವಾರರಿಗೆ ಹೂ ಕೊಟ್ಟು ಕಿವಿಗೆ ಹೂವಿಟ್ಟ ಸರ್ಕಾರದ ಕ್ರಮವನ್ನು ವಿರೋಧಿಸಿದರು.

ರಾಜ್ಯದ ಹಣಕಾಸು ಪರಿಸ್ಥಿತಿ ಹದಗೆಟ್ಟಿರುವುದಕ್ಕೆ ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆಯೇ ಸಾಕ್ಷಿಯಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವುದಕ್ಕಾಗಿ ರಾಜ್ಯ ಸರ್ಕಾರ ತೈಲ ಬೆಲೆಗಳನ್ನು ಏರಿಕೆ ಮಾಡಿದೆ ಎಂದು ದೂರಿದರು.



ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಲೋಕಸಭೆ ಚುನಾವಣೆ ಸೋಲಿನ ಹತಾಶೆ, ಹದಗೆಟ್ಟಿರುವ ಆರ್ಥಿಕ ಪರಿಸ್ಥಿತಿಯಿಂದ ಆಡಳಿತವನ್ನು ಸಮರ್ಥವಾಗಿ ನಿಭಾಯಿಸಲಾಗುತ್ತಿಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿ ಸದೃಢವಾಗಿದೆ ಎಂದು ಭಂಡತನದಿಂದ ಮಾತನಾಡುವ ರಾಜ್ಯ ಸರ್ಕಾರ, ಅಭಿವೃದ್ಧಿ ಯೋಜನೆಗಳಿಗೆ ಹಣ ನೀಡಲಾಗದಂತಹ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇಶ ಮತ್ತು ರಾಜ್ಯದಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗಿದ್ದು, ಆ ಸಿಟ್ಟನ್ನು ಈಗ ಜನರ ಮೇಲೆ ತೋರಿಸುತ್ತಿದ್ದಾರೆ. ಹಿಂದೆ ಸ್ಟ್ಯಾಂಪ್ ಡ್ಯೂಟಿ ಹೆಚ್ಚಿಸಿದ್ದರು. ವಿದ್ಯುತ್ ದರವನ್ನು ಏರಿಸಲಾಗಿದೆ. ಇವರಿಂದ ಉತ್ತಮ ಆಡಳಿತ ನಿರೀಕ್ಷಿಸಲಾಗುವುದಿಲ್ಲ ಎಂದು ಆರೋಪಿಸಿದರು.

ತೈಲ ಬೆಲೆ ಏರಿಕೆ ಮೂಲಕ ಕಾಂಗ್ರೆಸ್ ಸರಕಾರ ರಾಜ್ಯದ ಜನತೆಯ ಮೇಲೆ ದರ ಏರಿಕೆಯ ಬರೆ ಹಾಕಿರುವುದು ಖಂಡನೀಯ. ಈಗಾಗಲೇ ವಿದ್ಯುತ್ ದರ, ಬಸ್ ಪ್ರಯಾಣ ದರ, ತರಕಾರಿ, ಬೇಳೆಕಾಳುಗಳ ಬೆಲೆ, ಮದ್ಯದ ಬೆಲೆ, ನಂದಿನಿ ಹಾಲು, ಮೊಸರು, ಮಜ್ಜಿಗೆಯ ಬೆಲೆ ಏರಿಸಿರುವುದು ಸರಿಯಲ್ಲ. ಜನರ ಮೇಲೆ ಹೊರೆ ಹೇರಿರುವುದು ಅಕ್ಷಮ್ಯ ಅಪರಾಧ. ಸಿಎಂ ಭಂಡತನ ಬಿಟ್ಟು ಪೆಟ್ರೋಲ್, ಡೀಸೆಲ್ ದರ ಏರಿಕೆ ನಿರ್ಧಾರ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್, ಮುಖಂಡರಾದ ಡಾ.ಸಿದ್ದರಾಮಯ್ಯ, ಎಂ.ರೂಪಾ, ಸಿ.ಟಿ.ಮಂಜುನಾಥ, ವಿದ್ಯಾನಾಗೇಂದ್ರ, ಎಚ್.ಆರ್.ಅರವಿಂದ್, ಎಚ್.ಆರ್.ಅಶೋಕ್, ವಿವೇಕ್, ಕೆಂಪಬೋರಯ್ಯ, ಸತೀಶ್, ಭೀಮೇಶ್, ವಸಂತ್‌ಕುಮಾರ್, ಹನುಮಂತು, ನಿತ್ಯಾನಂದ, ಸಿದ್ದರಾಜು ಗೌಡ, ಎಂ.ಬಿ.ರಮೇಶ, ಪ್ರಸನ್ನ, ಶಿವಕುಮಾರ್, ಮಹಂತಪ್ಪ, ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ವೀರಶೈವ ಲಿಂಗಾಯತ ಮಹಾಸಭೆ ಚುನಾವಣೆ

ಕೆ.ಆರ್.ಪೇಟೆಯಲ್ಲಿ ಪೂರ್ವಭಾವಿ ಸಭೆ

ಕೆ.ಆರ್.ಪೇಟೆ,ಜೂ.17–ಜುಲೈ ತಿಂಗಳು 21 ರಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಹಾಗೂ ಜಿಲ್ಲಾ ಮಟ್ಟದ ಚುನಾವಣೆಯು ಏಕಕಾಲಕ್ಕೆ ನಡೆಯಲಿರುವ ಹಿನ್ನೆಲೆಯಲ್ಲಿ ಕೆ.ಆರ್.ಪೇಟೆ ಪಟ್ಟಣದ ಸುಲೋಚನಮ್ಮ–ರಾಮದಾಸ್ ಸಭಾಂಗಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಪದಾಧಿಕಾರಿಗಳು ಹಾಗೂ ಮುಖಂಡರ ಸಮ್ಮುಖದಲ್ಲಿ ಚುನಾವಣಾ ಪೂರ್ವಭಾವಿ ಸಭೆಯು ತಾಲೂಕು ಘಟಕದ ಅಧ್ಯಕ್ಷ ವಿ.ಎಸ್.ಧನಂಜಯಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಭಾಗವಹಿಸಿದ್ದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮುಖಂಡ ಎಲ್‌ಐಸಿ ಶಿವಪ್ಪ ಮಾತನಾಡಿ, ಈಗಾಗಲೇ ಐದು ವರ್ಷದ ಅವಧಿಗೆ ತಾಲೂಕು ಅಧ್ಯಕ್ಷರಾಗಿದ್ದ ವಿ.ಎಸ್.ಧನಂಜಯಕುಮಾರ್ ನಮ್ಮ ಸಮುದಾಯದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. 15 ಕೋಟಿ ಬೆಲೆ ಬಾಳುವ ಸಮುದಾಯದ ನಿವೇಶನವು ನ್ಯಾಯಾಲಯದ ಹಂತದಲ್ಲಿದೆ. ಅದರ ಬಗ್ಗೆ ತಮ್ಮ ಸ್ವಂತ ಖರ್ಚಿನಲ್ಲಿ ವ್ಯಾಜ್ಯವನ್ನು ಆಡುತ್ತಿದ್ದಾರೆ. ಅಲ್ಲದೆ ಸಮುದಾಯದಲ್ಲಿ ಯಾವುದೇ ವ್ಯಕ್ತಿ ಸಂಕಷ್ಟಕ್ಕೆ ಸಿಲುಕಿದರೆ ಅವರಿಗೆ ಯಾವುದಾದರೂ ರೂಪದಲ್ಲಿ ಸಹಾಯವನ್ನು ಮಾಡುತ್ತಾ ಬಂದಿದ್ದಾರೆ. ಮುಂದೆ ಬರುವ ನಮ್ಮ ಸಮುದಾಯದ ಚುನಾವಣೆಯಲ್ಲಿ ಮತ್ತೊಮ್ಮೆ ಅಧ್ಯಕ್ಷರಾಗಿ ಆಯ್ಕೆಯಾಗಿ ನಮ್ಮ ಸಮುದಾಯದ ಅಭಿವೃದ್ಧಿಗೆ ಶ್ರಮಿಸಲು ವಿ.ಎಸ್.ಧನಂಜಯಕುಮಾರ್ ಅವರಿಗೆ ಆಶೀರ್ವದಿಸುವಂತೆ ಸಭೆಯಲ್ಲಿ ಮನವಿ ಮಾಡಿದರು.



ಪಟ್ಟಣದ ಸುಲೋಚನಮ್ಮ–ರಾಮದಾಸ್ ಸಭಾಂಗಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಚುನಾವಣಾ ಪೂರ್ವಭಾವಿ ಸಭೆ, ಸಭಾದ ತಾಲೂಕು ಘಟಕದ ಅಧ್ಯಕ್ಷ ವಿ.ಎಸ್.ಧನಂಜಯಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಿತು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಮತ್ತೊಮ್ಮೆ ಸ್ಪರ್ಧಾಕಾಂಕ್ಷಿ ವಿ.ಎಸ್.ಧನಂಜಯಕುಮಾರ್ ಮಾತನಾಡಿ, ನನ್ನ ಅಧಿಕಾರದ ಅವಧಿಯಲ್ಲಿ ಕೊರೋನ ಎಂಬ ಮಹಾಮಾರಿಯ ದರ್ಶನದಿಂದ ಹಾಗೂ ನಮ್ಮ ಸಮುದಾಯದಲ್ಲೂ ಕೆಲವು ಮುಖಂಡರಿಂದ ಮೊದಮೊದಲು ಅಸಹಕಾರದಿಂದ ಅಭಿವೃದ್ಧಿಯು ಮರೀಚಿಕೆಯಾಯಿತು.ಆದರೂ ನನ್ನ ಶಕ್ತಿ ಮೀರಿ ಸಮುದಾಯದ ಅಭಿವೃದ್ಧಿಗೆ ದುಡಿದಿದ್ದೇನೆ. ಮುಂದೆಯೂ ಸಹ ನನ್ನ ಸಮುದಾಯದ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಯೋಜನೆಗಳನ್ನು ರೂಪಿಸಲು ಯೋಜನೆ ಹಾಕಿಕೊಂಡಿದ್ದೇನೆ. ನನ್ನ ಬೆಂಬಲಿಗರು ನನ್ನನ್ನು ಮುಂದಿನ ಅವಧಿಗೂ ನೀವೇ ಅಧ್ಯಕ್ಷರಾಗಬೇಕು ಎಂದು ಹಠ ಹಿಡಿದಿದ್ದಾರೆ. ಆದ್ದರಿಂದ ಮುಂದಿನ ದಿನಗಳಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಚುನಾವಣೆಯಲ್ಲಿ ನನ್ನನ್ನು ಮತ್ತೊಮ್ಮೆ ಆಶೀರ್ವದಿಸುವ ವಿಶ್ವಾಸವಿದೆ. ನನ್ನ ಉಸಿರಿರುವ ತನಕವೂ ಸಮುದಾಯದ ಪರವಾಗಿ ಯಾವುದೇ ಹೋರಾಟಕ್ಕೆ ಸಿದ್ಧ ಹಾಗೂ ಸಮುದಾಯಕ್ಕೆ ಬದ್ಧನಾಗಿರುತ್ತೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಉಪಾಧ್ಯಕ್ಷ ಆನಂದ್ (ಅಖಿಲ ಭಾರತ ವೀರಶೈವ ಲಿಂಗಾಯತ ಜಿಲ್ಲಾ ಸಂಘದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಾಕಾಂಕ್ಷಿ), ತಾಲೂಕು ವೀರಶೈವ ಮಹಾಸಭಾ ಪ್ರಧಾನ ಕಾರ್ಯದರ್ಶಿ ಬೊಮ್ಮಲಾಪುರ ಬಿ.ಎಸ್.ಈರಪ್ಪ, ಕಾರ್ಯದರ್ಶಿ ಮಹದೇಶ್, ನಿರ್ದೇಶಕರಾದ ಡಿ.ಸಿ.ಕುಮಾರ್, ಎಲ್‌ಐಸಿ ಶಿವಪ್ಪ ಎಂ.ಎಸ್.ಶಿವಮೂರ್ತಿ, ಸಮುದಾಯದ ಮುಖಂಡರಾದ ಮಂಚಿಬೀಡು ಬಸವಲಿಂಗಪ್ಪ, ಲಿಂಗಾಪುರ ಶಿವಪ್ಪ, ಚಿಕ್ಕಬಸಪ್ಪ, ಸೋಮನಾಥಪುರ, ಮಲ್ಲೇಶ್, ಶಿವಶಂಕರಪ್ಪ, ನಂಜುಂಡಪ್ಪ, ಯಲಾದಹಳ್ಳಿ ಪರಮೇಶ್, ಕೇಬಲ್ ಗುಂಡ, ಶಿವಕುಮಾರ್, ಮಹದೇವಣ್ಣ, ಮಹೇಶ್, ಯಡಿಯೂರಪ್ಪ, ಕುಮಾರ್, ನಾಡಬೋಗನಹಳ್ಳಿ ಶಿವಪ್ಪ, ಲೋಕೇಶ್, ವೀರಭದ್ರಪ್ಪ, ಮಹಾದೇವಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕುಡಿಯುವ ನೀರಿನ ಕಾಮಗಾರಿಗೆ ಶಂಕುಸ್ಥಾಪನೆ

ಕೆ.ಆರ್.ಪೇಟೆ, ಜೂ.17– ತಾಲೂಕಿನ ಶೀಳನೆರೆ ಹೋಬಳಿಯ ಚನ್ನಾಪುರ ಗ್ರಾಮದ ಕುಡಿಯುವ ನೀರಿನ ಕಾಮಗಾರಿಗೆ ಶಾಸಕರಾದ ಹೆಚ್.ಟಿ.ಮಂಜು ಶಂಕುಸ್ಥಾಪನೆ ಮಾಡಿದರು.

ಚನ್ನಾಪುರ ಗ್ರಾಮದಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಜಲಜೀವನ್ ಯೋಜನೆ ಅಡಿಯಲ್ಲಿ ಸುಮಾರು 23 ಲಕ್ಷ ಮೊತ್ತದಲ್ಲಿ ಮನೆಗಳಿಗೆ ಕುಡಿಯುವ ನೀರಿನ ನಳ ಸಂಪರ್ಕ ವ್ಯವಸ್ಥೆ ಕಲ್ಪಿಸುವ ಯೋಜನೆಗೆ ಶಂಕುಸ್ಥಾಪನೆ ಮಾಡಿ ಮಾತನಾಡಿದ ಅವರು, ತಾಲೂಕಿನ ಎಲ್ಲಾ ಗ್ರಾಮಗಳಿಗೂ ಜಲಜೀವನ್ ಮಿಷನ್ ಯೋಜನೆ ಅಡಿಯಲ್ಲಿ ಶುದ್ಧ ಕುಡಿಯುವ ನೀರಿನ ಯೋಜನೆ ಕಲ್ಪಿಸುವ ಯೋಜನೆಗೆ ಚಾಲನೆ ನೀಡಲಾಗಿದೆ. ಈಗಾಗಲೇ ನೂರಾರು ಗ್ರಾಮಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ತಾಲೂಕಿನ ಜನತೆಗೆ ಉತ್ತಮ ಆರೋಗ್ಯ, ಶುದ್ಧ ಕುಡಿಯುವ ನೀರು, ರಸ್ತೆ, ಸ್ವಂತ ಸೂರು, ಒದಗಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆಂದು ಹೆಚ್.ಟಿ.ಮಂಜು ಹೇಳಿದರು.

ಈ ಸಂದರ್ಭದಲ್ಲಿ ಸಹಾಯಕ ಇಂಜಿನಿಯರ್ ಪ್ರವೀಣ್, ಹರಳಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಯೋಗೇಶ್, ಮಾಜಿ ಅಧ್ಯಕ್ಷರಾದ ಚನ್ನಾಪುರ ಸಣ್ಣೇಗೌಡ, ಸದಸ್ಯರು ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ವಾಲ್ಮೀಕಿ ಕಲ್ಯಾಣ ನಿಗಮ ಹಗರಣದಲ್ಲಿ ಡಿಕೆಶಿಗೂ ಟ್ಯಾಕ್ಸ್: ಶಾಸಕ ಮುನಿರಾಜು ಹೊಸ ಬಾಂಬ್!



ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಕಲ್ಯಾಣ ನಿಗಮದ ಹಗರಣ ಆರೋಪ ಹಿನ್ನೆಲೆಯಲ್ಲಿ ಸಚಿವ ಬಿ.ನಾಗೇಂದ್ರ ಅವರು ರಾಜೀನಾಮೆ ನೀಡಿದ್ದರು. ಇದರ ಬೆನ್ನಲ್ಲೇ ಸರ್ಕಾರದ ವಿರುದ್ಧ ಸರಣಿ ಆರೋಪಗಳು ಕೇಳಿ ಬರುತ್ತಿವೆ. ಬೆಂಗಳೂರಿನಲ್ಲಿ ಭಾನುವಾರ ಮಾತನಾಡಿದ ದಾಸರಹಳ್ಳಿ ಬಿಜೆಪಿ ಶಾಸಕ ಎಸ್.ಮುನಿರಾಜು ಅವರು, ಅಗತ್ಯ ಮೂಲಸೌಕರ್ಯ ಕಾಮಗಾರಿಗಳಿಗೆ ಡಿಕೆ.ಶಿವಕುಮಾರ್ ಅವರಿಗೂ ಶೇ.8ರಷ್ಟು ತೆರಿಗೆ ಇದೆ ಎಂದು ಆರೋಪಿಸಿದರು. ಶೇ.18ರಷ್ಟು ಜಿಎಸ್‌ಟಿ, ಶೇ.2ರಷ್ಟು ಸೆಸ್, ಶೇ.2ರಷ್ಟು ತೆರಿಗೆ ಮತ್ತು ಶೇ.8ರಷ್ಟು ಡಿಕೆಶಿ ತೆರಿಗೆ ವಿಧಿಸಲಾಗುತ್ತಿದೆ. 75 ಲಕ್ಷ ರೂಪಾಯಿ ಅನುದಾನದಲ್ಲಿ ಲಂಚಗಳಿಗೆ ಹಣ ಹೋದರೆ, ಅಭಿವೃದ್ಧಿಗೆ ಏನು ಉಳಿಯುತ್ತದೆ ಎಂದು ಪ್ರಶ್ನಿಸಿದ್ದಾರೆ. ಈ ಹಿಂದೆ ರಾಜರಾಜೇಶ್ವರಿನಗರ ಶಾಸಕ ಎನ್.ಮುನಿರತ್ನ ಅವರು, ತಮ್ಮ ಕ್ಷೇತ್ರದ ಸುಮಾರು 126 ಕೋಟಿ ರೂ.ಗಳ ಅನುದಾನ ಮತ್ತು ಅಭಿವೃದ್ಧಿ ಹಣವನ್ನು ಕಡಿತಗೊಳಿಸಿ ಇತರ ಕ್ಷೇತ್ರಗಳಿಗೆ ನೀಡಲಾಗಿದೆ ಎಂದು ಆರೋಪಿಸಿದ್ದರು. ಈ ವಿಚಾರವಾಗಿ ಗಾಂಧಿ ಪ್ರತಿಮೆ ಎದುರು ಧರಣಿ ಕುಳಿತಿದ್ದರು. ನಂತರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದರು. ಈ ನಡುವೆ ಬಿಜೆಪಿ ನಾಯಕರ ಶೇ.8ರಷ್ಟು ಡಿಕೆಶಿ ತೆರಿಗೆ ಕುರಿತು ಪ್ರತಿಕ್ರಿಯೆ ನೀಡಲು ಸಂಸದೆ ಶೋಭಾ ಕರಂದ್ಲಾಜೆಯವರು ನಿರಾಕರಿಸಿದ್ದಾರೆ. ಆದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಕಾನೂನು ಮತ್ತು ಸುವ್ಯವಸ್ಥೆ ವಿಫಲವಾಗಿದೆ ಎಂದು ಹೇಳಿದರು.

ಮೈಸೂರಿನ ಶೈಕ್ಷಣಿಕ ಪ್ರಗತಿಯಲ್ಲಿ ರಾಜೇಂದ್ರ ಶ್ರೀಗಳ ಪಾತ್ರವಿದೆ

ಹಿರಿಯ ಸಾಹಿತಿ ಬನ್ನೂರು ರಾಜು ಸ್ಮರಣೆ

ಮೈಸೂರು, ಜೂ.17(ಎಸ್‌ಬಿಡಿ)– ಮೈಸೂರು ನಗರ ಶಿಕ್ಷಣ ಕಾಶಿ ಎಂದು ಪ್ರಸಿದ್ಧಿಗೊಳ್ಳುವಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಕೊಡುಗೆ ಅಪಾರವಾಗಿದೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಸ್ಮರಿಸಿದರು.

ಮೈಸೂರಿನ ಜೆಎಸ್‌ಎಸ್ ಬಡಾವಣೆಯ ಶಕ್ತಿನಗರದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದ ಸಹಯೋಗದಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಪೂರ್ವದಲ್ಲೇ ಶಿಕ್ಷಣದ ಮಹತ್ವ ಅರಿತಿದ್ದ ರಾಜೇಂದ್ರ ಶ್ರೀಗಳು, ಯಾರೂ ಕೂಡ ಅದರಲ್ಲೂ ಗ್ರಾಮೀಣ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂದು ಶಾಲೆ ಆರಂಭಿಸಿದರು. ಕೇವಲ ಐದಾರು ಮಕ್ಕಳಿಂದ ಶಾಲೆ ಪ್ರಾರಂಭಿಸಿದ್ದು, ಜೆಎಸ್‌ಎಸ್ ಮಹಾವಿದ್ಯಾಪೀಠವಾಗಿ ಜಗದಗಲ ವ್ಯಾಪಿಸಿದೆ ಎಂದರು.



ಮೈಸೂರು ಶಕ್ತಿನಗರದ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ವಿವಿಧ ಶಾಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಶಿಕ್ಷಣವೊಂದಿದ್ದರೆ ಜೀವನದಲ್ಲಿ ಯಾವುದೇ ಸಮಸ್ಯೆಗಳನ್ನೂ ಎದುರಿಸಿ ಸಾಧಿಸಬಹುದು. ಸರ್ವ ಸಮಸ್ಯೆಗಳಿಗೂ ಶಿಕ್ಷಣವೇ ಸಿದ್ದೌಷಧಿ. ಆದ್ದರಿಂದ ಎಷ್ಟೇ ಕಷ್ಟವಾದರೂ ಶಿಕ್ಷಣದಿಂದ ದೂರ ಉಳಿಯಬಾರದು. ಶಿಕ್ಷಣವನ್ನು ಜೀವನದ ಬೆಳಕೆಂದು ಅರಿಯಬೇಕು. ಮುಂದಿನ ವಿದ್ಯಾಭ್ಯಾಸದ ದೃಷ್ಟಿಯಿಂದ ಹೆಚ್ಚು ಅಂಕಗಳ ಅಗತ್ಯವಿದೆ. ಆದರೆ ಅಂಕಗಳೇ ಜೀವನವಲ್ಲ. ಹಾಗಾಗಿ ಅಂಕಗಳ ಜೊತೆಗೆ ವಿದ್ಯಾರ್ಥಿದೆಸೆಯಲ್ಲೇ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಸ್ಪರ್ಧಾ ಜಗತ್ತಿನಲ್ಲಿ ಅಂಕಗಳ ಬೆನ್ನತ್ತಿ ನಮ್ಮ ನೆಲದ ಮೌಲ್ಯಾಧಾರಿತ ಸಂಸ್ಕೃತಿಯನ್ನು ಎಂದಿಗೂ ಮರೆಯಬಾರದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಗಿರಿಯಾಭೋವಿಪಾಳ್ಯ ಸರ್ಕಾರಿ ಶಾಲೆಯ ಪಲ್ಲವಿ, ಜೆಎಸ್‌ಎಸ್ ಪ್ರೌಢಶಾಲೆಯ ದುರ್ಗಾಬಾಯಿ, ಸಂತ ಶಿಶುನಾಳ ಶರೀಫ್ ಪ್ರೌಢಶಾಲೆಯ ಎಸ್.ಮಧು, ಗೌಸಿಯಾನಗರ ಶಾಲೆಯ ಸಬಿಯಾ ಅಂಜುಂ, ಶಕ್ತಿನಗರ ಜೆಎಸ್‌ಎಸ್ ಪ್ರೌಢಶಾಲೆ ಮೆಹರ್‌ಬಾನು ಮತ್ತು ಅಜುಂ ಮಹಮದಿ, ಸಿದ್ಧಾರ್ಥನಗರ ಜೆಎಸ್‌ಎಸ್ ಪ್ರೌಢಶಾಲೆಯ ಆರ್.ರಂಜಿತಾ, ರಾಘವೇಂದ್ರನಗರದ ಸರ್ಕಾರಿ ಶಾಲೆಯ ಆರ್.ಐಶ್ವರ್ಯಾ ಅವರಿಗೆ ಕಲಾವಿದೆ ಹಾಗೂ ಲೇಖಕಿ ಡಾ.ಜಮುನಾ ರಾಣಿ ಮಿರ್ಲೆ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಶಕ್ತಿನಗರ ಜೆಎಸ್‌ಎಸ್ ಪ್ರೌಢಶಾಲೆ ಮುಖ್ಯಶಿಕ್ಷಕ ಡಿ.ನಾಗರಾಜಪ್ಪ, ವೈದ್ಯ ಜೆ.ಪ್ರಸನ್ನಕುಮಾರ್, ಶಿಕ್ಷಕರಾದ ಜಿ.ಬಿ.ಮಹೇಶ್, ಬಿ.ರೇಣುಕಾ ಪ್ರಸಾದ್, ಎಂ.ಮಂಜುಳಾ, ಜ್ಯೋತಿ, ಎನ್.ರೂಪಶ್ರೀ, ಸಿ.ರಶ್ಮಿ, ಮಹಾಲಕ್ಷ್ಮಿ ಮತ್ತಿತರರು ಪಾಲ್ಗೊಂಡಿದ್ದರು.

ಅನುರಾಗ್ ಬಸವರಾಜ್ ಛಾಯಾಚಿತ್ರಗಳಿಗೆ ಮೂರು ಅಂತಾರಾಷ್ಟ್ರೀಯ ಚಿನ್ನದ ಪದಕ





ಮೈಸೂರು, ಜೂ. 17– ಮೈಸೂರಿನ ವನ್ಯಜೀವಿ ಛಾಯಾಗ್ರಾಹಕ ಅನುರಾಗ್ ಬಸವರಾಜ್ (ಎಂ.ಎಸ್. ಬಸವಣ್ಣ) ಅವರಿಗೆ ಅಂತಾರಾಷ್ಟ್ರೀಯ ಛಾಯಾಚಿತ್ರ ಸ್ಪರ್ಧೆಗಳಲ್ಲಿ ಮೂರು ಚಿನ್ನದ ಪದಕ, 1 ಕಂಚಿನ ಪದಕ ಹಾಗೂ 3 ಹಾನರಬಲ್ ಮೆನ್ಶನ್ ಪ್ರಶಸ್ತಿ ಗಳು ಲಭಿಸಿವೆ. ಫೋಟೋಗ್ರಾಫಿಕ್ ಸೊಸೈಟಿ ಆಫ್ ಅಮೆರಿಕ (ಪಿಎಸ್‌ಎ) ಸಂಸ್ಥೆಯು ಆಯೋಜಿಸಿದ್ದ ಫೋಟೋಮೇನಿಯಾ ಸರ್ಕ್ಯೂಟ್– 2024 ಅಂತಾರಾಷ್ಟ್ರೀಯ ಮಟ್ಟದ ಛಾಯಾಚಿತ್ರ ಸ್ಪರ್ಧೆಯಲ್ಲಿ ಪ್ರವಾಸ ಛಾಯಾಚಿತ್ರ ವಿಭಾಗದಲ್ಲಿ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಛಾಯಾಚಿತ್ರಕ್ಕೆ ಪಿಎಸ್‌ಎ ಚಿನ್ನದ ಪದಕ ಲಭಿಸಿದೆ. ಕೊಲ್ಕತ್ತಾದಲ್ಲಿ ಎಪಿಜೆ ನ್ಯಾಷನಲ್ ಸಲೂನ್ ಸಂಸ್ಥೆ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಫೋಟೋ ಜರ್ನಲಿಸಂ ವಿಭಾಗದಲ್ಲಿ ಕಿಚ್ಚು ಹಾಯಿಸುವ ಚಿತ್ರಕ್ಕೆ ಎಪಿಜೆ ಚಿನ್ನದ ಪದಕ ಲಭಿಸಿದೆ.



ನವದೆಹಲಿಯಲ್ಲಿ ಲೈಟ್ಸ್ ಆಫ್ ನೇಚರ್ ಸಂಸ್ಥೆ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಲಾಠಿ ಚಾರ್ಜ್ ಚಿತ್ರಕ್ಕೆ ಜೆಎಸ್‌ವಿ ಚಿನ್ನದ ಪದಕ ಲಭಿಸಿದೆ. ಪಶ್ಚಿಮ ಬಂಗಾಳದಲ್ಲಿ ಪೀಕಾಕ್ ಇಂಟರ್‌ನ್ಯಾಷನಲ್ ಸಲೂನ್ ಸಂಸ್ಥೆ ನಡೆಸಿದ ಲೈಟ್ಸ್ ಆಫ್ ನೇಚರ್ 2024 ಸ್ಪರ್ಧೆಯಲ್ಲಿ ಮರಿಯೊಂದಕ್ಕೆ ಆಹಾರ ಉಣಿಸುತ್ತಿರುವ ರಿವರ್ಟರ್ನ್ ಪಕ್ಷಿಯ ಚಿತ್ರಕ್ಕೆ ಸರ್ಟಿಫಿಕ್ ಆಫ್ ಅವಾರ್ಡ್ ಲಭಿಸಿದೆ. ಅಲ್ಲದೆ, ಹುಲಿಯೊಂದು ಹಂದಿಯನ್ನು ಅಟ್ಟಿಸುತ್ತಿರುವ ಚಿತ್ರಕ್ಕೆ ಎಪಿಜೆ ಕಂಚಿನ ಪದಕ ಬಂದಿದೆ. ವಿವಿಧ ಸಂಸ್ಥೆಗಳಿಂದ 3 ಹಾನರಬಲ್ ಮೆನ್ಶನ್ ಲಭಿಸಿದೆ.

ಈ ಸ್ಪರ್ಧೆಗಳಲ್ಲಿ ಅಮೆರಿಕಾ, ಆಫ್ರಿಕಾ, ಕೆನಡಾ, ಚೀನಾ, ಸ್ಪೇನ್, ಬ್ರೇಜಿಲ್, ಇಂಗ್ಲೆಡ್, ಫ್ರಾನ್ಸ್, ಗ್ರೀಸ್, ಹಾಕಾಂಗ್, ಇಟಲಿ, ಕಜಕಿಸ್ತಾನ್, ಮಲೇಷ್ಯಾ, ನಾರ್ವೆ, ರಷ್ಯಾ, ಕೊರಿಯಾ, ಭಾರತ ಸೇರಿದಂತೆ ವಿವಿಧ ದೇಶಗಳ ಛಾಯಾಗ್ರಾಹಕರು ಪಾಲ್ಗೊಂಡಿದ್ದರು.

ಬೆಳೆ ವಿಮೆ, ರೈತ ಆತ್ಮಹತ್ಯೆ ಮೇಲ್ಮನವಿ ಇತ್ಯರ್ಥ ಸಭೆ



ಬೆಳೆ ವಿಮೆ, ರೈತ ಆತ್ಮಹತ್ಯೆ ಮೇಲ್ಮನವಿ ಇತ್ಯರ್ಥ ಹಾಗೂ ಜಲಾನಯನ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಗೆ ಅನುಮೋದನೆ ಸಂಬಂಧ ಡಿಸಿ ಡಾ.ಕೆ.ವಿ.ರಾಜೇಂದ್ರ ತಮ್ಮ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಜೂ.17– ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬೆಳೆ ವಿಮೆ, ರೈತ ಆತ್ಮಹತ್ಯೆ ಮೇಲ್ಮನವಿ ಇತ್ಯರ್ಥ ಹಾಗೂ ಜಲಾನಯನ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಗೆ ಅನುಮೋದನೆ ಸಂಬಂಧ ಸಭೆಯನ್ನು ನಡೆಸಲಾಯಿತು.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ರೈತ ಆತ್ಮಹತ್ಯೆ ಹಾಗೂ ಆಕಸ್ಮಿಕ ಮರಣ ಸಂಬಂಧ 3 ತಿಂಗಳು ಮೇಲ್ಪಟ್ಟ ಆತ್ಮಹತ್ಯೆ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸಮಿತಿಯ ಪ್ರಕರಣಗಳನ್ನು ಇತ್ಯರ್ಥ ಮಾಡಿದರು.

2022–23ನೇ ಸಾಲಿನಲ್ಲಿ ಬೆಳೆ ವಿಮೆಗೆ ನೋಂದಣಿ ಮಾಡಿಕೊಂಡಿದ್ದ ರೈತರಲ್ಲಿ ಬೆಳೆ ಸಮೀಕ್ಷೆಗೆ ತಾಳೆಯಾಗದೇ ಇರುವ ಪ್ರಕರಣಗಳನ್ನು, ತಿರಸ್ಕೃತ ಹಾಗೂ ತಾಳೆಯಾಗಿರುವ ಪ್ರಕರಣಗಳನ್ನು ಅರ್ಹವೆಂದು ಪರಿಗಣಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ–WDC–2.0 ಯೋಜನೆಯ 2024–25ನೇ ಸಾಲಿನ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದರು. ಸಭೆಯಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು ಇನ್ನಿತರರಿದ್ದರು.

ಆಮ್ ಆದ್ಮಿ ಪಕ್ಷಕ್ಕೆ ನೇಮಕ



ಮೈಸೂರು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಆಮ್ ಆದ್ಮಿ ಪಕ್ಷದ ಕಚೇರಿಯಲ್ಲಿ ಕೆ.ಆರ್. ಕ್ಷೇತ್ರದ 50ನೇ ವಾರ್ಡ್ ಅಧ್ಯಕ್ಷರಾಗಿ ಹೇಮಂತ್ ಕುಮಾರ್ ಅವರನ್ನು ನೇಮಕ ಮಾಡಲಾಯಿತು. ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ರಂಗಯ್ಯ, ಜಿಲ್ಲಾ ಸಂಘಟನೆ ಕಾರ್ಯದರ್ಶಿ ವಿಶ್ವನಾಥ್ ಕುಲಕರ್ಣಿ, ಜಿಲ್ಲಾ ಕಾರ್ಯದರ್ಶಿ ಐಶ್ವರ್ಯ, ಸಂಪತ್‌ಕುಮಾರ್ ಉಪಸ್ಥಿತರಿದ್ದರು.

ದೇಶ - ವಿದೇಶ

ಏರ್ ಇಂಡಿಯಾ ವಿಮಾನದ ಆಹಾರದಲ್ಲಿ ಬ್ಲೇಡ್!



ಹೊಸದಿಲ್ಲಿ: ಬೆಂಗಳೂರಿಂದ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋಗೆ ಪ್ರಯಾಣ ಬೆಳೆಸಿದ್ದ ಮಾಥುರೆಸ್ ಪಾಲ್ ಎಂಬ ಪತ್ರಕರ್ತರು, ಏರ್ ಇಂಡಿಯಾ ವಿಮಾನದಲ್ಲಿ ತಮಗೆ ಕೊಡಲಾಗಿದ್ದ ಆಹಾರದಲ್ಲಿ ಲೋಹದ ಬ್ಲೇಡ್ ಸಿಕ್ಕಿದೆ ಎಂದು ಆರೋಪಿಸಿದ್ದಾರೆ. ತಮ್ಮ ಆರೋಪಕ್ಕೆ ಪೂರಕ ಎಂಬಂತೆ ತಮ್ಮ ಆಹಾರದ ಬಟ್ಟಲಿನಲ್ಲಿ ಇದ್ದ ಲೋಹದ ಬ್ಲೇಡ್‌ನ ಫೋಟೋವನ್ನೂ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿದ್ದಾರೆ. ಕಳೆದ ವಾರ ಬೆಂಗಳೂರಿಂದ ಸ್ಯಾನ್ ಫ್ರಾನ್ಸಿಸ್ಕೋಗೆ ಹೊರಟಿದ್ದ ಏರ್ ಇಂಡಿಯಾ ಎಐ 175 ವಿಮಾನದಲ್ಲಿ ಈ ಘಟನೆ ನಡೆದಿದೆ.

ರೋಸ್ಟೆಡ್ ಸ್ವೀಟ್ ಪೊಟ್ಯಾಟೋ ಹಾಗೂ ಫಿಗ್ ಚಾಟ್ ಸವಿಯುತ್ತಿದ್ದ ವೇಳೆ ನನ್ನ ಬಾಯಿಯ ಒಳಗೆ ಲೋಹದ ವಸ್ತು ಒಂದು ಹೊಕ್ಕ ಅನುಭವ ಆಯ್ತು. ಈ ವೇಳೆ ನಾನು ಪರಿಶೀಲನೆ ನಡೆಸಿದಾಗ ಅದು ಲೋಹದ ಬ್ಲೇಡ್ ಎಂದು ತಿಳಿದು ಬಂತು ಎಂದು ಪೌಲ್ ವಿವರಿಸಿದ್ದಾರೆ. ಆದರೆ, ನನಗೆ ಕೊಟ್ಟಿದ್ದ ಸಿಹಿ ಗೆಣಸಿನ ಒಳಗೆ ಲೋಹದ ತುಂಡು ಉಳಿಸಿದ್ದಾರೆ. ನಾನು ನುಂಗುವ ಮುನ್ನ ಚನ್ನಾಗಿ ಅಗಿಯುತ್ತೇನೆ. ಈ ವೇಳೆ ನನ್ನ ಅರಿವಿಗೆ ಬಂತು. ಅದೃಷ್ಟವಶಾತ್ ಯಾವುದೇ ಹಾನಿ ಆಗಿಲ್ಲ. ಹಾಗೆ ನೋಡಿದರೆ ಏರ್ ಇಂಡಿಯಾಗೆ ಕ್ಯಾಟರಿಂಗ್ ಸೇವೆ ನೀಡುವವರ ತಪ್ಪು ಇದು. ಹಾಗೆಂದ ಮಾತ್ರಕ್ಕೆ ಏರ್ ಇಂಡಿಯಾ ಬಗೆಗೆ ನನಗೆ ಇರುವ ದೃಷ್ಟಿಕೋನ ಬದಲಾಗೋದಿಲ್ಲ ಎಂದು ಪೌಲ್ ಬರೆದುಕೊಂಡಿದ್ದಾರೆ.ಜೊತೆಯಲ್ಲೇ ಲೋಹದ ಬ್ಲೇಡ್ ಇರುವ ಆಹಾರದ ಬಟ್ಟಲಿನ ಫೋಟೋವನ್ನೂ ಹಾಕಿದ್ದಾರೆ.

ಚೀನಾದ ಪಬ್ಲಿಕ್ ಟಾಯ್ಲೆಟ್‌ಗೆ ಟೈಮರ್‌ಗಳ ಅಳವಡಿಕೆ!



ಬೀಜಿಂಗ್: ಜನರು ವರ್ಷವಿಡೀ ಒಂದಲ್ಲಾ ಒಂದು ಕಡೆ ಸುತ್ತಾಡುತ್ತಲೇ ಇರುತ್ತಾರೆ. ಎಲ್ಲಾ ಪ್ರವಾಸಿ ತಾಣಗಳಲ್ಲಿ ಏನು ಇಲ್ಲದಿದ್ದರೂ ತೊಂದರೆಯಿಲ್ಲ, ಸಾರ್ವಜನಿಕ ಶೌಚಾಲಯದ ಅಗತ್ಯ ಮಾತ್ರ ತುಂಬಾ ಇರುತ್ತದೆ. ಚೀನಾದ ಪ್ರವಾಸಿ ತಾಣಗಳಲ್ಲಿದ್ದ ಅನಾನುಕೂಲತೆಗೆ ಈಗ ಪರಿಹಾರ ಸಿಕ್ಕಿದೆ.

ಇಲ್ಲಿನ ಪ್ರವಾಸಿ ತಾಣಗಳ ಶೌಚಾಲಯಗಳಿಗೆ ಟೈಮರ್‌ಗಳನ್ನು ಅಳವಡಿಸಲಾಗಿದ್ದು, ಜನರು ಎಷ್ಟು ಸಮಯ ಒಳಗೆ ಇದ್ದಾರೆ ಎಂಬುದನ್ನು ತಿಳಿಸುತ್ತದೆ. ಅದನ್ನು ತೆಗೆಯಬೇಕು ಎನ್ನುವ ಬೇಡಿಕೆಯೂ ಬಂದಿದೆ. ಮಹಿಳಾ ಶೌಚಾಲಯಗಳಲ್ಲಿ ಹೆಚ್ಚಾಗಿ ಅಳವಡಿಸಲಾಗಿದೆ. ಚೀನಾದ ಶಾಂಗ್ಸಿ ಪ್ರಾಂತ್ಯದಲ್ಲಿ ಯುಗಾಂಗ್ ಬೌದ್ಧ ಗ್ರೊಟ್ಟೋಸ್ ಚೀನಾ ಇದೆ. ಇದು ಪುರಾತನ ಬೌದ್ಧ ದೇವಾಲಯವಾಗಿದ್ದು, ಇಲ್ಲಿ 200ಕ್ಕೂ ಹೆಚ್ಚು ಗುಹೆಗಳು ಮತ್ತು ಸಾವಿರಾರು ಬುದ್ಧನ ಪ್ರತಿಮೆಗಳಿವೆ. ಇದು ಯುನೆಸ್ಕೋದಿಂದ ವಿಶ್ವ ಪರಂಪರೆಯ ಸ್ಥಾನಮಾನ ಪಡೆದಿದೆ. ಇಲ್ಲಿ ನಿರ್ಮಿಸಿರುವ ಸಾರ್ವಜನಿಕ ಶೌಚಾಲಯಗಳಿಗೆ ಟೈಮರ್ ಅಳವಡಿಸಲಾಗಿದೆ. ಟೈಮರ್, ಬಾಗಿಲು ಎಷ್ಟು ಸಮಯದವರೆಗೆ ಮುಚ್ಚಲ್ಪಟ್ಟಿದೆ ಎಂದು ಹೇಳುತ್ತದೆ. ಅಂದರೆ ಒಬ್ಬ ವ್ಯಕ್ತಿಯು ಬಾತ್ ರೂಂ ಒಳಗೆ ಎಷ್ಟು ಸಮಯ ಇದ್ದಾರೆ, ಖಾಲಿ ಇರುವ ಬಾತ್‌ರೂಂ ಯಾವುದು ಎಂಬುದು ಇದರಲ್ಲಿ ತಿಳಿಯುತ್ತದೆ.

ಲೈಂಗಿಕ ಕಾರ್ಯಕರ್ತೆಯೊಂದಿಗಿನ ಮೆಸೇಜ್ ಬಯಲು: ಆಪಲ್ ವಿರುದ್ಧ ಕೇಸ್!



ಬ್ರಿಟನ್: ಲೈಂಗಿಕ ಕಾರ್ಯಕರ್ತೆಯೊಂದಿಗಿನ ಮೆಸೇಜ್‌ಗಳನ್ನು ಡಿಲೀಟ್ ಮಾಡಿದ್ದರೂ ಬಯಲುಗೊಂಡ ಹಿನ್ನೆಲೆಯಲ್ಲಿ ಆಪಲ್ ಸಂಸ್ಥೆಯ ವಿರುದ್ಧ ಇಂಗ್ಲೆಂಡ್‌ನ ಉದ್ಯಮಿಯೊಬ್ಬರು ಕೇಸ್ ಹಾಕಿದ್ದಾರೆ. ಫ್ಯಾಮಿಲಿ ಐಮ್ಯಾಕ್‌ನಲ್ಲಿ ಡಿಲೀಟ್ ಆಗಿದ್ದ ಮೆಸೇಜ್‌ಗಳು ಬಯಲಾಗಿ ಈ ವ್ಯಕ್ತಿಯ ಪತ್ನಿ ಕೈಗೆ ಸಿಕ್ಕಿತ್ತು. ಪರಿಣಾಮ ಉದ್ಯಮಿಯ ಪತ್ನಿ ಡಿವೋರ್ಸ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಉದ್ಯಮಿ ಸೆಕ್ಸ್ ವರ್ಕರ್‌ಗಳೊಂದಿಗೆ ಚಾಟ್ ಮಾಡುವುದಕ್ಕಾಗಿ ಐ ಮೆಸೇಜ್ ಬಳಕೆ ಮಾಡುತ್ತಿದ್ದರು. ಇದೇ ಆಪಲ್ ಐಡಿಯ ಮೂಲಕ ಕುಟುಂಬದ ಇನ್ನಿತರ ಉಪಕರಣಗಳು ಸಿಂಕ್ರೋನೈಸೇಷನ್ ಆಗಿತ್ತು. ಪರಿಣಾಮ ಮೆಸೇಜ್‌ಗಳನ್ನೂ ಓದಬಹುದಾಗಿತ್ತು. ಒಂದು ಸಾಧನದಲ್ಲಿ ಸಂದೇಶವನ್ನು ಅಳಿಸುವುದರಿಂದ ಅದನ್ನು ಎಲ್ಲಾ ಲಿಂಕ್ ಮಾಡಿದ ಸಾಧನಗಳಲ್ಲಿ ಮೆಸೇಜ್ ಡಿಲೀಟ್ ಆಗುವುದಿಲ್ಲ ಎಂದು ಆಪಲ್ ಬಳಕೆದಾರರಿಗೆ ತಿಳಿಸಿರಲಿಲ್ಲ ಎಂದು ಉದ್ಯಮಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಉದ್ಯಮಿ ಪತ್ನಿ ಸಂದೇಶಗಳನ್ನು ಕಂಡು ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದು, ಇದರಿಂದ ಆತನಿಗೆ 5 ಮಿಲಿಯನ್ ಪೌಂಡ್‌ಗಳಿಗಿಂತ ಹೆಚ್ಚು ವೆಚ್ಚವಾಗಲಿದೆ ಎಂದು ವರದಿಯಾಗಿದೆ.

ಪನ್ನುನ್ ಹತ್ಯೆಗೆ ಸಂಚು: ಭಾರತ ಮೂಲದ ನಿಖಿಲ್ ಗುಪ್ತಾ ಅಮೆರಿಕಕ್ಕೆ ಹಸ್ತಾಂತರ


ಗುರುಪತ್ವಂತ್ ಪನ್ನುನ್

ವಾಷಿಂಗ್ಟನ್: ಸಿಖ್ ಪ್ರತ್ಯೇಕತಾವಾದಿ ಗುರುಪತ್ವಂತ್ ಸಿಂಗ್ ಪನ್ನುನ್ ಹತ್ಯೆಗೆ ಸಂಚು ರೂಪಿಸಿದ ಆರೋಪ ಎದುರಿಸುತ್ತಿರುವ ಭಾರತ ಮೂಲದ ನಿಖಿಲ್ ಗುಪ್ತಾ ಅವರನ್ನು ಜೆಕ್ ಗಣರಾಜ್ಯದಿಂದ ಅಮೆರಿಕಾಕ್ಕೆ ಹಸ್ತಾಂತರಿಸಲಾಗಿದೆ. ಪನ್ನುನ್ ಹತ್ಯೆ ಸಂಚಿನಲ್ಲಿ ಭಾಗಿಯಾಗಿರುವ ಆರೋಪದ ಹಿನ್ನೆಲೆಯಲ್ಲಿ ನಿಖಿಲ್ ಅವರನ್ನು ಬಂಧಿಸುವಂತೆ ಅಮೆರಿಕಾ ಮನವಿ ಮಾಡಿತ್ತು. ಇದರಂತೆ ಕಳೆದ ವರ್ಷ ಅವರನ್ನು ಜೆಕ್ ಗಣರಾಜ್ಯದಲ್ಲಿ ಬಂಧಿಸಲಾಗಿತ್ತು. ಗುಪ್ತಾ ಅವರನ್ನು ಸದ್ಯ ಬ್ರೂಕ್ಲಿನ್‌ನ ಫೆಡರಲ್ ಮೆಟ್ರೋಪಾಲಿಟನ್ ವಿಚಾರಣಾ ಕೇಂದ್ರದಲ್ಲಿ ಇರಿಸಲಾಗಿದೆ. ಪನ್ನುನ್ ಅವರನ್ನು ಕೊಲ್ಲಲು ವ್ಯಕ್ತಿಯೊಬ್ಬರಿಗೆ ಸುಪಾರಿ ನೀಡಿದ್ದ ಗುಪ್ತಾ, ಅದಕ್ಕೆ 15,000 ಡಾಲರ್ ಪಾವತಿಸಿದ್ದ ಎಂದು ಪ್ರಾಸಿಕ್ಯೂಟರ್ ಆರೋಪಿಸಿದ್ದಾರೆ. ಭಾರತೀಯ ಅಧಿಕಾರಿಯೊಬ್ಬರು ಇದರಲ್ಲಿ ಭಾಗಿಯಾಗಿದ್ದಾರೆ ಎಂದೂ ಆರೋಪಿಸಲಾಗಿದೆ.

ಟ್ವಿಟ್ಟರ್ ಖರೀದಿ ಬಳಿಕ 6 ಸಾವಿರ ನೌಕರರ ವಜಾ



ವಾಷಿಂಗ್ಟನ್ (ಅಮೆರಿಕ): ಬಿಲಿಯನೇರ್ ಉದ್ಯಮಿ ಎಲಾನ್ ಮಸ್ಕ್ 2022ರಲ್ಲಿ ಸುಮಾರು 44 ಬಿಲಿಯನ್ ಅಮೆರಿಕನ್ ಡಾಲರ್ ಹಣ ತೆತ್ತು ಟ್ವಿಟ್ಟರ್ ಸಂಸ್ಥೆ ಖರೀದಿಸಿದ್ದರು. ಬಳಿಕ ಅದರ ಹೆಸರನ್ನು ಎಕ್ಸ್ ಎಂದು ಮರು ನಾಮಕರಣ ಮಾಡುವ ಜೊತೆಯಲ್ಲೇ ಸಾಕಷ್ಟು ಬದಲಾವಣೆಗಳನ್ನೂ ಮಾಡಿದ್ದರು. ಈ ಪೈಕಿ ಉದ್ಯೋಗಿಗಳ ತಲೆದಂಡ ಕೂಡ ಒಂದು. ಬರೋಬ್ಬರಿ 6 ಸಾವಿರ ನೌಕರರನ್ನು ಎಲಾನ್ ಮಸ್ಕ್ ಮನೆಗೆ ಕಳಿಸಿದ್ದರು. ಸಂಸ್ಥೆಯ ಒಟ್ಟು ಉದ್ಯೋಗಿಗಳ ಪೈಕಿ ಶೇ.80 ರಷ್ಟು ಮಂದಿಯನ್ನು ಎಲಾನ್ ಮಸ್ಕ್ ಕಳೆದ 2 ವರ್ಷಗಳಲ್ಲಿ ಕೆಲಸದಿಂದ ಕಿತ್ತು ಹಾಕಿದ್ದಾರೆ ಎಂದು ದಿ ಟೆಲಿಗ್ರಾಫ್ ವರದಿ ಮಾಡಿದೆ! ಸುದ್ದಿ ಸಂಸ್ಥೆಯ ವರದಿ ಪ್ರಕಾರ ಎಕ್ಸ್‌ನ ಸುಮಾರು ಅರ್ಧದಷ್ಟು ನೌಕರರನ್ನು ಎಲಾನ್ ಮಸ್ಕ್ ಕಂಪನಿ ಖರೀದಿಸಿದ ಕೆಲವೇ ತಿಂಗಳಲ್ಲೇ ಗೇಟ್‌ಪಾಸ್ ಕೊಟ್ಟಿದ್ದರು. ಉದ್ಯೋಗಿಗಳನ್ನು ಕೆಲಸದಿಂದ ಕಿತ್ತು ಹಾಕುವ ಮುನ್ನ ಅವರ ಜೊತೆ ಮಾತನಾಡಲು ತಮ್ಮ ಸಹೋದರರಾದ ಜೇಮ್ಸ್ ಮಸ್ಕ್ ಹಾಗೂ ಸ್ಟೀವ್ ಡೇವಿಸ್ ಅವರನ್ನು ಕಳಿಸಿದ್ದರಂತೆ. ಈ ವೇಳೆ ಅವರು ಕೇಳುತ್ತಿದ್ದ ಪ್ರಶ್ನೆ ಒಂದೇ ಒಂದು.. 'ನೀವು ನಿಮ್ಮ ಕೆಲಸವನ್ನು ಸಮರ್ಥಿಸಿಕೊಳ್ಳುತ್ತೀರಾ?' ಈ ಪ್ರಶ್ನೆಗೆ ಉದ್ಯೋಗಿಗಳು ತರಹೇವಾರಿ ಉತ್ತರ ನೀಡಿರಬಹುದು. ಆದರೆ ಅಂತಿಮವಾಗಿ ರಾಜೀನಾಮೆ ತೆಗೆದುಕೊಳ್ಳುವ ಮೂಲಕ ಮೀಟಿಂಗ್ ಅಂತ್ಯವಾಗುತ್ತಿತ್ತು ಎನ್ನಲಾಗಿದೆ.

ವಧು ಹುಡುಕಿಕೊಡುವಲ್ಲಿ ವಿಫಲ: ಮ್ಯಾಟ್ರಿಮೋನಿಗೆ ರೂ.25 ಸಾವಿರ ದಂಡ

ತಿರುವನಂತಪುರಂ: ಕೇರಳ ಮ್ಯಾಟ್ರಿಮೋನಿ ತನಗೆ ವಧು ಹುಡುಕಿಕೊಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದ್ದ ವ್ಯಕ್ತಿಯೊಬ್ಬರಿಗೆ ರೂ.25,000 ಪರಿಹಾರ ನೀಡುವಂತೆ ಎರ್ನಾಕುಲಂನಲ್ಲಿರುವ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಆದೇಶಿಸಿದೆ. ವಧುವಿನ ಅನ್ವೇಷಣೆಗೆ ಮುಂದಾಗಿದ್ದ ಚೇರ್ತಲದ ವ್ಯಕ್ತಿಯೊಬ್ಬರಿಗೆ 3 ತಿಂಗಳ ಚಂದಾದಾರಿಕೆಗೆ ರೂ. 4,100 ಪಾವತಿಸುವಂತೆ ಜಾಲತಾಣದ ಅಧಿಕಾರಿಗಳು ಸೂಚಿಸಿದ್ದರು. ಹಣ ಪಾವತಿಸಿದ ಬಳಿಕ ಜಾಲತಾಣದ ಸಿಬ್ಬಂದಿಯನ್ನು ಸಂಪರ್ಕಿಸಲು ಯತ್ನಿಸಿದಾಗ ಅವರು ಪ್ರತಿಕ್ರಿಯೆ ನೀಡಲಿಲ್ಲ. ಈ ಹಿನ್ನೆಲೆಯಲ್ಲಿ ವ್ಯಕ್ತಿ ಶುಲ್ಕ ಮರುಪಾವತಿಸಬೇಕು ಹಾಗೂ ತನಗೆ ಪರಿಹಾರ ನೀಡಬೇಕು ಎಂದು ಕೋರಿ ಗ್ರಾಹಕ ನ್ಯಾಯಾಲಯದ ಮೊರೆ ಹೋಗಿದ್ದರು.

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬಂದವರಿಗೆ ಅರಮನೆ ನಗರಿ ಅಧ್ವಾನ ದರ್ಶನ

- ರಸ್ತೆ ಹೊಂಡಮಯವಾಗಿ ಸವಾರರಿಗೆ ನರಕಯಾತನೆ
- ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲೇ ಈ ದುಸ್ಥಿತಿಗೆ ಆಕ್ರೋಶ
- ಬಸ್ ಇಳಿಯುತ್ತಿದ್ದಂತೆ ಹಳ್ಳಗಳ ದರ್ಶನ
- ಪ್ರತಿದಿನ ಒಂದಲ್ಲಾ ಒಂದು ಅಪಘಾತ ಗ್ಯಾರಂಟಿ
- ಕಳಪೆ ಕಾಮಗಾರಿ ಇದಕ್ಕೆಲ್ಲಾ ಮೂಲ ಕಾರಣ
- ಈಗಲಾದರೂ ಇತ್ತ ನೋಡುವಿರಾ ಅಧಿಕಾರಿಗಳೇ...!







ಮೈಸೂರು, ಜೂ.17(ಬಿಎಲ್‌ಯು)– ಗರ್ಭಿಣಿ ಸ್ತ್ರೀಯರು ಹೆರಿಗೆಗೆ ಆಸ್ಪತ್ರೆಗೆ ಹೋಗಲೇಬೇಕಿಲ್ಲ. ಮೈಸೂರಿನ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದ ಮುಂದಿನ ರಸ್ತೆಯಲ್ಲಿ ಹಾದು ಹೋದರೆ ಸಾಕು ಹೆರಿಗೆಯಂತೂ ಆಗುತ್ತದೆ. ಹಳ್ಳ ಕೊಳ್ಳಗಳಿಂದ ಕೂಡಿರುವ ಈ ರಸ್ತೆ ಮೈಸೂರಿಗೆ ಬಂದವರಿಗೆ ಅರಮನೆ ನಗರಿಯ ಅಧ್ವಾನ ಕಣ್ಣಿಗೆ ಕಟ್ಟುತ್ತದೆ.

ಮೈಸೂರಿಂದ ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ದಿನದ 24 ಗಂಟೆಯೂ ಇಲ್ಲಿಂದ ನೂರಾರು ಬಸ್‌ಗಳು ಸಂಚರಿಸುತ್ತವೆ. ಪ್ರಯಾಣಿಕರ ದಟ್ಟಣೆ ಜೊತೆಗೆ ವಾಹನ ದಟ್ಟಣೆ ಕೂಡ ಇಲ್ಲಿರುತ್ತದೆ. ಬೆಂಗಳೂರು, ಬೆಳಗಾವಿ, ಗುಲ್ಬರ್ಗಾ, ಬಳ್ಳಾರಿ ಸೇರಿದಂತೆ ಅಂತರ ಜಿಲ್ಲೆಯ ಜೊತೆಗೆ ಕೇರಳ, ತಮಿಳುನಾಡು, ಪಾಂಡಿಚೇರಿ, ಮಹಾರಾಷ್ಟ್ರ ಸೇರಿದಂತೆ ಇತರೆ ರಾಜ್ಯಗಳಿಗೆ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣಗಳಿಂದ ನೂರಾರು ಬಸ್‌ಗಳು ಸಂಚರಿಸುತ್ತವೆ.

ನಿತ್ಯವೂ ಅಪಾರ ಸಂಖ್ಯೆಯ ಪ್ರಯಾಣಿಕರು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬಂದು ಹೋಗುತ್ತಾರೆ. ಆದರೆ ಬಸ್ ನಿಲ್ದಾಣಕ್ಕೆ ಪ್ರವೇಶ ನೀಡುವ ರಸ್ತೆಯಲ್ಲೇ ಜನರಿಗೆ ನರಕದರ್ಶನ ಅನುಭವವಾಗುತ್ತದೆ. ಬೆಂಗಳೂರು–ಊಟಿ ಮಾರ್ಗದ ಈ ರಸ್ತೆ ಪೂರ್ತಿ ಹಳ್ಳ ಬಿದ್ದಿದೆ.

ಕಿರಿದಾಗಿರುವ ರಸ್ತೆಗೆ ಡಿವೈಡರ್ ಅಳವಡಿಸಲಾಗಿದೆ. ರಸ್ತೆಯ ಎರಡು ಬದಿಯಲ್ಲಿರುವ ಹಳ್ಳಗಳು ವಾಹನ ಸವಾರರಿಗೆ ಭಯ ಹುಟ್ಟಿಸುತ್ತದೆ. ರಸ್ತೆ ತುಂಬೆಲ್ಲಾ ಹಳ್ಳ ಇರುವ ಕಾರಣ ವಾಹನ ಸವಾರರು ಹಳ್ಳಗಳಲ್ಲಿ ನಿಧಾನವಾಗಿ ಚಾಲನೆ ಮಾಡಬೇಕು. ಏನಾದರೂ ವೇಗವಾಗಿ ಹೋದರೆ ದ್ವಿಚಕ್ರ ವಾಹನ ಸವಾರರು ಹಳ್ಳಕ್ಕೆ ಬಿದ್ದು ಕೈ ಕಾಲು ಮುರಿದುಕೊಳ್ಳುವುದು ಗ್ಯಾರಂಟಿ. ಇನ್ನು ಬಸ್ಸು, ಕಾರು ಸೇರಿದಂತೆ ಇನ್ನಿತರೆ ವಾಹನಗಳು ಕೂಡ ನಿಧಾನವಾಗಿ ಚಲಿಸಬೇಕು. ಇಲ್ಲದಿದ್ದರೆ ಅಪಘಾತ ಕಟ್ಟಿಟ್ಟಬುತ್ತಿ. ಹಳ್ಳಕ್ಕೆ ಇಳಿಯುವಾಗ ಭಾರಿ ವಾಹನ ಅತ್ತ ಇತ್ತ ವಾಲುವಾಗ ಅಕ್ಕ ಪಕ್ಕದಲ್ಲಿರುವ ಸಣ್ಣ ವಾಹನಗಳಿಗೆ ತಾಗಿ ಜಖಂಗೊಳ್ಳುತ್ತವೆ. ಚಾಲಕರು ಎಷ್ಟೇ ಜಾಗರೂಕತೆ ವಹಿಸಿದರೂ ಹಳ್ಳ ಇರುವ ಕಾರಣ ಇಲ್ಲಿ ಪ್ರತಿ ದಿನ ಒಂದಲ್ಲಾ ಒಂದು ಅಪಘಾತ ಸಂಭವಿಸುತ್ತದೆ ಎಂದು ರಸ್ತೆ ಬದಿ ವ್ಯಾಪಾರಸ್ಥರು ಹೇಳುತ್ತಾರೆ.

> “ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲೇ ಈ ಪರಿಸ್ಥಿತಿಯಾದರೆ ಇನ್ನು ಇತರೆ ಜಿಲ್ಲೆಗಳ ಪರಿಸ್ಥಿತಿ ಹೇಗಿರಬೇಡ ಎಂಬ ಪ್ರಶ್ನೆಗಳು ಕಾಡುತ್ತವೆ. ಮೈಸೂರು ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿ ಯೋಜನೆಗಳ ಕೊಡುಗೆ ನೀಡಿರುವುದಾಗಿ ಸಿದ್ದರಾಮಯ್ಯ ಹೇಳುತ್ತಾರೆ. ಮೈಸೂರಿಗೆ ಬಂದ ಸಂದರ್ಭದಲ್ಲಿ ಒಂದು ಬಾರಿ ಈ ರಸ್ತೆಯಲ್ಲಿ ಹಾದು ಹೋದರೆ ಜನರ ಬವಣೆ ಹೇಗಿರುತ್ತದೆ ಎಂಬ ವಾಸ್ತವತೆಯ ಅರಿವು ಅವರಿಗಾಗುತ್ತದೆ.

ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣ ಮುಂಭಾಗದ ವೆಸ್ಲಿ ಚರ್ಚ್‌ನಿಂದ ಮಲಬಾರ್ ಗೋಲ್ಡ್ ತನಕ ಇದೇ ಪರಿಸ್ಥಿತಿ. ಹಳ್ಳದ ಜೊತೆಗೆ ಇತ್ತೀಚೆಗೆ ಮಾಡಲಾಗಿರುವ ಒಳಚರಂಡಿ ಮಾರ್ಗದಲ್ಲಿ ಕೂಡ ಹಳ್ಳ ಬಿದ್ದಿದ್ದು, ಜೆಲ್ಲಿ ಸುರಿದು ಹಲವು ದಿನ ಕಳೆದರೂ ಇನ್ನು ಡಾಂಬರೀಕರಣ ಮಾಡಿಲ್ಲ.

ಒಳಚರಂಡಿ ಮಾರ್ಗದಲ್ಲಿ ಗುಣಮಟ್ಟದಲ್ಲಿ ಮ್ಯಾನ್ ಹೋಲ್ ನಿರ್ಮಾಣ ಮಾಡಿಲ್ಲ. ಹಾಗಾಗಿ ಸಾರಿಗೆ ಬಸ್‌ಗಳು ಸಂಚರಿಸಿದಾಗ ಅವು ಕುಸಿಯುತ್ತಿವೆ. ಪಾದಚಾರಿಗಳ ದಟ್ಟಣೆ ಹೆಚ್ಚಾಗಿರುವ ಈ ರಸ್ತೆಯಲ್ಲಿ ಅಧ್ವಾನಗಳಿಗೆ ಮಿತಿಯೇ ಇಲ್ಲ. ಹೊರ ಜಿಲ್ಲೆ ಹಾಗೂ ರಾಜ್ಯದಿಂದ ಬಂದ ಪ್ರವಾಸಿಗರು ಸೇರಿದಂತೆ ಇತರರು ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗದ ರಸ್ತೆ ಅಧ್ವಾನ ನೋಡಿ ಶಾಕ್ ಆಗುತ್ತಾರೆ. ಇಲ್ಲೇ ಈ ಪರಿಸ್ಥಿತಿ ಇರಬೇಕಾದರೆ ಇನ್ನು ಮೈಸೂರು ನಗರದಲ್ಲಿ ಯಾವ ಸ್ಥಿತಿ ಇರಬೇಡ ಎಂಬ ಪ್ರಶ್ನೆಗಳು ಅವರನ್ನು ಕಾಡುವುದು ನಿಶ್ಚಿತ.

ಒಳಚರಂಡಿ ಮಾರ್ಗ, ಮ್ಯಾನ್‌ಹೋಲ್ ಹಾಗೂ ಫುಟ್‌ಪಾತ್ ನಿರ್ಮಾಣ, ಡಾಂಬರೀಕರಣ ಸೇರಿದಂತೆ ಇತರೆ ಕಾಮಗಾರಿಗಳನ್ನು ಗುಣಮಟ್ಟದಲ್ಲಿ ಮಾಡಿದರೆ ಇಂತಹ ಸಮಸ್ಯೆ ಬರುವುದಿಲ್ಲ. ಆದರೆ ನಗರಪಾಲಿಕೆಯವರು ಮಾಡುವುದೆಲ್ಲಾ ಕಳಪೆ ಕಾಮಗಾರಿಯಾಗಿರುವ ಕಾರಣ ಇಂತಹ ಅವ್ಯವಸ್ಥೆಗಳು ಕಾಡುತ್ತಿವೆ.

ಬಕ್ರೀದ್ ಹಬ್ಬ: ಗಿಡ ನೆಟ್ಟು ಸೌಹಾರ್ದತೆ ಸಂದೇಶ ಸಾರಿದ ತ್ರಿವೇಣಿ ಗೆಳೆಯರ ಬಳಗ


ಬಕ್ರೀದ್ ಹಬ್ಬದ ಅಂಗವಾಗಿ ನರಸಿಂಹರಾಜ ಕ್ಷೇತ್ರದ ವಾರ್ಡ್ ನಂ.35ರ ತ್ರಿವೇಣಿ ವೃತ್ತದಲ್ಲಿ ತ್ರಿವೇಣಿ ಗೆಳೆಯರ ಬಳಗದಿಂದ ಗಿಡಗಳನ್ನು ನೆಡಲಾಯಿತು.

ಮೈಸೂರು, ಜೂ. 17– ಬಕ್ರೀದ್ ಹಬ್ಬದ ಅಂಗವಾಗಿ ನರಸಿಂಹರಾಜ ಕ್ಷೇತ್ರದಲ್ಲಿರುವ ವಾರ್ಡ್ ನಂ.35ರ ತ್ರಿವೇಣಿ ವೃತ್ತದಲ್ಲಿ ತ್ರಿವೇಣಿ ಗೆಳೆಯರ ಬಳಗದ ವತಿಯಿಂದ ಸೋಮವಾರ ಹಿಂದೂ, ಮುಸಲ್ಮಾನ್ ಜೊತೆಗೂಡಿ ವಿವಿಧ ಜಾತಿಯ ಗಿಡಗಳನ್ನು ನೆಡುವ ಮೂಲಕ ನಾವೆಲ್ಲ ಒಂದು ಎಂಬ ಸಂದೇಶವನ್ನು ಸಾರುವ ಮುಖಾಂತರ ಬಕ್ರೀದ್ ಹಬ್ಬದ ಶುಭ ಕೋರಿದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಬಿಜೆಪಿ ಮುಖಂಡ ಬಿ.ಆನಂದ್, ಇತಿಹಾಸದಲ್ಲಿ ಎರಡು ಸಮುದಾಯಗಳ ಹಬ್ಬಗಳು ಬಂದರೆ ಸೌಹಾರ್ದವಾಗಿ ಆಚರಣೆ ಮಾಡುವ ಪದ್ಧತಿ ನಮ್ಮ ನಾಡಿನಲ್ಲಿದೆ. ಆದರೆ ಕೆಲವು ಕಿಡಿಗೇಡಿಗಳಿಂದ ಎರಡು ಸಮಾಜದಲ್ಲಿ ಶಾಂತಿಯನ್ನು ಕದಡುವ ಯತ್ನಗಳು ನಡೆಯುತ್ತಿದ್ದು, ಆದ್ದರಿಂದ ಎರಡು ಸಮುದಾಯದ ಮುಖಂಡರು ಈ ಬಗ್ಗೆ ಲಕ್ಷ್ಯ ವಹಿಸಿ ಹಬ್ಬಗಳನ್ನು ಆಚರಣೆ ಮಾಡಲು ಮುಂದಾಗಬೇಕು. ಈ ದಿನ ಈ ಯುವಕರು ಒಟ್ಟಾಗಿ ಸೌಹಾರ್ದತೆಯಿಂದ ಹಬ್ಬವನ್ನು ಆಚರಿಸುತ್ತಾ ಬಂದಿರುವುದು ಬಹಳ ಸಂತಸದ ವಿಚಾರ. ಇದೇ ಥರ ಸೌಹಾರ್ದತೆ ಆಚರಣೆ ಪ್ರತಿ ಜಿಲ್ಲೆಯಲ್ಲಿ ಆದರೆ ಬಹಳ ಉತ್ತಮ ಬೆಳವಣಿಗೆ ರಾಜ್ಯದಲ್ಲಿ ಕಾಣಲು ಸಾಧ್ಯವಿದೆ ಎಂದರು.

ಮುಸಲ್ಮಾನ್ ಸಮುದಾಯದ ಯುವ ಮುಖಂಡ ಅಫ್ತಾಬ್ ಅಹಮದ್ ತ್ಯಾಗ ಮತ್ತು ಬಲಿದಾನದ ಹಬ್ಬವೆಂದೇ ಕರೆಯಲಾಗುವ ಮುಸಲ್ಮಾನರ ಪವಿತ್ರ ಹಬ್ಬ ಬಕ್ರೀದ್ ಹಬ್ಬವನ್ನು ಮುಸ್ಲಿಂ ಬಾಂಧವರು ಉತ್ಸಾಹ ಮತ್ತು ಕುಟುಂಬದ ಸದಸ್ಯರೊಂದಿಗೆ ಬಾಂಧವ್ಯ ಬೆರೆತು ಆಚರಿಸುತ್ತಾರೆ ಎಂದರು.

ಇದೇ ಸಂದರ್ಭದಲ್ಲಿ ವಾರ್ಡ್ ಅಧ್ಯಕ್ಷ ಬಸವರಾಜು ಮಸಳ್ಳಿ, ಪ್ರಭಣ್ಣ, ಮಣಿರತ್ನಂ, ಕಿರಣ್, ಗೋವಿಂದ ಮಹೇಶ್, ಆಫ್ತಾಬ್ ಸಲಿಮ್ ಅಕ್ಬರ್, ನಯಾಜ್, ಸುಮ, ಇರ್ಫಾನ್, ಸಮಿಉಲ್ಲಾ ಖಾನ್ ಹಾಗೂ ಇನ್ನಿತರ ಹಿಂದೂ ಹಾಗೂ ಮುಸಲ್ಮಾನ್ ಮುಖಂಡರು ಭಾಗವಹಿಸಿದ್ದರು.

ಪಡುವಾರಹಳ್ಳಿಯಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ


ಪಡುವಾರಹಳ್ಳಿಯ ಶ್ರೀ ವರಸಿದ್ಧಿ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ವಿವಿಧ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಜೂ.17(ಜಿಎ)–ಮೈಸೂರಿನ ವಿಜಯನಗರ ಸಾಂಸ್ಕೃತಿಕ ಸಂಸ್ಥೆ, ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್, ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಕಣ್ಣಿನ ಆಸ್ಪತ್ರೆ, ಮೈಸೂರು ರೋಟರಿ ಪಂಚಶೀಲ ಮತ್ತು ಮೈಸೂರು ಜಿಲ್ಲಾ ಅಂಧತ್ವ ನಿವಾರಣೆ ಸಂಸ್ಥೆ ಇವುಗಳ ಸಂಯುಕ್ತಾಶ್ರಯದಲ್ಲಿ ದಿವಂಗತ ಬಿ.ಎಂ.ಮರಿಗೌಡರ ಸ್ಮರಣಾರ್ಥ ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರವನ್ನು ಸೋಮವಾರ ಪಡುವಾರಹಳ್ಳಿಯ ಶ್ರೀ ವರಸಿದ್ಧಿ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಡಿಎಫ್‌ಆರ್‌ಎಲ್‌ನ ನಿವೃತ್ತ ಪ್ರಾಂಶುಪಾಲರಾದ ಪ್ರೊ.ರಾಮಕೃಷ್ಣ, ಆಧುನಿಕ ಯುಗದಲ್ಲಿ ಎಲ್ಲಾ ತರಹದ ವೈದ್ಯಕೀಯ ವೆಚ್ಚಗಳು ದುಬಾರಿಯಾಗಿವೆ. ಈ ರೀತಿಯ ಉಚಿತ ಶಿಬಿರಗಳು ನಾಗರಿಕ ಸಮಾಜಕ್ಕೆ ತುಂಬ ಅವಶ್ಯಕ. ಅಂಧತ್ವ ಎದುರಾಗಲು ನಮ್ಮಗಳ ದೇಹದಲ್ಲಿ ಪೌಷ್ಟಿಕಾಂಶದ ಕೊರತೆಯೇ ಮೂಲ ಕಾರಣವಾಗಿದ್ದು, ಅಂಧತ್ವದಿಂದ ಹೊರಬರಲು ಪೌಷ್ಟಿಕಾಂಶಯುಕ್ತ ಆಹಾರವನ್ನು ಹೆಚ್ಚಿನ ಮಟ್ಟದಲ್ಲಿ ಸೇವಿಸುವಂತೆ ಕರೆ ನೀಡಿದರು.

ಶಿಬಿರದಲ್ಲಿ ಒಟ್ಟು 85 ಮಂದಿ ತಪಾಸಣೆಗೆ ಒಳಗಾಗಿ ಅದರ ಪೈಕಿ 22 ಮಂದಿಗೆ ಶಸ್ತ್ರಚಿಕಿತ್ಸೆಗಾಗಿ ಎಂಆರ್‌ಸಿ ಕಣ್ಣಿನ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಕಾರ್ಯಕ್ರಮದಲ್ಲಿ ವಿಜಯನಗರ ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿ ರಾಮಕೃಷ್ಣ, ಪತ್ರಿಕಾ ಕಾರ್ಯದರ್ಶಿ ಪಡುವಾರಹಳ್ಳಿ ಬಿ.ಶ್ರೀನಿವಾಸ್, ಸಹ ಕಾರ್ಯದರ್ಶಿ ಆರ್.ರವೀಂದ್ರ, ನ್ಯಾಯಬೆಲೆ ಅಂಗಡಿ ಗೋಕುಲಂ ಧರ್ಮರಾಜು, ಮಾಜಿ ಕಾರ್ಪೋರೇಟರ್ ಸುಶೀಲಾ ಮರೀಗೌಡ, ವಸಂತ, ಶ್ರೀಕಂಠ, ಬಿ.ಎಂ. ನಾಗೇಶ್, ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್ ಅಧ್ಯಕ್ಷ ಮೆಲ್ಲಹಳ್ಳಿ ಮಹದೇವಸ್ವಾಮಿ, ವೆಲ್ಡಿಂಗ್ ಶ್ರೀನಿವಾಸ್, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಚೇಗೌಡನಕೊಪ್ಪಲು ರವಿ, ಬಿ.ಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರ ಮಟ್ಟದ ಟೆನ್ನಿಸ್ ಪಂದ್ಯಾವಳಿಯಲ್ಲಿ ಸಿಂಗಲ್ಸ್, ಡಬಲ್ಸ್‌ನಲ್ಲಿ ಮೈಸೂರು ಪದ್ಮಪ್ರಿಯಾ ಚಾಂಪಿಯನ್

ಭಾರತದಲ್ಲಿ 3ನೇ ರ್‍ಯಾಂಕ್ ಆಟಗಾರ್ತಿ ಕೀರ್ತಿಗೆ ಪಾತ್ರವಾದ ಹಿರಿಯ ಅರಣ್ಯಾಧಿಕಾರಿ ಡಾ.ಮಾಲತಿಪ್ರಿಯಾ–ರಮೇಶ್‌ಕುಮಾರ್ ದಂಪತಿ ಪುತ್ರಿ

ಮೈಸೂರು,ಜೂ.17(ಎಂಟಿವೈ)– ಹೈದರಾಬಾದ್‌ನಲ್ಲಿ ನಡೆದ 12 ವರ್ಷದೊಳಗಿನ ರಾಷ್ಟ್ರಮಟ್ಟದ ಟೆನ್ನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಪದ್ಮಪ್ರಿಯಾ ರಮೇಶ್‌ಕುಮಾರ್ ಸಿಂಗಲ್ಸ್ ಹಾಗೂ ಡಬಲ್ಸ್‌ನಲ್ಲಿ ಚಾಂಪಿಯನ್ ಆಗಿ ಅಖಿಲ ಭಾರತ ಮಟ್ಟದಲ್ಲಿ 3ನೇ ರ್‍ಯಾಂಕ್ ಆಟಗಾರ್ತಿಯಾಗಿ ಹೊರಹೊಮ್ಮಿದ್ದಾರೆ.

ಹೈದರಾಬಾದ್‌ನಲ್ಲಿರುವ ಸಾನಿಯಾ ಮಿರ್ಜಾ ಟೆನ್ನಿಸ್ ಅಕಾಡೆಮಿ (ಎಸ್‌ಎಂಟಿಎ)ಯ ಎಐಟಿಎ ಹಾಗೂ ಟಿಎಸ್‌ಟಿಎ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 12 ವರ್ಷದೊಳಗಿನ ರಾಷ್ಟ್ರಮಟ್ಟದ ಟೆನ್ನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಪದ್ಮಪ್ರಿಯಾ ರಮೇಶ್ ಕುಮಾರ್ ಸಿಂಗಲ್ಸ್ ಪಂದ್ಯಾವಳಿಯಲ್ಲಿ ಫೈನಲ್ ಪ್ರವೇಶಿಸಿದ್ದರು.

ತೀವ್ರ ಹಣಾಹಣಿಯಿಂದ ಕೂಡಿದ್ದ ಫೈನಲ್ ಪಂದ್ಯದಲ್ಲಿ ಕರ್ನಾಟಕ ಪ್ರತಿನಿಧಿಸಿದ್ದ ಪದ್ಮಪ್ರಿಯಾ ರಮೇಶ್‌ಕುಮಾರ್ ಎದುರಾಳಿ ತೆಲಂಗಾಣದ ಜೋಹಾ ಖುರೇಷಿ ಅವರನ್ನು 6–3, 6–2 ಪಾಯಿಂಟ್ಸ್‌ನಿಂದ ಮಣಿಸಿ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು.

ಡಬಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಕರ್ನಾಟಕದ ಪದ್ಮಪ್ರಿಯಾ, ಮಹಾರಾಷ್ಟ್ರದ ಸಾರಾ ಫೆಂಗ್ಸ್ ಅವರೊಂದಿಗೆ ಸೇರಿ ಎದುರಾಳಿ ತಮಿಳುನಾಡಿನ ಕನಿಷ್ಕಾ ಗೋವಿಂದ್ ಹಾಗೂ ಮಹಾರಾಷ್ಟ್ರದ ಮೈರಾಶೈಕ್ ಜೋಡಿಯನ್ನು 6–4, 6–2 ಪಾಯಿಂಟ್ಸ್‌ನಲ್ಲಿ ಮಣಿಸಿ, ಗೆಲುವು ಸಾಧಿಸಿದರು.

ಈ ಪಂದ್ಯಾವಳಿಯಲ್ಲಿ ಗೆಲುವಿನಿಂದ ಪದ್ಮಪ್ರಿಯಾ ರಮೇಶ್ ಅಖಿಲ ಭಾರತ ಮಟ್ಟದಲ್ಲಿ 12 ವರ್ಷದೊಳಗಿನ ಟೆನ್ನಿಸ್ ಆಟಗಾರರ ವಿಭಾಗದಲ್ಲಿ ಮೂರನೇ ರ್‍ಯಾಂಕ್ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅರಣ್ಯ ಇಲಾಖೆಯ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿಪ್ರಿಯಾ ಹಾಗೂ ಹುಲಿ ಯೋಜನೆಯ ಸಿಎಫ್ ಡಾ.ಪಿ.ರಮೇಶ್‌ಕುಮಾರ್ ದಂಪತಿ ಪುತ್ರಿಯಾಗಿರುವ ಪದ್ಮಪ್ರಿಯಾ ಮೈಸೂರಿನ ಕೂರ್ಗಳ್ಳಿಯಲ್ಲಿರುವ ಎಕ್ಸೆಲ್ ಪಬ್ಲಿಕ್ ಶಾಲೆಯಲ್ಲಿ 7ನೇ ತರಗತಿ ವಿದ್ಯಾರ್ಥಿನಿಯಾಗಿದ್ದಾರೆ.


ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ವಿಜೇತರಾಗಿ ಪ್ರಶಸ್ತಿ ಪಡೆದ ಪದ್ಮಪ್ರಿಯಾ ರಮೇಶ್‌ಕುಮಾರ್.

ಪಿಹೆಚ್.ಡಿ ಪದವಿ



ಮೈಸೂರು, ಜೂ.17– ಡಾ.ಹೆಚ್.ಎಸ್.ಯತಿರಾಜ ಅವರ ಮಾರ್ಗದರ್ಶನದಲ್ಲಿ ಎನ್.ಮಹೇಶ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಕುವೆಂಪು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಮಿತ್ರ ಮಂಗಳವಾರ 18 ಜೂನ್ 2024

ಸರ್ಕಾರದ ವಿರುದ್ಧ ಬಿಜೆಪಿ ಸೈಕಲ್ ಮೆರವಣಿಗೆ

ಪೆಟ್ರೋಲ್, ಡೀಸೆಲ್ ದರ ಏರಿಕೆ ಖಂಡಿಸಿ ಕಾರ್ಯಕರ್ತರ ಪ್ರತಿಭಟನೆ


ಮಡಿಕೇರಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಖಂಡಿಸಿ ಬಿಜೆಪಿ ಮುಖಂಡರು ಸೈಕಲ್ ಮೆರವಣಿ ನಡೆಸಿದರು.

ಮಡಿಕೇರಿ, ಜೂ.17–ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ದರ ಏರಿಕೆ ಮಾಡಿರುವುದನ್ನು ಖಂಡಿಸಿ ಜಿಲ್ಲಾ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಜಮಾಯಿಸಿದ ಪಕ್ಷ ಕಾರ್ಯಕರ್ತರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ಪ್ರತಿಭಟನಾಕಾರರು, ಬಿಜೆಪಿ ಕಚೇರಿಯಿಂದ ಕಾರಿಗೆ ಹಗ್ಗ ಕಟ್ಟಿ ಜನರಲ್ ತಿಮ್ಮಯ್ಯ ವೃತ್ತದ ಬಳಿಗೆ ಎಳೆದುಕೊಂಡು ಬಂದರು. ನಂತರ ರಾಜ್ಯ ಸರ್ಕಾರ ಜನವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿ, ತಕ್ಷಣ ಬೆಲೆ ಏರಿಕೆ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಬಳಿಕ ಮಾಜಿ ಶಾಸಕರಾದ ಕೆಜಿಬೋಪಯ್ಯ, ಅಪ್ಪಚ್ಚು ರಂಜನ್, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರು ಸರ್ಕಾರದ ಬೆಲೆ ಏರಿಕೆ ನೀತಿ ಖಂಡಿಸಿ ಸೈಕಲ್ ಮೇಲೇರಿ ಮೆರವಣಿಗೆ ನಡೆಸಿದರು. ಈ ಸಂದರ್ಭ ಮಾತನಾಡಿದ ಮಾಜಿ ಶಾಸಕ ಕೆ.ಜಿ.ಬೋಪಯ್ಯ, ಜೂ.15 ರಂದು ರಾಜ್ಯದ ಪಾಲಿಗೆ ಕರಾಳ ದಿನವಾಗಿದೆ. ರಾಜ್ಯದಲ್ಲಿ 1 ವರ್ಷದ ಹಿಂದೆ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಲೋಕಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋಲು ಕಂಡಿದೆ. ಇದೀಗ ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡುವ ಮೂಲಕ ಜನಸಾಮಾನ್ಯರ ಮೇಲೆ ಹೊರ ಹೊರಿಸಿದೆ ಎಂದು ಆರೋಪಿಸಿದರು.

ಸರ್ಕಾರ ಉಚಿತ ಭಾಗ್ಯಗಳಿಗೆ ಹಣ ಹೊಂದಿಸಲು ಸಾಧ್ಯವಾಗದೇ ಇದೀಗ ದರ ಏರಿಕೆ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಸರ್ಕಾರ ನೌಕರರಿಗೆ ಸಂಬಳ ನೀಡಲು ಕೂಡ ಹಣ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಲಿದೆ. ಸರ್ಕಾರದ ಇಂಧನ ಬೆಲೆ ಏರಿಕೆಯಿಂದ ಅಗತ್ಯ ವಸ್ತುಗಳ ಬೆಲೆ ಕೂಡ ಸ್ವಾಭಾವಿಕವಾಗಿ ಏರಿಕೆಯಾಗಲಿದ್ದು, ಇದನ್ನು ಎಲ್ಲರೂ ಪಕ್ಷಾತೀತವಾಗಿ ಖಂಡಿಸಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದಿಂದ ಜನರಿಗೆ ನೆಮ್ಮದಿ ಇಲ್ಲ ದಂತಾಗಿದೆ. ಕಾನೂನು ಸುವ್ಯವಸ್ಥೆ ಕುಸಿ ದಿದ್ದು, ಸರ್ಕಾರ ಕೊಲೆಗಡುಕರಿಗೆ ಬೆಂಬಲ ನೀಡುತ್ತಿದೆ ಎಂದು ಬೋಪಯ್ಯ ದೂರಿದರು.

ಮಾಜಿ ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿರೋಧ ಪಕ್ಷದಲ್ಲಿದ್ದಾಗ ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ಅಗತ್ಯ ವಸ್ತುಗಳ ಬೆಲ ಕಡಿಮೆ ಮಾಡುವುದಾಗಿ ಹೇಳುತ್ತಿದ್ದರು. ಇದೀಗ ಅವರದ್ದೇ ಪಕ್ಷ ಅಧಿಕಾರಿಕ್ಕೆ ಬಂದಿದ್ದು, ಅವರೇ ಬೆಲೆ ಏರಿಕೆ ಮಾಡಿದ್ದಾರೆ. ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದ್ದು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ರೂ. ಲೂಟಿ ನಡೆದಿದೆ. ಸಿಬಿಐ ತನಿಖೆ ಆರಂಭಿಸಿದ್ದು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸಹಿತ ಇಲಾಖೆಯ ಮಾಜಿ ಸಚಿವ ನಾಗೇಂದ್ರ ಕೂಡ ಬಂಧನವಾಗಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಸುನೀಲ್ ಸುಬ್ರಮಣಿ, ಎಸ್.ಜಿ.ಮೇದಪ್ಪ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಸದಸ್ಯರಾದ ಮಹೇಶ್ ಜೈನಿ, ಚಂದು, ಪಕ್ಷ ಪ್ರಮುಖರಾದ ಶಾಂತೆಯಂಡ ರವಿ ಕುಶಾಲಪ್ಪ, ಬೆಪ್ಪುರನ ಮೇದಪ್ಪ, ಮನು ಮಂಜುನಾಥ್, ಅಪ್ರು ರವೀಂದ್ರ, ಯಮುನಾ ಚಂಗಪ್ಪ, ಕನ್ನಿಕೆ, ಬಿ.ಕೆ.ಅರುಣ್, ಬಿ.ಕೆಜಗದೀಶ್, ಡೀನ್ ಬೋಪಣ್ಣ, ಕಾರ್ಯಕರ್ತರು ಪಾಲ್ಗೊಂಡಿದ್ದರು.

ದರ್ಶನ್‌ನಿಂದಲೇ ಮ್ಯಾನೇಜರ್ ಕೊಲೆ

ಮಾಜಿ ಸಚಿವ ಅಪ್ಪಚ್ಚು ರಂಜನ್ ಶಂಕೆ

ಈ ಕುರಿತು ದರ್ಶನ್‌ನನ್ನು ವಿಚಾರಣೆಗೊಳಪಡಿಸಲು ಆಗ್ರಹ


ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಚಿವ ಅಪ್ಪಚ್ಚು ರಂಜನ್. ಮಾಜಿ ಶಾಸಕರಾದ ಕೆ.ಜಿ. ಬೋಪಯ್ಯ, ಸುನಿಲ್ ಸುಬ್ರಮಣಿ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಮಡಿಕೇರಿ, ಜೂ. 17– ಹಲವು ವರ್ಷಗಳಿಂದ ನಿಗೂಢವಾಗಿ ನಾಪತ್ತೆಯಾಗಿರುವ ನಟ ದರ್ಶನ್ ಮ್ಯಾನೇಜರ್‌ನನ್ನು ಅವರೇ ಕೊಲೆ ಮಾಡಿರುವ ಸಂಶಯವಿದ್ದು, ಈ ಸಂಬಂಧ ದರ್ಶನ್‌ನನ್ನು ತೀವ್ರ ವಿಚಾರಣೆಗೊಳಪಡಿಸಬೇಕು ಎಂದು ಮಾಜಿ ಸಚಿವ ಅಪ್ಪಚ್ಚು ರಂಜನ್ ಆಗ್ರಹಿಸಿದರು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರುದ್ಧ ಮಡಿಕೇರಿಯಲ್ಲಿ ನಡೆದ ಪ್ರತಿಭಟನೆ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದರ್ಶನ್ ಮ್ಯಾನೇಜರ್ 10 ಕೋಟಿ ರೂ. ದುರುಪಯೋಗಪಡಿಸಿಕೊಂಡು, ಪತ್ರ ಬರೆದಿಟ್ಟು ನಾಪತ್ತೆಯಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ, ಅವರನ್ನು ದರ್ಶನ್ ಕೊಲೆ ಮಾಡಿ ಅವರ ಹೆಸರಿನಲ್ಲಿ ಪತ್ರ ಬರೆದಿಟ್ಟಿರುವ ಶಂಕೆ ಇದೆ ಎಂದರು.

ಐಶ್ವರ್ಯ ಬಂದರೆ ಮಧ್ಯರಾತ್ರಿ ಕೊಡೆ ಹಿಡಿದಂತೆ ದರ್ಶನ್ ದುರಹಂಕಾರದ ವ್ಯಕ್ತಿ. ಅಮಾಯಕನ ಕೊಲೆ ಮಾಡಿದ ಆರೋಪ ಆತನ ಮೇಲಿದೆ. ಈ ಪ್ರಕರಣದ ಜೊತೆಗೆ ಆತನ ಮ್ಯಾನೇಜರ್ ಏನಾದರು ಎಂಬುದರ ಬಗ್ಗೆಯೂ ದರ್ಶನ್‌ನನ್ನು ತೀವ್ರ ವಿಚಾರಣೆಗೊಳಪಡಿಸಿ ಸತ್ಯಾಂಶ ಬಯಲಿಗೆಳೆಯಬೇಕು ಎಂದು ಆಗ್ರಹಿಸಿದರು.

ಬಕ್ರೀದ್ ಹಿನ್ನೆಲೆ ನಾಪೋಕ್ಲು ಸಂತೆ ಬಿಕೋ



ಬಕ್ರೀದ್ ಹಿನ್ನೆಲೆಯಲ್ಲಿ ವ್ಯಾಪಾರಸ್ಥರು ಇಲ್ಲದೆ ನಾಪೋಕ್ಲು ಸಂತೆ ಬಿಕೋ ಎನ್ನುತ್ತಿತ್ತು.

ಮಡಿಕೇರಿ,ಜೂ.17– ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಸೋಮವಾರದ ನಾಪೋಕ್ಲು ಸಂತೆ ವ್ಯಾಪಾರಸ್ಥರು ಇಲ್ಲದೆ ಬಿಕೋ ಎನ್ನುತ್ತಿತ್ತು.

ಸಂತೆಯಲ್ಲಿ ನಾಪೋಕ್ಲು ಸೇರಿದಂತೆ ಜಿಲ್ಲೆಯ ವಿವಿಧೆಡೆಯಿಂದ ವ್ಯಾಪಾರಸ್ಥರು, ಜನರು ಸೇರಿ ಜಂಗುಳಿಯಾಗುತ್ತಿತ್ತು. ಆದರೆ, ಸೋಮವಾರ ಬಕ್ರೀದ್ ಹಬ್ಬದ ಹಿನ್ನೆಲೆ ಹಲವು ವ್ಯಾಪಾರಸ್ಥರು ಬಾರದೆ ಇರುವ ಕಾರಣ ಸಂತೆಯಲ್ಲಿ ಬೆರಳೆಣಿಕೆಯಷ್ಟು ಜನ ಮಾತ್ರ ವ್ಯಾಪಾರ ನಡೆಸಿದರು.

ನಾಪೋಕ್ಲುವಿನಲ್ಲಿ ಬಹುತೇಕ ಮುಸ್ಲಿಂ ವ್ಯಾಪಾರಿಗಳೇ ಇದ್ದು, ಬಕ್ರೀದ್ ಅಂಗವಾಗಿ ಬಹುತೇಕ ಅಂಗಡಿಗಳು ಮುಚ್ಚಿದ್ದರಿಂದ ಬೇರೆಡೆ ಗ್ರಾಮಗಳಿಂದ ಆಗಮಿಸಿದ ಗ್ರಾಹಕರು ಪರದಾಡುವಂತಾಯಿತು.

ಬಿ.ಎಸ್.ಸೀನಪ್ಪ ನಿಧನ



ನಾಪೋಕ್ಲು: ಮೂಲತಃ ಮಡಿಕೇರಿ ತಾಲೂಕಿನ ಕೋಪಟ್ಟಿ ಗ್ರಾಮದ ಮೈಸೂರಿನ ಹೂಟಗಳ್ಳಿಯ ಕೆಹೆಚ್‌ಬಿ ಕಾಲೋನಿಯಲ್ಲಿ ವಾಸವಿದ್ದ ದಿ.ಸೋಮಪ್ಪ ಅವರ ಮಗ ಬಿ.ಎಸ್.ಸೀನಪ್ಪ (ಚಿಂಟು) 78) ಸೋಮವಾರ ಬೆಂಗಳೂರಿನಲ್ಲಿ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಮೈಸೂರಿನ ಹೂಟಗಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಭೂ ಪರಿವರ್ತನೆ ವಿರುದ್ಧ ಸಿಎನ್‌ಸಿ ಜನಜಾಗೃತಿ

ಮಡಿಕೇರಿ: ಸಿದ್ದಾಪುರದ ಸುಮಾರು 2400 ಎಕರೆ ಕಾಫಿ ತೋಟ ಸೇರಿದಂತೆ ಕೊಡಗು ಜಿಲ್ಲಾದ್ಯಂತ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆಗೆ ಆಡಳಿತ ವ್ಯವಸ್ಥೆಯ ಪರೋಕ್ಷ ಕುಮ್ಮಕ್ಕು ಇದೆ ಎಂದು ಆರೋಪಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕಾರ್ಯಕರ್ತರು ಸೋಮವಾರ ಸಿದ್ದಾಪುರದಲ್ಲಿ ಮಾನವ ಸರಪಳಿ ರಚಿಸಿ, ಜನ ಜಾಗೃತಿ ಮೂಡಿಸಿದರು.

ಜನಜಾಗೃತಿಯ ನೇತೃತ್ವ ವಹಿಸಿದ್ದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, ಪವಿತ್ರ 'ಕೊಡವ ಲ್ಯಾಂಡ್' ಉಳಿಯಬೇಕಾದರೆ ಬೃಹತ್ ಭೂ ಪರಿವರ್ತನೆ ಪ್ರಕ್ರಿಯೆಗಳು ಸ್ಥಗಿತಗೊಳ್ಳಬೇಕು. ಆಂಧ್ರ ಸೇರಿದಂತೆ ವಿವಿಧ ರಾಜ್ಯಗಳ ಭೂಮಾಫಿಯಾ ಹಾಗೂ ರಾಜಕೀಯ ಬೆಂಬಲಿಗರು ಕೊಡವ ಭೂಮಿಯನ್ನು ವ್ಯಾಪಾರೀಕರಣ ಗೊಳಿಸಲು ಮುಂದಾಗಿದ್ದಾರೆ. ಹಸಿರು ಸುಂದರ ಪ್ರಕೃತಿಯ ಸೊಬಗು, ಜಲ ಮೂಲ ಗಳನ್ನು ನಾಶಗೊಳಿಸಿ ಕಾಂಕ್ರೀಟ್ ಬೃಹತ್ ಕಟ್ಟಡಗಳ ನಿರ್ಮಾಣಕ್ಕೆ ಮುಂದಾಗಿದ್ದಾರೆ ಎಂದು ಆರೋಪಿಸಿದರು.

ಭೂಮಿ ಖರೀದಿ ಜೂಜಾಟದಂತೆ ನಡೆಯುತ್ತಿದ್ದು, ಈ ಬೆಳವಣಿಗೆ ಅತ್ಯಂತ ಸೂಕ್ಷ್ಮ ಬುಡಕಟ್ಟು ಜನಾಂಗ ಕೊಡವರ ನಾಶಕ್ಕೂ ಕಾರಣವಾಗಬಹುದು. ಅಲ್ಲದೆ, ಈ ಕೊಡವ ನೆಲದಲ್ಲಿ ಬದುಕು ಕಂಡುಕೊಂಡಿರುವ ಇತರ ಜನಾಂಗದ ಅಸ್ತಿತ್ವಕ್ಕೂ ಧಕ್ಕೆ ಬರಬಹುದು. ಎಂದು ಎಚ್ಚರಿಸಿದರು. ಜೂ.24ರಂದು ಗೋಣಿಕೊಪ್ಪ, ಜುಲೈ 1ರಂದು ಕಕ್ಕಬ್ಬೆ, ಜು.6ರಂದು ಚೆಟ್ಟಳ್ಳಿಯಲ್ಲಿ ಜನಜಾಗೃತಿ ನಡೆಯಲಿದ್ದು, ಮುಂದಿನ ದಿನಗಳಲ್ಲಿ ಟಿ.ಶೆಟ್ಟಿಗೇರಿ, ಶ್ರೀಮಂಗಲ, ಕುಟ್ಟ, ಪೊನ್ನಂಪೇಟೆ, ತಿತಿಮತಿ, ಹುದಿಕೇರಿ, ವಿರಾಜಪೇಟೆ, ಮೂರ್ನಾಡು, ನಾಪೋಕ್ಲುವಿನಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಲಾಗುವುದು ಎಂದರು. ಇದೇ ವೇಳೆ ಬೃಹತ್ ಭೂ ಪರಿವರ್ತನೆ ವಿರುದ್ಧ ಹಕ್ಕೋತ್ತಾಯ ಮಂಡಿಸಿ, ಕೊಡವ ಲ್ಯಾಂಡ್ ಪರ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಪಟ್ಟಮಾಡ ಲಲಿತಾ, ಅಜ್ಜಿನಿಕಂಡ ಇನಿತಾ ಮಾಚಯ್ಯ, ಚೋಳಪಂಡ ಜ್ಯೋತಿ ನಾಣಯ್ಯ, ಇಟ್ಟೀರ ಸಬಿತಾ, ಮುಂಡಚಾಡಿರ ಫ್ಯಾನ್ಸಿ ಕಿರಣ್, ಬುಟ್ಟಿಯಂಡ ಐಹಿಂದ್ಯಾ ಹರೀಶ್, ಬುಟ್ಟಿಯಂಡ ಪ್ರಿಯಾ, ಬುಟ್ಟಿಯಂಡ ಅನ್ಯ, ಬುಟ್ಟಿಯಂಡ ಕೃಪಾ ಹರೀಶ್, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ, ಕರ್ನಲ್ ಕಂಡ್ರತಂಡ ಸುಬ್ಬಯ್ಯ ಮತ್ತಿತರರಿದ್ದರು.


ಸಿದ್ದಾಪುರದಲ್ಲಿ ಭೂಪರಿವರ್ತನೆ ವಿರುದ್ಧ ಸಿಎನ್‌ಸಿ ಸಂಘಟನೆ ಕಾರ್ಯಕರ್ತರು ಮಾನವ ಸರಪಳಿ ರಚಿಸಿ, ಜನಜಾಗೃತಿ ಮೂಡಿಸಿದರು.

ವಿರಾಜಪೇಟೆಯಲ್ಲಿ ಸರಣಿ ಅಪಘಾತ

3 ಕಾರುಗಳು ಜಖಂ; ಪ್ರಯಾಣಿಕರು ಪಾರು



ವಿರಾಜಪೇಟೆ: ಇಲ್ಲಿನ ಮೀನುಪೇಟೆಯಲ್ಲಿ ಸೋಮವಾರ ಮುಂಜಾನೆ ಕಾರೊಂದು ನಿಂತಿದ್ದ ಮತ್ತೆರಡು ಕಾರುಗಳಿಗೆ ಡಿಕ್ಕಿ ಹೊಡಿದಿದ್ದು, ಯಾವುದೇ ಅಪಾಯ ಸಂಭವಿಸಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಯಿಂದ ವಿರಾಜಪೇಟೆಯ ಸಂಬಂಧಿಕರ ಮನೆಗೆ ಬಂದಿದ್ದ ಕೆಲವರು ಮಲಬಾರ್ ರಸ್ತೆಯ ಮೀನುಪೇಟೆಯಲ್ಲಿ ಕಾರನ್ನು ನಿಲ್ಲಿಸಿದ್ದರು. ಈ ವೇಳೆ ಕೇರಳದ ಕಾರೊಂದು ವೇಗವಾಗಿ ಬಂದು ಎರಡು ಕಾರುಗಳಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಮೂರು ಕಾರುಗಳು ಜಖಂಗೊಂಡಿವೆ.

ವಿರಾಜಪೇಟೆ ನಗರ ಠಾಣೆ ಪೊಲೀಸರು ಕೇರಳ ಮೂಲದ ಚಾಲಕ ವಿವೇಕ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ಚಂದಗಾಲು ಸಂತ್ರಸ್ತರ ಆರೋಗ್ಯ ವಿಚಾರಿಸಿದ ವಾಲ್ಮೀಕಿಶ್ರೀ

ಶ್ರೀಮಠದ ವತಿಯಿಂದ ಸಂತ್ರಸ್ಥರಿಗೆ 50 ಸಾವಿರ ರೂ. ನೆರವು


ನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಹದೇವನಾಯಕರ ಪತ್ನಿ ಗೌರಮ್ಮ ಆರೋಗ್ಯವನ್ನು ಶ್ರೀ ಪ್ರಸನ್ನಾನಂದಸ್ವಾಮೀಜಿ ವಿಚಾರಿಸಿದರು.

ಚಾಮರಾಜನಗರ, ಜೂ.17–ಮಾನಕ್ಕೆ ಹೆದರಿ ಮಹದೇಶ್ವರಬೆಟ್ಟದ ತಾಳಬೆಟ್ಟದ ಬಳಿ ವಿಷ ಸೇವಿಸಿ ಅಸ್ವಸ್ಥರಾಗಿ ನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೆ.ಆರ್.ನಗರ ತಾಲೂಕಿನ ಚಂದಗಾಲು ಗ್ರಾಮದ ಮೃತ ಮಹದೇವನಾಯಕರ ಪತ್ನಿ ಗೌರಮ್ಮ ಹಾಗೂ ಮೊಮ್ಮಗಳನ್ನು ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಪೀಠದ ಶ್ರೀ ಪ್ರಸನ್ನಾನಂದಸ್ವಾಮೀಜಿ ಭೇಟಿ ಮಾಡಿ, ಆರೋಗ್ಯ ವಿಚಾರಿಸಿ ಧೈರ್ಯ ತುಂಬಿದರು.

ನಂತರ ಶ್ರೀಮಠದ ವತಿಯಿಂದ ಮಠದ ಧರ್ಮದರ್ಶಿಯಾದ ಚಾಮರಾಜನಗರ ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಎಂ. ರಾಮಚಂದ್ರ ಮೂಲಕ ಸಂತ್ರಸ್ಥರ ಕುಟುಂಬಕ್ಕೆ 50 ಸಾವಿರ ಆರ್ಥಿಕ ನೆರವು ನೀಡಲಾಯಿತು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀಗಳು, ಘಟನೆಯಲ್ಲಿ ಕುಟುಂಬ ಯಜಮಾನ ಮಹದೇವನಾಯಕ ಹಾಗೂ ಮಗಳು ಲೀಲಾವತಿ ಮೃತಪಟ್ಟಿರುವುದು ವಿಷಾದನೀಯ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಹದೇವನಾಯಕರ ಪತ್ನಿ ಗೌರಮ್ಮ ಮತ್ತು ಮೊಮ್ಮಗಳು ಶೀಘ್ರವಾಗಿ ಗುಣಮುಖರಾಗಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಕೆ.ಆರ್.ನಗರ ಶಾಸಕ ರವಿಶಂಕರ್, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ, ತಾಪಂ ಮಾಜಿ ಅಧ್ಯಕ್ಷ ಎಚ್.ವಿ.ಚಂದ್ರು, ಮುಖಂಡರಾದ ಪು.ಶ್ರೀನಿವಾಸನಾಯಕ, ಕಪಿನಿ ನಾಯಕ, ಜ.ಸುರೇಶ್‌ನಾಗ್, ಜಯಸುಂದರ್, ನಾಗೇಂದ್ರ ನಾಯಕ, ಕೃಷ್ಣ ನಾಯಕ, ಶಿವು ವಿರಾಟ್, ಮಾದೇಶ್, ವೆಂಕಟೇಶ್ ನಾಯಕ ಹಾಜರಿದ್ದರು.

ಕುಡಿದ ಮತ್ತಿನಲ್ಲಿ ಇಬ್ಬರು ಆತ್ಮಹತ್ಯೆ


ದೇವರಾಜು

ಗುಂಡ್ಲುಪೇಟೆ, ಜೂ.17–ಕುಡಿದ ಮತ್ತಿನಲ್ಲಿ ಇಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುಂಡ್ಲುಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ತಾಲೂಕಿನ ಬರಗಿ ಕೆರೆಯಲ್ಲಿ ಸೋಮವಾರ ಯುವಕನೋರ್ವನ ಶವ ಪತ್ತೆಯಾಗಿದ್ದು, ತಾಲೂಕಿನ ಆಲತ್ತೂರು ಗ್ರಾಮದ ದೇವರಾಜು (28) ಮೃತ ಯುವಕ ಎಂದು ಗುರುತಿಸಲಾಗಿದೆ. ಸೋಮವಾರ ಬೆಳಗ್ಗೆ ಬರಗಿ ಕೆರೆಯಲ್ಲಿ ಮೃತದೇಹವೊಂದು ತೇಲುತ್ತಿರುವುದನ್ನು ಗಮನಿಸಿದ ಸ್ಥಳೀಯರು ಗುಂಡ್ಲುಪೇಟೆ ಠಾಣೆ ಪೊಲೀಸರಿಗೆ ತಿಳಿಸಿದ್ದಾರೆ.

ನಂತರ ಸ್ಥಳಕ್ಕೆ ತೆರಳಿದ ಪೊಲೀಸರು, ಸ್ಥಳೀಯರ ಸಹಾಯದಿಂದ ಶವವನ್ನು ಕೆರೆಯಿಂದ ಹೊರತೆಗೆದರು. ಬಳಿಕ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ, ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಿದರು. ಆದರೆ, ಈತ ಕುಡಿದ ಮತ್ತಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗರಾಜು: ಗುಂಡ್ಲುಪೇಟೆ ಪಟ್ಟಣದ ಹೊರವಲಯದಲ್ಲಿ ತಾಲೂಕಿನ ಬಸವಾಪುರ ಗ್ರಾಮದ ನಾಗರಾಜು (55) ಭಾನುವಾರ ಸಂಜೆ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪಟ್ಟಣದ ಚಾಮರಾಜನಗರ ರಸ್ತೆ ಬದಿಯ ಮರವೊಂದರಲ್ಲಿ ನೇತಾಡುತ್ತಿದ್ದ ಈತನ ಮೃತದೇಹವನ್ನು ಕಂಡ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದರು. ಕೂಡಲೇ ಸ್ಥಳಕ್ಕೆ ಆಗಮಿಸಿದ ಪೊಲೀಸರು ಶವವನ್ನು ಕೆಳಗಿಳಿಸಿ, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದರು. ನಂತರ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದರು.

ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಇಬ್ಬರಿಗೂ ಕುಡಿತದ ಚಟವಿದ್ದು, ಕುಡಿದ ಮತ್ತಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಶಿಲ್ಪನಾಗ್‌ಗೆ ಸನ್ಮಾನ....



ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ತಾಲೂಕು ಅಧ್ಯಕ್ಷ ರಾಮಸ್ವಾಮಿ, ತಾಲೂಕು ಕಾರ್ಯದರ್ಶಿ ಎನ್.ಸುಧಾ, ಖಜಾಂಚಿ ಕೃಷ್ಣಮೂರ್ತಿ ಇದ್ದರು.

ಚಾ.ನಗರದಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ

● ಇಂಧನ ದರ ಏರಿಕೆ ವಿರೋಧಿಸಿ ಕಾರ್ಯಕರ್ತರ ಮೆರವಣಿಗೆ ● ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ



ಚಾ.ನಗರದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜೂ.17– ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಿರುವ ಕಾಂಗ್ರೆಸ್ ಸರ್ಕಾರದ ನಡೆ ವಿರೋಧಿಸಿ ನಗರದಲ್ಲಿ ಸೋಮವಾರ ಜಿಲ್ಲಾ ಬಿಜೆಪಿ ಘಟಕದಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ದೇಗುಲ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ತಳ್ಳುವ ಗಾಡಿ ಮೇಲೆ ಬೈಕ್ ಇಟ್ಟು ಭುವನೇಶ್ವರಿ ವೃತ್ತದ ತನಕ ಮೆರವಣಿಗೆ ನಡೆಸಿದರು. ನಂತರ ಅಲ್ಲಿ ಕೆಲಕಾಲ ರಸ್ತೆ ತಡೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಹಾಗೂ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನಕುಮಾರ್, ಮುಖಂಡರಾದ ಎಸ್.ಬಾಲರಾಜು ಮಾತನಾಡಿ, ಗ್ಯಾರಂಟಿ ಯೋಜನೆಗಳಿಗಾಗಿ ಜನರ ಜೇಬಿಗೆ ಕಾಂಗ್ರೆಸ್ ಸರ್ಕಾರ ಕತ್ತರಿ ಹಾಕುತ್ತಿದೆ. ನಮ್ಮ ಹಣವನ್ನು ಕಿತ್ತುಕೊಂಡು ನಮಗೆ ಕೊಡುವ ಕೆಲಸ ಮಾಡುತ್ತಿದೆ. ಇಂಧನ ದರ ಏರಿಕೆ ಮಾಡಿರುವುದು ಮಧ್ಯಮ ವರ್ಗದವರಿಗೆ ದೊಡ್ಡಪೆಟ್ಟು ನೀಡಿದಂತಾಗಿದೆ ಎಂದು ಕಿಡಿಕಾರಿದರು.

ಪೆಟ್ರೋಲ್ ಲೀಟರ್‌ಗೆ 3 ರೂ. ಮತ್ತು ಡೀಸೆಲ್ ದರ 3.5 ರೂ. ಏರಿಕೆಯಾಗಿದೆ. ಗ್ಯಾರಂಟಿ ಯೋಜನೆ ಹೆಸರಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ಲೂಟಿ ಹೊಡೆಯಲು ಹೊರಟಿದೆ. ಪೆಟ್ರೋಲ್ ಮೇಲಿನ ಸೆಸ್ ಅನ್ನು ಪ್ರತಿ ಲೀಟರ್ ಮೇಲೆ 3 ರೂ. ಹೆಚ್ಚಳ ಮಾಡುವ ಆದೇಶಕ್ಕೆ ಸಹಿ ಹಾಕುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಖಾಲಿಯಾದ ಬೊಕ್ಕಸ ತುಂಬಿಕೊಳ್ಳಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಹಿಂದೆ ಕೇಂದ್ರ ಸರ್ಕಾರದ ವಿರುದ್ಧ ಇಂಧನ ದರ ಇಳಿಕೆಗಾಗಿ ಕಾಂಗ್ರೆಸ್ ಪ್ರತಿಭಟನೆ ನಡೆಸಿತ್ತು. ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಪೆಟ್ರೋಲ್ ಸೆಸ್ ಇಳಿಕೆ ಮಾಡಿದೆ. ಕಾಂಗ್ರೆಸ್ ಸರ್ಕಾರ ಇರುವ ರಾಜ್ಯಗಳಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿದೆ. ಸರ್ಕಾರ ಎಲ್ಲಾ ರೀತಿಯಿಂದಲೂ ಜನರಿಂದ ಸುಲಿಗೆ ಮಾಡುತ್ತಿದೆ ಎಂದು ದೂರಿದರು.

ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದ್ದು, ಇದಕ್ಕೆ ಹೆಚ್ಚುವರಿಯಾಗಿ ಇಂಧನ ಬೆಲೆಯನ್ನೂ ಏರಿಕೆ ಮಾಡಿ ಜನರ ಜೇಬಿಗೆ ಕತ್ತರಿ ಹಾಕಲಾಗುತ್ತಿದೆ. ಇದು ನಿಜಕ್ಕೂ ದುರದೃಷ್ಟಕರ ಸಂಗತಿ. ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲು ಐದು ಗ್ಯಾರಂಟಿ ಯೋಜನೆಗಳ ಮೂಲಕ ಜನರನ್ನು ಮೂರ್ಖರನ್ನಾಗಿಸಿದೆ ಈಗ ಜನರಿಗೆ ಇವರ ಬಂಡವಾಳ ಗೊತ್ತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅವೈಜ್ಞಾನಿಕ ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಸರ್ಕಾರದ ಬೊಕ್ಕಸವನ್ನು ಖಾಲಿ ಮಾಡಿದ ಸಿದ್ದರಾಮಯ್ಯ, ಕನ್ನಡಿಗರಿಗೆ ತೆರಿಗೆ ವಿಧಿಸಿ ಖಜಾನೆ ತುಂಬುವ ಪ್ರಯತ್ನ ಮಾಡುತ್ತಿದ್ದಾರೆ. ತಕ್ಷಣ ಹೆಚ್ಚಿಸಿರುವ ಪೆಟ್ರೋಲ್, ಡೀಸೆಲ್ ಬೆಲೆಯನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಪತ್ರಿಭಟನೆಯಲ್ಲಿ ಬಿಜೆಪಿ ಮುಖಂಡರಾದ ಎಂ.ರಾಮಚಂದ್ರ ನಿಜಗುಣ ರಾಜು, ವೃಷಭೇಂದ್ರಪ್ಪ, ವೆಂಕಟೇಶ್, ನೂರೊಂದುಶೆಟ್ಟಿ, ವೈ.ಸಿ.ನಾಗೇಂದ್ರ, ಮೂಡ್ನಾಕೂಡು ಪ್ರಕಾಶ್, ಅರಕಲವಾಡಿ ನಾಗೇಂದ್ರ, ಪ್ರಣಯ್, ಮೂಡಹಳ್ಳಿ ಮೂರ್ತಿ, ಜಯಸೂರ್ಯ, ಆನಂದ್ ಭಗೀರಥ ಶಿವರಾಜ್, ಮಮತಾ, ರಾಜೇಶ್ವರಿ, ವನಜಾಕ್ಷಿ ಇತರರು ಭಾಗವಹಿಸಿದ್ದರು.

ದಾಖಲೆ ಇಲ್ಲದ 37 ಲಕ್ಷ ರೂ. ವಶ



ಹಣ ಸಾಗಿಸುತ್ತಿದ್ದ ಕಾರನ್ನು ಪೊಲೀಸರು ವಶಪಡಿಸಿಕೊಂಡಿರುವುದು.

ಗುಂಡ್ಲುಪೇಟೆ: ಯಾವುದೇ ದಾಖಲೆ ಇಲ್ಲದೆ ಕೇರಳಕ್ಕೆ ಸಾಗಿಸುತ್ತಿದ್ದ 37 ಲಕ್ಷ ರೂ. ಅನ್ನು ಪಟ್ಟಣ ಠಾಣೆ ಪೊಲೀಸರು ಮದ್ದೂರು ಚೆಕ್‌ಪೋಸ್ಟ್‌ನಲ್ಲಿ ಭಾನುವಾರ ಸಂಜೆ ವಶಪಡಿಸಿಕೊಂಡಿದ್ದಾರೆ.

ರಾಹುಲ್ ತನ್ನ ಸ್ನೇಹಿತ ಸಾಲ್ವಿನ್‌ನೊಂದಿಗೆ ಬೆಂಗಳೂರಿನಿಂದ ಕೇರಳಕ್ಕೆ ಹಣ ಸಾಗಿಸುತ್ತಿದ್ದು, ಚೆಕ್‌ಪೋಸ್ಟ್‌ನಲ್ಲಿ ಪೇದೆ ಸತೀಶ್ ಕಾರನ್ನು ಪರಿಶೀಲಿಸಿದಾಗ ಹಣ ಪತ್ತೆಯಾಗಿದೆ. ಬಳಿಕ ಸಬ್‌ಇನ್ಸ್‌ಪೆಕ್ಟರ್‌ಗಳಾದ ಸಾಹೇಬಗೌಡ, ಹೊನ್ನರಾಜ್, ಸಿಬ್ಬಂದಿ ಶಶಿಧರ ಮೂರ್ತಿ, ಪ್ರಭುಸ್ವಾಮಿ, ಬಂಟಪ್ಪ ಹಣ ಹಾಗೂ ಕಾರನ್ನು ವಶಕ್ಕೆ ಪಡೆದರು. ರಾಹುಲ್ ಹಾಗೂ ಸಾಲ್ವಿನ್‌ನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಜಿಲ್ಲಾದ್ಯಂತ ಬಕ್ರೀದ್ ಸಂಭ್ರಮಾಚರಣೆ

ಚಾಮರಾಜನಗರ, ಜೂ.17–ತ್ಯಾಗ, ಬಲಿದಾನದ ಪ್ರತೀಕವಾದ ಬಕ್ರೀದ್ ಹಬ್ಬವನ್ನು ಜಿಲ್ಲಾದ್ಯಂತ ಸೋಮವಾರ ಮುಸ್ಲಿಮರು ಸಂಭ್ರಮದಿಂದ ಆಚರಿಸಿದರು.

ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲೂಕು ಕೇಂದ್ರ ಸೇರಿದಂತೆ ಇತರೆ ಹೋಬಳಿ ಹಾಗೂ ಗ್ರಾಮಗಳ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ನಗರದ ಸೋಮವಾರಪೇಟೆ ಹಾಗೂ ಪಾಲಿಟೆಕ್ನಿಕ್ ಕಾಲೇಜು ಹಿಂಭಾಗದ ಈದ್ಗಾ ಮೈದಾನದಲ್ಲಿ ಧರ್ಮಗುರುಗಳು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಶುಭ ಸಂದೇಶ ನೀಡಿದರು. ಬಳಿಕ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಮಕ್ಕಳು ಹೊಸ ಬಟ್ಟೆ ಧರಿಸಿ ಸಂಭ್ರಮಿಸಿದರು. ಇದೇ ವೇಳೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಈದ್ಗಾ ಮೈದಾನಕ್ಕೆ ಭೇಟಿ ನೀಡಿ, ಶುಭ ಕೋರಿದರು.

ಬೇಗೂರಿನಲ್ಲೂ ಆಚರಣೆ: ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ಮುಸ್ಲಿಮರು ಬಕ್ರೀದ್ ಆಚರಿಸಿದರು.

ಬೇಗೂರಿನ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ಮೂಲಕ ಸಾಗಿ ಮಸೀದಿ ಹಾಗೂ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬೇಗೂರು ಠಾಣೆ ಪೊಲೀಸರು ಬಂದೋಬಸ್ತ್ ಏರ್ಪಡಿಸಿದ್ದರು.


ಚಾಮರಾಜನಗರದ ಈದ್ಗಾ ಮೈದಾನದಲ್ಲಿ ಬಕ್ರೀದ್ ಅಂಗವಾಗಿ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಒಂದನೇ ಪುಟದಿಂದ

ಅಪಘಾತಗಳ ಸಂಖ್ಯೆ ಗಣನೀಯ ಇಳಿಕೆ

ಕಳೆದ ವರ್ಷ ಅಂದರೆ 2023ರಲ್ಲಿ ಜನವರಿಯಿಂದ ಮೇ ತನಕ 288 ಅಪಘಾತಗಳು ಸಂಭವಿಸಿದ್ದವು. ಇದರಲ್ಲಿ 100 ಜನರು ಸಾವನ್ನಪ್ಪಿ 301 ಮಂದಿ ಗಾಯಗೊಂಡಿದ್ದರು.

ಈ ವರ್ಷ ಅಂದರೆ 2024ರ ಜನವರಿಯಿಂದ ಮೇ ತಿಂಗಳ ತನಕ 125 ಅಪಘಾತಗಳು ಸಂಭವಿಸಿದ್ದು, 31 ಜನರು ಮೃತಪಟ್ಟಿದ್ದಾರೆ. ಇದರಲ್ಲಿ 167 ಜನರು ಗಾಯಗೊಂಡಿದ್ದಾರೆ. ಕಳೆದ ವರ್ಷದ 5 ತಿಂಗಳಿಗೆ ಹೋಲಿಕೆ ಮಾಡಿದರೆ ಈ ವರ್ಷದ 5 ತಿಂಗಳಲ್ಲಿ ಸಂಭವಿಸಿರುವ ಅಪಘಾತಗಳ ಸಂಖ್ಯೆ, ಮೃತಪಟ್ಟವರ ಸಂಖ್ಯೆ, ಗಾಯಾಳುಗಳ ಸಂಖ್ಯೆಯಲ್ಲಿ ಭಾರೀ ಇಳಿಕೆಯಾಗಿದೆ.

ಈ ಬಗ್ಗೆ ಅಂಕಿ ಅಂಶಗಳ ವಿವರ ನೀಡಿರುವ ಅಲೋಕ್ ಕುಮಾರ್, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯನ್ನು ಮರಣ ಮುಕ್ತ ವಲಯವನ್ನಾಗಿ ಮಾಡಲು ಶ್ರಮಿಸೋಣ ಎಂದು ಕರೆ ನೀಡಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಅಪಘಾತಗಳ ಸಂಖ್ಯೆ ಮಿತಿ ಮೀರಿದ್ದ ಹಿನ್ನೆಲೆಯಲ್ಲಿ ಮೊದಲು ಸ್ಥಳದಲ್ಲೇ ದಂಡಾಸ್ತ್ರ ಪ್ರಯೋಗಿಸಲಾಯಿತು. ತರುವಾಯ ಕ್ಯಾಮರಾಗಳನ್ನು ಅಳವಡಿಸಿ ದಂಡ ವಿಧಿಸುವ ಕಾರ್ಯ ಆರಂಭಿಸಲಾಯಿತು. ಪೊಲೀಸ್ ಇಲಾಖೆ ಅಪಘಾತಗಳಿಗೆ ಕಡಿವಾಣ ಹಾಕಲು ದಂಡವನ್ನೆ ಪ್ರಮುಖ ಅಸ್ತ್ರವಾಗಿ ಪ್ರಯೋಗಿಸಿದ್ದರು. ಈ ಎಲ್ಲಾ ಕಾರಣಗಳಿಂದ ಈಗ ಅಪಘಾತಗಳ ಸಂಖ್ಯೆ ಬಹುತೇಕ ಕಡಿಮೆಯಾಗಿದೆ. ಈಗಂತೂ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಅಳವಡಿಸಿರುವ 60 ಎಐ ಕ್ಯಾಮರಾಗಳಿಂದ ಪತ್ತೆ ಆಗುತ್ತಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಲಕ್ಷಾಂತರ ರೂಪಾಯಿ ದಂಡ ವಿಧಿಸಲಾಗುತ್ತಿದೆ. ಇದರಿಂದ ಸಹಜವಾಗಿಯೇ ಅಪಘಾತಗಳ ಸಂಖ್ಯೆ ಇಳಿಮುಖವಾಗುತ್ತಿದೆ.

ಕೆಲವೇ ದಿನಗಳಲ್ಲಿ ಎಐ ಕ್ಯಾಮರಾಗಳ ಅಳವಡಿಕೆ 100 ಗಡಿ ದಾಟಿದರೆ ವೇಗದ ಮಿತಿ ಮತ್ತಷ್ಟು ಇಳಿಕೆಯಾಗಿ ಅಪಘಾತಗಳ ಸಂಖ್ಯೆ ಇನ್ನು ಕಡಿಮೆಯಾಗುತ್ತದೆ. ಇದರಿಂದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಮರಣ ಮುಕ್ತ ವಲಯವಾಗಿ ಮಾರ್ಪಡಬಹುದು.

ಮೈಸೂರಲ್ಲಿ ಮತ್ತೆ ಕೇಬಲ್ ಹಾವಳಿ

ಇಂಜಿನಿಯರ್ ತಿಳಿಸಿದ್ದಾರೆ. ಕಳೆದ ಹಲವು ವರ್ಷಗಳಿಂದಲೂ ಈ ರೀತಿ ಅನಧಿಕೃತವಾಗಿ ವಿದ್ಯುತ್ ಕಂಬಗಳ ಮೇಲೆ ಕೇಬಲ್ ಎಳೆದಿರುವವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸೆಸ್ಕ್ ನೋಟಿಸ್ ನೀಡುತ್ತಾ ಬಂದಿದೆಯಾದರೂ ಈವರೆಗೆ ಕ್ರಮ ಕೈಗೊಳ್ಳದಿರುವ ಕಾರಣ, ಮೈಸೂರು ನಗರದಾದ್ಯಂತ ಎಲ್ಲಾ ರಸ್ತೆ, ಜಂಕ್ಷನ್‌ಗಳಲ್ಲಿ ಕೇಬಲ್ ವೈರ್‌ಗಳನ್ನು ಮನಬಂದಂತೆ ಎಳೆದಿದ್ದು ಪ್ರವಾಸಿಗರು ಓಡಾಡುವ ಸ್ಥಳಗಳಲ್ಲಿ ಸೌಂದರ್ಯ ಹಾಳು ಮಾಡುತ್ತಿದ್ದಾರೆ.

ದರ್ಶನ್ ದೋಸ್ತ್ ಚಿಕ್ಕಣ್ಣ ವಿಚಾರಣೆ

ಚಿಕ್ಕಣ್ಣ ಅವರನ್ನು ವಿನಯ್ ಮಾಲೀಕತ್ವದ ಸ್ಟೋನಿ ಬ್ರೂಕ್ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಕರೆದೊಯ್ದು ಮಹಜರು ನಡೆಸಿದರು.

ನಂತರ ಚಿಕ್ಕಣ್ಣ ಅವರನ್ನು ಠಾಣೆಗೆ ಕರೆತಂದು ವಿಚಾರಣೆಗೊಳಪಡಿಸಿದ ವೇಳೆ ಅವರು, ತಾನು ಮತ್ತು ದರ್ಶನ್ ಸ್ನೇಹಿತರಾಗಿದ್ದು, ಪದೇ ಪದೆ ಊಟಕ್ಕಾಗಿ ಈ ರೆಸ್ಟೋರೆಂಟ್‌ಗೆ ಬರುವುದು ವಾಡಿಕೆ. ಅದರಂತೆ ಜೂನ್ 8ರಂದು ದರ್ಶನ್ ಕರೆಯ ಮೇರೆಗೆ ತಾವು ರೆಸ್ಟೋರೆಂಟ್‌ಗೆ ತೆರಳಿ ಊಟ ಮಾಡಿ ಬಂದಿದ್ದಾಗಿ ತಿಳಿಸಿದರಂತೆ. ಟೇಬಲ್‌ನಲ್ಲಿ ಮಾತನಾಡುವಾಗ ರೇಣುಕಾಸ್ವಾಮಿ ಸಂಬಂಧ ಏನಾದರೂ ವಿಷಯಗಳು ಪ್ರಸ್ತಾಪವಾಗಿದೆಯೇ ಎಂಬುದರ ಬಗ್ಗೆಯೂ ಪೊಲೀಸರು ವಿಚಾರಿಸಿದ್ದು, ಅದರ ಬಗ್ಗೆ ತಮಗೇನೂ ತಿಳಿಯದು. ಟಿವಿಗಳಲ್ಲಿ ಸುದ್ದಿ ಪ್ರಸಾರವಾದಾಗಲೇ ರೇಣುಕಾಸ್ವಾಮಿ ಕೊಲೆ ಬಗ್ಗೆ ಗೊತ್ತಾಯಿತು ಎಂದು ಚಿಕ್ಕಣ್ಣ ಹೇಳಿದ್ದಾರೆ ಎನ್ನಲಾಗಿದ್ದು, ಅವರ ಹೇಳಿಕೆಯನ್ನು ದಾಖಲಿಸಿಕೊಂಡಿರುವ ಪೊಲೀಸರು, ಮತ್ತೆ ಕರೆದಾಗ ಬರಬೇಕು ಎಂದು ತಾಕೀತು ಮಾಡಿ ವಾಪಸ್ ಕಳುಹಿಸಿದರು ಎಂದು ಹೇಳಲಾಗಿದೆ.

ನಟ ದರ್ಶನ್ ಮತ್ತು ಇತರ ಆರೋಪಿಗಳು ರೇಣುಕಾಸ್ವಾಮಿ ಕೊಲೆಯಾದ ದಿನ ಆರೋಪಿ ವಿನಯ್ ಮಾಲೀಕತ್ವದ ಸ್ಟೋನಿ ಬ್ರೂಕ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಪಾರ್ಟಿ ಮಾಡಿದ್ದು, ಈ ಪಾರ್ಟಿ ರೇಣುಕಾಸ್ವಾಮಿ ಕೊಲೆಯ ನಂತರ ನಡೆದಿದೆಯೇ ಅಥವಾ ಕೊಲೆಗೂ ಮುನ್ನ ನಡೆದಿದೆಯೇ ಎಂಬುದರ ಬಗ್ಗೆ ವಿವರಗಳು ಲಭ್ಯವಿಲ್ಲ. ಅಂದಿನ ಪಾರ್ಟಿಯಲ್ಲಿ ದರ್ಶನ್, ಈ ಪ್ರಕರಣದ ಆರೋಪಿಗಳಾದ ವಿನಯ್, ಪ್ರದೋಶ್ ಮತ್ತು ಪವನ್ ಭಾಗಿಯಾಗಿದ್ದರು ಎಂದು ಹೇಳಲಾಗಿದೆ.

ಮೆಗ್ಗರ್ ವಶ: ರೇಣುಕಾಸ್ವಾಮಿಗೆ ಕರೆಂಟ್ ಶಾಕ್ ನೀಡಲಾಗಿದೆ. ಅವರಿಗೆ ಶಾಕ್ ನೀಡಲು ಬಳಸಲಾದ ಮೆಗ್ಗರ್ ಉಪಕರಣವನ್ನು ಪೊಲೀಸರು ಧನರಾಜ್ ಎಂಬ ಆರೋಪಿಯಿಂದ ವಶಪಡಿಸಿಕೊಂಡಿದ್ದಾರೆ. ಕೇಬಲ್ ಕೆಲಸ ಮಾಡುವ ಧನರಾಜ್, ರೇಣುಕಾಸ್ವಾಮಿಯನ್ನು ಹತ್ಯೆ ಮಾಡಿದ ಶೆಡ್‌ಗೆ ಮೆಗ್ಗರ್ ಉಪಕರಣ ತಂದಿದ್ದ ಎನ್ನಲಾಗಿದ್ದು, ಆ ಉಪಕರಣದ ಮೂಲಕ ರೇಣುಕಾಸ್ವಾಮಿಗೆ ಆತನೇ ಕರೆಂಟ್ ಶಾಕ್ ನೀಡಿದ್ದಾನೆ ಎಂದು ತಿಳಿದು ಬಂದಿದೆ. ಪ್ರಕರಣದ ಎಲ್ಲಾ ಆರೋಪಿಗಳು ಬಂಧಿಸಲ್ಪಟ್ಟರೂ ಧನರಾಜ್ ಅಲಿಯಾಸ್ ರಾಜು ಮಾತ್ರ ತಲೆಮರೆಸಿಕೊಂಡಿದ್ದ. ಈತನನ್ನು ಭಾನುವಾರ ಸಂಜೆ ಪೊಲೀಸರು ಬಂಧಿಸಿ, ಆತನಿಂದ ಮೆಗ್ಗರ್ ಉಪಕರಣವನ್ನು ವಶಪಡಿಸಿಕೊಂಡಿದ್ದಾರೆ.

ಬಟ್ಟೆ ಶೋರೂಂ, ದೇವಸ್ಥಾನದಲ್ಲಿ ಮಹಜರು: ರೇಣುಕಾಸ್ವಾಮಿಯನ್ನು ಹತ್ಯೆ ಮಾಡಿದ ನಂತರ ಆರೋಪಿಗಳು ರಾಜರಾಜೇಶ್ವರಿನಗರದಲ್ಲಿರುವ ಟ್ರೆಂಡ್ಸ್ ಶೋರೂಂಗೆ ತೆರಳಿ ಬಟ್ಟೆ ಖರೀದಿಸಿದ್ದಾರೆ. ನಂತರ ವಿಘ್ನೇಶ್ವರನ ದೇವಸ್ಥಾನಕ್ಕೆ ತೆರಳಿದ್ದರು. ಎಂಬುದು ವಿಚಾರಣೆ ವೇಳೆ ತಿಳಿದುಬಂದ ಹಿನ್ನೆಲೆಯಲ್ಲಿ ಇಂದು ನಾಲ್ವರು ಆರೋಪಿಗಳನ್ನು ಪೊಲೀಸರು ಟ್ರೆಂಡ್ ಶೋರೂಂ ಮತ್ತು ವಿಘ್ನೇಶ್ವರನ ದೇವಸ್ಥಾನಕ್ಕೆ ಕರೆದೊಯ್ದು ಮಹಜರ್ ನಡೆಸಿದ್ದಾರೆ. ಟ್ರೆಂಡ್ಸ್ ಶೋರೂಂನ ಸಿಸಿ ಕ್ಯಾಮರಾದಲ್ಲಿ ದಾಖಲಾಗಿದ್ದ ಕೆಲವು ಫುಟೇಜ್‌ಗಳನ್ನು ಕೂಡ ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದರ್ಶನ್ ಗ್ಯಾಂಗ್ ಟಾರ್ಚರ್!

ಹೇಳಿಕೆ ನೀಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ರಾಜು ಐದನೇ ಆರೋಪಿ ನಂದೀಶ್ ಸ್ನೇಹಿತನಾಗಿದ್ದು, ದರ್ಶನ್ ಅವರ ಕಟ್ಟಾ ಅಭಿಮಾನಿ. ಅಭಿಮಾನಿ ರೇಣುಕಾಸ್ವಾಮಿಗೆ ಕರೆಂಟ್ ಶಾಕ್ ಕೊಡಲು ನಂದೀಶ್, ರಾಜು ಎಂಬುವವರಿಂದ ವಿದ್ಯುತ್ ಉಪಕರಣ ಪಡೆದಿದ್ದು, ಬಳಿಕ ಮೃತಪಟ್ಟಿದ್ದಾರೆ.

ರಾಜು ಮತ್ತು ನಂದೀಶ್ ಇಬ್ಬರೂ ಕೇಬಲ್ ವ್ಯಾಪಾರ ಮಾಡುತ್ತಿದ್ದರು. ರೇಣುಕಾಸ್ವಾಮಿ ಅವರಿಗೆ ಮೆಗ್ಗರ್ ಎಂಬ ವಿದ್ಯುತ್ ಪರೀಕ್ಷಾ ಸಾಧನದ ಮೂಲಕ ರೇಣುಕಾಸ್ವಾಮಿ ದೇಹದ ವಿವಿಧೆಡೆ ವಿದ್ಯುತ್ ಶಾಕ್ ನೀಡಿ ದರ್ಶನ್ ಗ್ಯಾಂಗ್ ಮೃಗೀಯವಾಗಿ ವರ್ತಿಸಿದೆ ಎಂಬುದು ತನಿಖೆಯಿಂದ ತಿಳಿದು ಬಂದಿದೆ. ಈ ಮಧ್ಯೆ, ವೀರಶೈವ–ಲಿಂಗಾಯತ ಮಠಾಧೀಶ ರಂಭಾಪುರಿ ಸ್ವಾಮೀಜಿ ಅವರು ಮೃತ ರೇಣುಕಾಸ್ವಾಮಿ ಅವರ ನಿವಾಸಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ರೇಣುಕಾಸ್ವಾಮಿ ಹತ್ಯೆ ಅಮಾನವೀಯ. ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮೃತರ ಪತ್ನಿಗೆ ಸರ್ಕಾರಿ ನೌಕರಿ ನೀಡಬೇಕು. ಈ ಕ್ರೂರ ಹತ್ಯೆಯಿಂದ ಸಮಾಜ ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಿದೆ ಎಂದು ಮಠಾಧೀಶರು ಹೇಳಿದ್ದಾರೆ.

ಶ್ರದ್ಧಾಭಕ್ತಿಯ ಬಕ್ರೀದ್ ಆಚರಣೆ

ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭಾರೀ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಮೇಲ್ವಿಚಾರಣೆಯಲ್ಲಿ ವಾಹನ ನಿಲುಗಡೆ ಮತ್ತು ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಬಕ್ರೀದ್ ಹಿನ್ನೆಲೆಯಲ್ಲಿ ತಿಲಕ್‌ನಗರ ಸೇರಿದಂತೆ ಎಲ್ಲಾ ಮೈದಾನಗಳಲ್ಲಿ ಸಾಮೂಹಿಕ ಪ್ರಾರ್ಥನೆಗಾಗಿ ಭಾನುವಾರ ಸಂಜೆಯೇ ಸ್ವಚ್ಛಗೊಳಿಸಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿತ್ತು. ಹಳೇ ಈದ್ಗಾ ಮೈದಾನವಲ್ಲದೇ, ರಾಜೀವ್‌ನಗರ, ಗೌಸಿಯಾನಗರ, ನಿಮ್ರಾ ಮಸೀದಿಗಳಲ್ಲೂ ಪ್ರಾರ್ಥನೆಗೆ ಸಕಲ ಸೌಲಭ್ಯ ಮಾಡಿಕೊಡಲಾಗಿತ್ತು. ಶಾಸಕ ತನ್ವೀರ್ ಸೇಠ್ ಬೆಳಗ್ಗೆ 7.30 ಗಂಟೆಗೆ ಅಶೋಕ ರಸ್ತೆಯ ಮಸ್ಜೀದ್ ಇ ಕುಚಿಮೆಮನ್‌ನಲ್ಲಿ ಪ್ರಾರ್ಥನೆ ಸಲ್ಲಿಸಿದರು. ಕಾಂಗ್ರೆಸ್ ಮತ್ತು ಮುಸ್ಲಿಂ ಮುಖಂಡರು ಸರ್ ಖಾಜಿ ಹಜರತ್ ಮೌಲಾನಾ ಮೊಹಮದ್ ಉಸ್ಮಾನ್ ಷರೀಫ್ ಅವರನ್ನು ಭೇಟಿ ಮಾಡಿ ಬಕ್ರೀದ್ ಶುಭಾಶಯ ಕೋರಿದರು. ಮುಂಜಾಗ್ರತೆಯಾಗಿ ಈದ್ಗಾ ಮೈದಾನದ ಬಳಿ ಅಗ್ನಿಶಾಮಕ ಠಾಣೆ ಸಿಬ್ಬಂದಿ, ಆಂಬುಲೆನ್ಸ್, ಡಾಗ್ ಸ್ಕ್ವಾಡ್ ನಿಯೋಜನೆ ಮಾಡಲಾಗಿದ್ದು, ಇಂದು ಸಾಮೂಹಿಕ ಪ್ರಾರ್ಥನೆ ಸುಗಮ ಹಾಗೂ ಶಾಂತಿಯುತವಾಗಿ ನೆರವೇರಿತು.

ಶೇ.10ರಷ್ಟು ಮೀಸಲಾತಿಗೆ ಶಿಫಾರಸು

ಕ್ರಮವಾಗಿದೆ. ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲು ಕೇಡರ್ ಮತ್ತು ನೇಮಕಾತಿ ನಿಯಮಗಳನ್ನು ಬದಲಾಯಿಸುವ ಅಗತ್ಯವನ್ನು ನಾವು ಸರ್ಕಾರದ ಮುಂದಿಟ್ಟಿದ್ದೇವೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದ್ದು, ಶೀಘ್ರದಲ್ಲೇ ಸರ್ಕಾರಕ್ಕೆ ಕಳುಹಿಸಲಾಗುವುದು. ಪುರುಷರು ಮತ್ತು ಮಹಿಳೆಯರ ಆಯ್ಕೆ ಪ್ರಕ್ರಿಯೆಯು ಒಂದೇ ಆಗಿರುತ್ತದೆ. ಇಲಾಖೆಯು ಕಟ್ಟುನಿಟ್ಟಾದ ನೇಮಕಾತಿ ಮಾನದಂಡಗಳನ್ನು ನಿರ್ವಹಿಸುತ್ತದೆ. ನಮ್ಮ ಪ್ರಾಥಮಿಕ ಕಾಳಜಿ ಸಾರ್ವಜನಿಕ ಸುರಕ್ಷತೆಯಾಗಿದೆ. ಎಲ್ಲ ನೇಮಕಾತಿಗಳು ಲಿಂಗವನ್ನು ಲೆಕ್ಕಿಸದೆ ಇರಬೇಕು ಮತ್ತು ಮಾನದಂಡಗಳನ್ನು ಪೂರೈಸಬೇಕು ಹಿರಿಯ ಐಪಿಎಲ್ ಅಧಿಕಾರಿ ಹೇಳಿದರು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಕಮಲ್ ಪಂತ್ ಅವರು ಈ ಪ್ರಸ್ತಾವನೆಯನ್ನು ಸರ್ಕಾರದ ಮುಂದಿಟ್ಟಿದ್ದು, ಮಹಿಳೆಯರು ಸಶಸ್ತ್ರ ಪಡೆಗಳು ಮತ್ತು ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ವಲಯಗಳಲ್ಲಿ ವಿವಿಧ ಸವಾಲಿನ ಪಾತ್ರಗಳಲ್ಲಿ ತಮ್ಮನ್ನು ತಾವು ಸಾಬೀತುಪಡಿಸಿದ್ದಾರೆ. ಇದೀಗ ಅಗ್ನಿಶಾಮಕ ಸೇವೆಗಳಲ್ಲಿಯೂ ಅವರ ಸಾಮರ್ಥ್ಯವನ್ನು ನಾವು ಗುರುತಿಸುವ ಸಮಯ ಬಂದಿದೆ ಎಂದು ಹೇಳಿದರು.

ಆಸೆಯೇ ದುಃಖಕ್ಕೆ ಮೂಲ ಎಂದರು ಗೌತಮ ಬುದ್ಧ! ಅಧಿಕ ಲಾಭದ ಆಸೆಯೇ ಮೋಸಕ್ಕೆ ದಾರಿ ಎಂದರು ಪೊಲೀಸರು!!

ಯಾವುದಕ್ಕೂ ಕಿವಿಗೊಡದೆ ಆನ್‌ಲೈನ್ ಮೂಲಕ ಹೂಡಿಕೆ ಮಾಡಿ ಲಕ್ಷ ಲಕ್ಷ ಕಳೆದುಕೊಳ್ಳುತ್ತಿರುವ ಈ ಜನ..!



- ಪ್ರತ್ಯೇಕ ಪ್ರಕರಣದಲ್ಲಿ ನಾಲ್ವರಿಗೆ 'ಪಂಗನಾಮ'
- ವಿದ್ಯಾವಂತರೇ ಮೋಸ ಹೋಗುತ್ತಿರುವ ಅಚ್ಚರಿ ಸಂಗತಿ

ಮೈಸೂರು, ಜೂ.17(ಎಸ್‌ಬಿಡಿ)– ಭಾರಿ ಲಾಭದ ಆಮಿಷವೊಡ್ಡಿ ಲಕ್ಷಾಂತರ ರೂ. ಹೂಡಿಕೆ ಮಾಡಿಸಿಕೊಂಡು ವಂಚಿಸುತ್ತಿರುವ ಪ್ರಕರಣಗಳು ಮೈಸೂರಿನಲ್ಲಿ ದಿನೇ ದಿನೆ ಹೆಚ್ಚಾಗುತ್ತಿವೆ.

ಇಂಜಿನಿಯರ್‌ಗಳು, ವೈದ್ಯರು, ಉದ್ಯಮಿಗಳು, ವ್ಯಾಪಾರಿಗಳು, ಗೃಹಿಣಿಯರು, ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವರ್ಗದವರೂ ಆನ್‌ಲೈನ್ ವಂಚನೆಗೆ ಬಲಿಯಾಗುತ್ತಿದ್ದಾರೆ. ವಾಟ್ಸಾಪ್ ಮೂಲಕ ವಂಚಕರು ಹೆಣೆಯುವ ಜಾಲಕ್ಕೆ ವಿದ್ಯಾವಂತರು ಸಿಲುಕಿಕೊಂಡು ಹಣ ಕಳೆದುಕೊಳ್ಳುತ್ತಿದ್ದಾರೆ. ವಂಚಕರು ವಿಭಿನ್ನ ಹೆಸರಿನ ವಾಟ್ಸಾಪ್ ಗುಂಪುಗಳನ್ನು ರಚಿಸಿ, ಹೂಡಿಕೆ ಮತ್ತು ಲಾಭದ ಬಗ್ಗೆ ಮಾರ್ಗದರ್ಶನ ನೀಡುವ ನೆಪದಲ್ಲಿ ತಿಳಿದವರನ್ನೂ ನಿರಾಯಾಸವಾಗಿ ಖೆಡ್ಡಾಕ್ಕೆ ಕೆಡವುತ್ತಿದ್ದಾರೆ. ಆರಂಭದಲ್ಲಿ ಚಿಲ್ಲರೆ ಲಾಭ ನೀಡಿ, ಲಕ್ಷಾಂತರ ಹಣ ಹೂಡಿಕೆ ಮಾಡಿಸಿಕೊಂಡ ನಂತರ ವಂಚಕರು ನಾಪತ್ತೆಯಾಗುತ್ತಿದ್ದಾರೆ. ಲಾಭದ ಆಸೆಯಿಂದ ಅಪರಿಚಿತನ ಮಾತು ನಂಬಿ ಮೋಸಹೋದ ನಂತರ ಪೊಲೀಸರ ನೆರವಿಗೆ ಮೊರೆ ಹೋಗುತ್ತಿದ್ದಾರೆ.

ಈ ರೀತಿಯಲ್ಲಿ ಹಣ ಹೂಡಿಕೆ ಮಾಡಿ, ವಂಚನೆಗೊಳಗಾದವರು ತಮ್ಮ ಯಾವ ಪ್ರಯತ್ನವೂ ಸಫಲವಾಗದಿದ್ದಾಗ ಪೊಲೀಸರಿಗೆ ದೂರು ನೀಡುತ್ತಿದ್ದಾರೆ. ಕಳೆದ ಎರಡು ದಿನಗಳಲ್ಲಿ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ನಾಲ್ಕು ಪ್ರಕರಣಗಳಲ್ಲಿ ಸುಮಾರು 36 ಲಕ್ಷ ರೂ. ವಂಚನೆಯಾಗಿರುವ ಬಗ್ಗೆ ವರದಿಯಾಗಿದೆ. ಮನೆಯವರಿಗೆ ತಿಳಿಯದಂತೆ ಹೂಡಿಕೆ ಮಾಡಿರುವ ಕೆಲವರು, ದೂರು ನೀಡುವುದಕ್ಕೂ ಮುಂದೆ ಬರುತ್ತಿಲ್ಲ. ಲಾಭದ ಆಸೆಗೆ ಸಾಲ ಮಾಡಿ, ಹೂಡಿಕೆ ಮಾಡಿದವರು ಕಂಗಾಲಾಗಿದ್ದಾರೆ.

ಫೇಸ್‌ಬುಕ್‌ನಲ್ಲಿ ಗಾಳ: ಮೈಸೂರು ಜಯನಗರದ ವೀರೇಶ್, 12.50 ಲಕ್ಷ ರೂ. ಹೂಡಿಕೆ ಮಾಡಿ, ಕಳೆದುಕೊಂಡಿದ್ದಾರೆ. ಇವರು ಫೇಸ್‌ಬುಕ್‌ನಲ್ಲಿ ಮ್ಯೂಚುವಲ್ ಫಂಡ್ ಬಗ್ಗೆ ಮಾಹಿತಿ ಓದುತ್ತಿದ್ದ ವೇಳೆ ಥಟ್ಟನೆ ಕ್ರಿಯೇಟಿವ್ ಬಿಸಿನೆಸ್ ಸ್ಕೂಲ್ ಎಂಬ ಲಿಂಕ್ ಪ್ರದರ್ಶನವಾಗಿದೆ. ಆ ಲಿಂಕ್ ಒತ್ತಿದ ತಕ್ಷಣ ಷೇರು ಮಾರುಕಟ್ಟೆ ಬಗ್ಗೆ ಮಾಹಿತಿ ನೀಡುವ ವಾಟ್ಸಾಪ್ ಗುಂಪಿಗೆ ಸೇರುವಂತೆ ತಿಳಿಸಲಾಗಿದೆ. ಮ್ಯೂಚುವಲ್ ಫಂಡ್ ಬಗ್ಗೆ ಓದುತ್ತಿದ್ದ ವೀರೇಶ್ ಏನನ್ನೂ ಯೋಚಿಸದೆ ವಾಟ್ಸಾಪ್ ಗುಂಪಿಗೆ ಸೇರಿದ್ದಾರೆ. ಗುಂಪಿನಲ್ಲಿ ಷೇರು ಮಾರುಕಟ್ಟೆ ಬಗ್ಗೆ ಮಾಹಿತಿ ಲಭ್ಯವಾಗಿದ್ದರಿಂದ ವೀರೇಶ್‌ಗೆ ನಂಬಿಕೆ ಹೆಚ್ಚಾಗಿದೆ. ಅದೇ ವೇಳೆ ZIOPTO ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡಿಕೊಂಡು ಹಣ ಹೂಡಿಕೆ ಮಾಡಿ, ಲಾಭ ಗಳಿಸಬಹುದು ಎಂಬ ಸಂದೇಶ ಬಂದಿದೆ. ಅದನ್ನು ನಂಬಿದ ವೀರೇಶ್, ಆ್ಯಪ್ ಇನ್‌ಸ್ಟಾಲ್ ಮಾಡಿ ಮೊದಲಿಗೆ 12,500 ರೂ.ಗಳನ್ನು ವಂಚಕರು ಸೂಚಿಸಿದ ಖಾತೆಗೆ ವರ್ಗಾವಣೆ ಮಾಡಿದ್ದಾರೆ. ನಂತರ 50 ಸಾವಿರ ರೂ. ಸೇರಿದಂತೆ ಹಲವು ಹಂತಗಳಲ್ಲಿ 12.50 ಲಕ್ಷ ಕಟ್ಟಿದ್ದಾರೆ. ಕೆಲ ದಿನಗಳ ನಂತರ ನಿಮಗೆ ಲಾಭದ ಹಣ ಬಂದಿದೆ ಆದರೆ ಅದನ್ನು ತೆಗೆದುಕೊಳ್ಳಲು ಮತ್ತೆ 3 ಲಕ್ಷ ರೂ. ಹೂಡಿಕೆ ಮಾಡಬೇಕು ಎಂದು ತಿಳಿಸಿದ್ದಾರೆ. ಇದರಿಂದ ಅನುಮಾನಗೊಂಡು ಪರಿಶೀಲಿಸಿದಾಗ ಅದು ವಂಚನೆ ಜಾಲ ಎನ್ನುವುದು ಗೊತ್ತಾಗಿದೆ.



ಲಾಭದ ಹಣ ಡ್ರಾ ಆಗಲ್ಲ!: ರಾಮಕೃಷ್ಣನಗರದ ವಿದ್ಯಾರ್ಥಿಯೊಬ್ಬ ನಕಲಿ ಸ್ಟಾಕ್ ಅನಾಲಿಸ್ಟ್ ನಂಬಿ 10.76 ಲಕ್ಷ ರೂ. ಕಳೆದುಕೊಂಡಿದ್ದಾನೆ. 21 ವರ್ಷದ ಈ ವಿದ್ಯಾರ್ಥಿ, ಟೆಲಿಗ್ರಾಂ ಬಳಸುತ್ತಿದ್ದ ವೇಳೆ ಸ್ಟಾಕ್ ಅನಾಲಿಸ್ಟ್‌ಗೆ ಸಂಬಂಧಿಸಿದ ಹಲವು ಲಿಂಕ್‌ಗಳು ಕಾಣಿಸಿಕೊಂಡಿವೆ. ಆಗ ಆತ 'ವಾಟರ್ ವೇ ವೆಲ್ತ್ ಸ್ಟಾಕ್ ಅನಾಲಿಸ್ಟ್' ಲಿಂಕ್ ಕ್ಲಿಕ್ ಮಾಡಿ, ಆ ವಾಟ್ಸಾಪ್ ಗ್ರೂಪ್‌ಗೆ ಸೇರ್ಪಡೆಯಾಗಿದ್ದಾನೆ. ಸ್ಟಾಕ್ ಮಾರ್ಕೆಟ್‌ನಲ್ಲಿ ಹಣ ಹೂಡಿಕೆ ಮಾಡುವುದು ಹಾಗೂ ಲಾಭ ಗಳಿಸುವುದು ಹೇಗೆ ಎಂಬುದರ ಬಗ್ಗೆ ಗ್ರೂಪ್‌ನಲ್ಲಿ ಮಾಹಿತಿ ನೀಡಲಾಗಿದೆ. ಜೊತೆಗೆ ICSG ಅಪ್ಲಿಕೇಷನ್ ಇನ್‌ಸ್ಟಾಲ್ ಮಾಡಿಕೊಂಡು ಹಣ ಹೂಡಿಕೆ ಮಾಡಿ, ಅಧಿಕ ಲಾಭ ಗಳಿಸಬಹುದು ಎಂಬ ಸಂದೇಶವನ್ನೂ ಹಂಚಿಕೊಳ್ಳಲಾಗಿದೆ. ಅದನ್ನು ನಂಬಿದ ವಿದ್ಯಾರ್ಥಿ ಹಂತ ಹಂತವಾಗಿ 10.76 ಲಕ್ಷ ರೂ. ಹೂಡಿಕೆ ಮಾಡಿ, ವ್ಯವಹರಿಸಿದ್ದಾನೆ. ಈ ನಡುವೆ ಆ್ಯಪ್ ಪರಿಶೀಲಿಸಿದಾಗ 24 ಲಕ್ಷ ರೂ. ಲಾಭ ತೋರಿಸಿದೆ. ಇದರಿಂದ ತುಂಬಾ ಖುಷಿಯಾದ ವಿದ್ಯಾರ್ಥಿ ಆ ಹಣವನ್ನು ತನ್ನ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಕೊಳ್ಳಲು ಪ್ರಯತ್ನಿಸಿದಾಗ ರಿಜೆಕ್ಟ್ ಎಂದು ಬಂದಿದೆ. ಈ ಬಗ್ಗೆ ವಾಟ್ಸಾಪ್ ಗ್ರೂಪ್‌ನಲ್ಲಿ ಪ್ರಶ್ನಿಸಿದಾಗ ತೆರಿಗೆ ಹಣ ಪಾವತಿಸಿದರೆ ಮಾತ್ರ ಲಾಭದ ಹಣವನ್ನು ವಿತ್‌ಡ್ರಾ ಮಾಡಬಹುದು ಎಂದು ಮತ್ತೆ ಹಣ ಪೀಕಲು ವಂಚಕರು ಯತ್ನಿಸಿದ್ದಾರೆ. ಆಗ ಆ ವಿದ್ಯಾರ್ಥಿಗೆ ತಾನು ಮೋಸ ಹೋಗಿದ್ದು ತಿಳಿದಿದೆ.

ಎಚ್ಚರವಿರಲಿ...

ಆನ್‌ಲೈನ್ ವಂಚನೆ ಹೊಸದೇನಲ್ಲ. ದಿನೇ ದಿನೆ ಸೈಬರ್ ಅಪರಾಧ ಹೆಚ್ಚಾಗುತ್ತಿವೆ. ಪೊಲೀಸರು ಈ ಬಗ್ಗೆ ಎಷ್ಟೇ ಜಾಗೃತಿ ಮೂಡಿಸಿದರೂ ಪ್ರಯೋಜನವಾಗಿಲ್ಲ. ಫೇಸ್‌ಬುಕ್, ವಾಟ್ಸಾಪ್, ಇನ್‌ಸ್ಟಾಗ್ರಾಮ್, ಟೆಲಿಗ್ರಾಂ, ವೆಬ್‌ಸೈಟ್‌ಗಳ ಮೂಲಕ ಅಧಿಕ ಲಾಭದ ಆಮಿಷ ತೋರಿ ಜನರನ್ನು ವಂಚಿಸಲಾಗುತ್ತಿದೆ. ವಿದ್ಯಾವಂತರೇ ಈ ವಂಚನೆಗೆ ಹೆಚ್ಚು ಬಲಿಯಾಗುತ್ತಿದ್ದಾರೆ. ಅಧಿಕ ಲಾಭದ ಆಸೆಗೆ ಬಿದ್ದು ಇರುವ ಹಣವನ್ನೂ ಕಳೆದುಕೊಳ್ಳಬೇಡಿ. ಅನುಮಾನ ಬಂದರೆ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿ.

ಅಬ್ಬಾ ಇಷ್ಟೊಂದು ಲಾಭ!: ಹೂಡಿಕೆ ಮಾಡಿದರೆ ಹತ್ತು–ಇಪ್ಪತ್ತಲ್ಲ ಬರೋಬ್ಬರಿ ಶೇ.700–1000 ದಷ್ಟು ಭಾರಿ ಲಾಭ ಗಳಿಸಬಹುದು ಎಂಬ ಸುಳ್ಳು ಸಂದೇಶ ನಂಬಿ ವ್ಯಕ್ತಿಯೊಬ್ಬರು ಸುಮಾರು 8 ಲಕ್ಷ ರೂ. ಕಳೆದುಕೊಂಡಿದ್ದಾರೆ. ಕುಂಬಾರಗೇರಿ ಗೋವಿಂದಸ್ವಾಮಿ, ಹಣ ಹೂಡಿಕೆ ಬಗ್ಗೆ ಮಾಹಿತಿ ನೀಡುವ ವಾಟ್ಸಾಪ್ ಸೇರಿದ್ದಾರೆ. ನಂತರ SSGA & DAVID BOALINDIA ಗ್ರೂಪ್‌ನಲ್ಲಿ ತಿಳಿಸಿದ ಖಾತೆಗೆ 7.90 ಲಕ್ಷ ರೂ. ಹಣ ವರ್ಗಾವಣೆ ಮಾಡಿದ್ದಾರೆ. ಕೆಲವೇ ದಿನಗಳಲ್ಲಿ ಆ ಗ್ರೂಪ್ ನಿಷ್ಕ್ರಿಯವಾಗಿದ್ದು, ಹಣ ಹೂಡಿಕೆ ಮಾಡಿದ್ದವರು ಕಂಗಾಲಾಗಿದ್ದಾರೆ.

ವೆಬ್ ಪೇಜ್ ಕ್ಲೋಸ್: ರಾಜೀವ್ ನಗರದ ಇಂಜಿನಿಯರ್ ರಜಾಕ್, ಮೋಸದ ಜಾಲಕ್ಕೆ ಸಿಲುಕಿ 4.80 ಲಕ್ಷ ರೂ. ಕಳೆದುಕೊಂಡಿದ್ದಾರೆ. ಫೇಸ್‌ಬುಕ್‌ನಲ್ಲಿ ಸ್ಟಾಕ್ ಅನಾಲಿಸ್ಟ್ ಎಂದು ಫೋಟೋ ಸಹಿತ ಪ್ರದರ್ಶನಗೊಂಡ ಲಿಂಕ್ ಒತ್ತಿ, ಜೆಫರೀಸ್ ಎಲೈಟ್ ಇನ್ವೆಸ್ಟ್‌ಮೆಂಟ್ ವಾಟ್ಸಾಪ್ ಗ್ರೂಪ್‌ಗೆ ಸೇರಿದ್ದರು. ಅದರಲ್ಲಿ ಅಪ್ಪರ್ ಸರ್ಕ್ಯೂಟ್ ಸ್ಟಾಕ್‌ಗಳ ಬಗ್ಗೆ ಮಾಹಿತಿ ಪಡೆದು, ಅಲ್ಲಿ ಸೂಚಿಸಲಾದ ವೆಬ್‌ಸೈಟ್ ಮೂಲಕ ಮೊದಲು 2.40 ಲಕ್ಷ ರೂ. ಹಾಕಿದ್ದಾರೆ. ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ ವಂಚಕರ ಮಾತು ನಂಬಿ ಮತ್ತೊಮ್ಮೆ 2.40 ಲಕ್ಷ ರೂ. ಹಣ ಹಾಕಿದ್ದಾರೆ. ಈ ನಡುವೆ 1.38 ಲಕ್ಷ ರೂ. ಲಾಭ ಬಂದಿದೆ ಎಂಬ ಸಂದೇಶ ನೋಡಿ, ಆ ಹಣವನ್ನು ವಿತ್‌ಡ್ರಾ ಮಾಡಲು ಮುಂದಾದಾಗ ರಿಜೆಕ್ಟ್ ಆಗಿದೆ. ಕೂಡಲೇ ತಮಗೆ ಮಾರ್ಗದರ್ಶನ ನೀಡುತ್ತಿದ್ದವರ ನಂಬರ್‌ಗೆ ಕರೆ ಮಾಡಿ ಸಮಸ್ಯೆ ಹೇಳುತ್ತಿದ್ದಂತೆ ಆ ವೆಬ್‌ಸೈಟ್ ಪೇಜ್ ಮಾಯವಾಗಿದೆ.

ಸಂಗೀತ ಮಕ್ಕಳ ಮನೋವಿಕಾಸಕ್ಕೆ ಅವಶ್ಯಕ

ಹಿರಿಯ ಕಲಾವಿದೆ ಶಶಿಕಲಾ ಚಂದ್ರಶೇಖರ್ ಅಭಿಮತ



ಸ್ವರಾಲಯ ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮವನ್ನು ವಿದುಷಿ ಶಶಿಕಲಾ ಚಂದ್ರಶೇಖರ್ ಉದ್ಘಾಟಿಸಿದರು.

ಮೈಸೂರು, ಜೂ. 17(ಎಸ್‌ಪಿಎನ್)– ಲಲಿತಾ ಕಲಾ ಪ್ರಾಕಾರಗಳಲ್ಲಿ ಸಂಗೀತ, ಸಾಹಿತ್ಯ, ನೃತ್ಯ, ಚಿತ್ರಕಲೆ ಕಲಿಕೆ ಮಕ್ಕಳ ಮನೋವಿಕಾಸಕ್ಕೆ ನಾಂದಿಯಾಗುತ್ತದೆ ಎಂದು ಹಿರಿಯ ಕಲಾವಿದೆ, ವಿದುಷಿ ಶಶಿಕಲಾ ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರ ಆದಿಚುಂಚನಗಿರಿ ರಸ್ತೆಯಲ್ಲಿನ ಗಾನಭಾರತಿ ಸಭಾಂಗಣದಲ್ಲಿ ಸ್ವರಾಲಯ ಸಂಗೀತ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಸ್ವರಾಲಯ ಸಾಂಸ್ಕೃತಿಕ ಹಬ್ಬ–2024ರ ಸಮಾರಂಭವನ್ನು ಉದ್ಘಾಟಿಸಿ ಅವರು, ಮಾತನಾಡಿದರು.

ಮಕ್ಕಳ ಮನೋವಿಕಾಸಕ್ಕೆ ಲಲಿತ ಕಲೆಗಳು ಸಹಕಾರಿಯಾಗಲಿವೆ. ಅಲ್ಲದೆ, ರೋಗಿಗಳ ಆತ್ಮವಿಶ್ವಾಸ ಹೆಚ್ಚಿಸಲು ಸಂಗೀತ ಸಹಕಾರಿ ಎಂಬುದನ್ನು ಈಗಾಗಲೇ ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅಂತೆಯೇ ಸಂಗೀತದಿಂದ ವ್ಯಕ್ತಿಯ ಮಾನಸಿಕ ಒತ್ತಡ ಕಡಿಮೆ ಮಾಡಿ, ಏಕಾಗ್ರತೆ ತರಲು ಸಹಕಾರಿಯಾಗುತ್ತದೆ ಎಂದು ಕೆಲ ಘಟನೆಗಳನ್ನು ಉಲ್ಲೇಖಿಸಿದರು.

ಈ ನಿಟ್ಟಿನಲ್ಲಿ ಸ್ವರಾಲಯ ಸಾಂಸ್ಕೃತಿಕ ಸಂಸ್ಥೆ ಕಳೆದ 34 ವರ್ಷಗಳಿಂದ ಸಂಗೀತ ಮತ್ತು ಸುಗಮ ಸಂಗೀತ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದ್ದು, ಈ ಸಂಸ್ಥೆ ಮೂಲಕ ನೂರಾರು ವಿದ್ಯಾರ್ಥಿಗಳಿಗೆ ಸಂಗೀತ ಕಲಿಸಿರುವ ಕೀರ್ತಿ ಸ್ವರಾಲಯ ಸಂಸ್ಥೆಗೆ ಸಲ್ಲುತ್ತದೆ ಎಂದರಲ್ಲದೆ, ಪ್ರತಿ ವರ್ಷ ಸಾಧಕರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಸ್ವಾಗತಾರ್ಹ ಎಂದರು.

ಈ ವೇಳೆ ಸ್ವರಾಲಯ ಸಂಗೀತ ಸಂಸ್ಥೆಯ ಅಧ್ಯಕ್ಷೆ ಸುಮಾಹರಿನಾಥ್, ವಿದುಷಿ ಭಾಗ್ಯಲಕ್ಷ್ಮಿ ಸೇರಿದಂತೆ ಇತರರಿದ್ದರು. ಹೆಚ್.ಎಸ್. ಶ್ರೀಕಾಂತಾಮಣಿ ನಿರೂಪಿಸಿದರು. ಜಾನಪದ ಗಾಯಕ ಅಮ್ಮರಾಮಚಂದ್ರ ಜಾನಪದ ಗೀತೆಗಳನ್ನು ಹಾಡಿದರು. ವಿದುಷಿ ಸ್ಪಂದನ ಮತ್ತು ಸ್ನೇಹ ಅವರು ಭರತನಾಟ್ಯ ಪ್ರದರ್ಶಿಸಿದರು.

ವಿದ್ಯುತ್ ಶಾಕ್‌ನಿಂದ ಬಾಲಕ ಸಾವು

ಮೈಸೂರು, ಜೂ.17(ಎಸ್‌ಬಿಡಿ)– ವಿದ್ಯುತ್ ಪ್ರವಹಿಸಿ ಬಾಲಕನೊಬ್ಬ ಮೃತಪಟ್ಟಿರುವ ಘಟನೆ ಮೈಸೂರು ತಾಲೂಕು ದೇವಗಳ್ಳಿಯಲ್ಲಿ ನಡೆದಿದೆ.

ಗ್ರಾಮದ ಸುಂದರೇಶ್ ಅವರ ಪುತ್ರ ಭುವಿತ್(7) ಮೃತ ಬಾಲಕ. ಶನಿವಾರ ಸಂಜೆ ಮನೆಯಲ್ಲಿ ಫ್ಯಾನ್ ಸ್ವಿಚ್ ಆನ್ ಮಾಡಲು ಹೋದಾಗ ವೈರ್ ತಗುಲಿ ವಿದ್ಯುತ್ ಪ್ರವಹಿಸಿದೆ. ಈ ಸಂಬಂಧ ಆತನ ಪೋಷಕರು ಭಾನುವಾರ ನೀಡಿದ ದೂರಿನನ್ವಯ ಜಯಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿದ್ಯುತ್ ಅವಘಡ ಸಾಧ್ಯತೆ ಬಗ್ಗೆ ಜನ ಜಾಗೃತವಾಗಿರಬೇಕು. ಅದರಲ್ಲೂ ಮಕ್ಕಳಿರುವ ಮನೆಯಲ್ಲಿ ಸ್ವಿಚ್‌ಗಳು ಸುಸ್ಥಿತಿಯಲ್ಲಿವೆಯೇ?, ವೈರ್‌ಗಳಲ್ಲಿ ಎಲ್ಲಾದರೂ ಹಾನಿ ಆಗಿದೆಯೇ?, ವಿದ್ಯುತ್ ಉಪಕರಣಗಳಲ್ಲಿ ಏನಾದರೂ ಸಮಸ್ಯೆ ಇದೆಯೇ? ಎಂದು ಆಗಾಗ್ಗೆ ಗಮನಿಸಿ, ಏನಾದರೂ ಸಮಸ್ಯೆಯಾಗಿದ್ದರೆ ಕೂಡಲೇ ಸರಿಪಡಿಸಿಕೊಳ್ಳಬೇಕು. ಸಂಪ್‌ಗಳಿಗೆ ಅಳವಡಿಸಿರುವ ಪಂಪ್ ಮೋಟಾರ್‌ಗಳನ್ನು ಮಕ್ಕಳು ಮುಟ್ಟದಂತೆ ಸುರಕ್ಷತಾ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಜೂ. 21ರಂದು ಮೈಸೂರು ಜಿಲ್ಲೆಯ ಎಲ್ಲಾ ಶಾಲೆಗಳಲ್ಲೂ ಯೋಗ ಪ್ರದರ್ಶನ

ಮೈಸೂರು, ಜೂ. 17(ಆರ್‌ಕೆ)– ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಜೂನ್ 21ರಂದು ಎಲ್ಲಾ ಶಾಲೆಗಳಲ್ಲೂ ಯೋಗ ಪ್ರದರ್ಶನಕ್ಕೆ ಸಮಗ್ರ ಶಿಕ್ಷಣ ಕರ್ನಾಟಕವು ನಿರ್ದೇಶನ ನೀಡಿದೆ.

ರಾಜ್ಯದ ಎಲ್ಲಾ ಶಾಲೆಗಳಲ್ಲೂ ಅಂದು ಯೋಗ ದಿನ ಆಚರಿಸಿ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ಭಾಗವಹಿಸುವಂತೆ ಪ್ರೇರಣೆ ನೀಡಿ ಯೋಗ ಪ್ರದರ್ಶನ ಮಾಡಿಸುವಂತೆ ಎಲ್ಲಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿದೆ

ಯೋಗವನ್ನು ಉತ್ತೇಜಿಸಲು ಶಾಲಾ ಮಕ್ಕಳ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು, ಯೋಗ ದಿನ ಆಚರಿಸಿದ ಬಗ್ಗೆ ಚಿತ್ರ ಸಮೇತ ಜೂನ್ 25ರೊಳಗೆ ಸಮಗ್ರ ಶಿಕ್ಷಣ ಕರ್ನಾಟಕದ ಅಧಿಕಾರಿಗಳು ಸುತ್ತೋಲೆ ಮೂಲಕ ಸೂಚನೆ ನೀಡಿದೆ.



ಜಿಲ್ಲಾ ಉಪನಿರ್ದೇಶಕರು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಶಾಲಾ ಮುಖ್ಯೋಪಾಧ್ಯಾಯರಿಗೆ ಮಾಹಿತಿ ನೀಡಿ ಯೋಗಾಸನ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಬೇಕು. ಅಲ್ಲಿ ಕುಡಿಯುವ ನೀರು, ಸ್ವಚ್ಛತೆ ವ್ಯವಸ್ಥೆ ಮಾಡಬೇಕು ಎಂದು ಸೂಚಿಸಲಾಗಿದೆ.

ಅಂದು ಮಕ್ಕಳು, ಪೋಷಕರಿಗೆ ಯೋಗದ ಮಹತ್ವ, ವೈಶಿಷ್ಟ್ಯಗಳ ಬಗ್ಗೆ ತಿಳುವಳಿಕೆ, ಮಾಹಿತಿ ನೀಡಬೇಕೆಂದು ನಿರ್ದೇಶನ ನೀಡಿರುವುದರಿಂದ ಉಪನಿರ್ದೇಶಕ ಹೆಚ್.ಕೆ. ಪಾಂಡು ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಖಾಸಗಿ ಶಾಲೆಗಳಿಗೆ ಜೂನ್ 21ರಂದು ಯೋಗ ದಿನ ಆಚರಿಸುವಂತೆ ತಿಳಿಸಿದ್ದಾರೆ.

ಟಿಡಿಪಿ ಮುಖ್ಯಸ್ಥರಾಗಿ ಶ್ರೀನಿವಾಸ್‌ರಾವ್ ಯಾದವ್

ಅಮರಾವತಿ: ತೆಲುಗು ದೇಶಂ ಪಕ್ಷದ ನಾಯಕ, ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ತಮ್ಮ ಪಕ್ಷದ ನೂತನ ರಾಜ್ಯಾಧ್ಯಕ್ಷರನ್ನಾಗಿ ಗಜುವಾಕ ಶಾಸಕ ಶ್ರೀನಿವಾಸ ರಾವ್ ಯಾದವ್ ಅವರನ್ನು ನೇಮಕ ಮಾಡಿದ್ದಾರೆ. ಈ ಹಿಂದೆ ಕೆ.ಅಚ್ಚನಾಯ್ಡು ಅವರು ರಾಜ್ಯಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು. ವಿಶಾಖಪಟ್ಟಣಂ ಟಿಡಿಪಿ ಸಂಸದೀಯ ಪಕ್ಷದ ಅಧ್ಯಕ್ಷರಾಗಿ ಕೆಲಸ ಮಾಡಿದ ಯಾದವ್ ಅವರು ಹೊಸ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತಾರೆ ಎಂದು ನಾಯ್ಡು ವಿಶ್ವಾಸ ವ್ಯಕ್ತಪಡಿಸಿದರು.



ಪೆಟ್ರೋಲ್, ಡೀಸೆಲ್ ದರ ಕಡಿತದಿಂದ ರಾಜ್ಯದ ಬೊಕ್ಕಸಕ್ಕೆ ಉಂಟಾಗಿದ್ದ ನಷ್ಟ ಸರಿದೂಗಿಸಲಾಗಿದೆ

ಡೀಸೆಲ್, ಪೆಟ್ರೋಲ್ ದರ ಏರಿಕೆ ಸಮರ್ಥಿಸಿಕೊಂಡ ಕಾಂಗ್ರೆಸ್ ವಕ್ತಾರ ಲಕ್ಷ್ಮಣ್

ಮೈಸೂರು,ಜೂ.17(ಎಂಟಿವೈ)– ಕಳೆದ ವಿಧಾನಸಭಾ ಚುನಾವಣೆ ವೇಳೆ ರಾಜಕೀಯ ಲಾಭ ಮಾಡಿಕೊಳ್ಳುವ ಏಕೈಕ ಉದ್ದೇಶದಿಂದ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಪೆಟ್ರೋಲ್–ಡೀಸೆಲ್‌ನ ಬೆಲೆ ಕಡಿಮೆ ಮಾಡಿದ್ದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿತ್ತು ಅದನ್ನು ಸರಿಪಡಿಸಲು ಕಾಂಗ್ರೆಸ್ ಸರ್ಕಾರ ಇಂಧನ ಬೆಲೆ ಹೆಚ್ಚಿಸಿ, ಆಗುತ್ತಿದ್ದ ನಷ್ಟವನ್ನು ಸರಿದೂಗಿಸುತ್ತಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ತಿಳಿಸಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸೋಮವಾರ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮೂರು ವರ್ಷಗಳ ಹಿಂದೆ ಪಂಚ ರಾಜ್ಯಗಳ ಚುನಾವಣೆ ಹಿನ್ನೆಲೆಯಲ್ಲಿ ಕೇಂದ್ರ ಸಚಿವೆ ನಿರ್ಮಲ ಸೀತಾರಾಮನ್ ಅವರು ಪೆಟ್ರೋಲ್–ಡೀಸೆಲ್ ಮೇಲೆ 3 ರೂ.ಕಡಿಮೆ ಮಾಡಿದ್ದರು. ಆ ಸಂದರ್ಭದಲ್ಲಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸರ್ಕಾರವನ್ನು ಮೆಚ್ಚಿಸುವ ಸಲುವಾಗಿ ರಾಜ್ಯದ ತೆರಿಗೆಯಲ್ಲಿ 5 ರೂ.ಕಡಿತಗೊಳಿಸಿದರು. ಇದರಿಂದ 15,184 ಕೋಟಿ ರೂ. ರಾಜ್ಯಕ್ಕೆ ನಷ್ಟವಾಗಿದೆ ಈ ನಷ್ಟವನ್ನು ಸರಿದೂಗಿಸಲು ರಾಜ್ಯ ಸರ್ಕಾರ ಮೌಲ್ಯಾಧಾರಿತ ತೆರಿಗೆಯನ್ನು ಪುನರ್ ಜಾರಿಗೆ ತಂದಿದೆ. ಇದು ರಾಜಕೀಯ ಪ್ರೇರಿತ ಬೆಲೆ ಏರಿಕೆಯಲ್ಲ ಎಂದು ತಿಳಿಸಿದರು.

ಪೆಟ್ರೋಲ್ ಬೆಲೆಯಲ್ಲಿ ಶೇ.3.92, ಡೀಸೆಲ್ ಮೇಲೆ ಶೇ.4ರಷ್ಟು ತೆರಿಗೆ ಹೆಚ್ಚಿಸಿದೆ. ಇದರಿಂದ 500 ಕೋಟಿ ರೂ.ರಾಜ್ಯ ಸರ್ಕಾರಕ್ಕೆ ಲಾಭವಾಗಲಿದೆ ಹೊರತು 3 ಸಾವಿರ ಕೋಟಿ ರೂ. ಅಲ್ಲ. ಆದರೆ, ಕೆಲವು ಮಾಧ್ಯಮಗಳು ಮತ್ತು ಬಿಜೆಪಿ ನಾಯಕರು ಶೇ.29ರಷ್ಟು ಡೀಸೆಲ್ ಮೇಲೆ ಶೇ.18ರಷ್ಟು ಪೆಟ್ರೋಲ್ ಮೇಲೆ ತೆರಿಗೆ ಹೆಚ್ಚಿಸಿದ್ದಾರೆ ಎಂದು ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ವಿಪಕ್ಷ ನಾಯಕ ಆರ್.ಅಶೋಕ್ ಜವಾಬ್ದಾರಿಯನ್ನು ಅರಿತು ಮಾತನಾಡಬೇಕು. ನಾಲಿಗೆಗೆ ಮೂಳೆ ಇಲ್ಲ ಎಂದು ಬಾಯಿಗೆ ಬಂದಂತೆ ಮಾತನಾಡಬಾರದು. ಬಿಜೆಪಿ ನಾಯಕರಿಗೆ ಕಿಂಚಿತ್ತು ಸಾಮಾನ್ಯ ಜ್ಞಾನ, ಜನರ ಮೇಲೆ ಕಾಳಜಿ ಇದ್ದರೆ 2014ರಿಂದ 2024ರವರೆಗೆ ಪೆಟ್ರೋಲ್–ಡೀಸೆಲ್ ದರ 22 ಬಾರಿ ಏರಿಕೆ ಮಾಡಿರುವುದನ್ನು ಪ್ರಶ್ನಿಸಲಿ ಎಂದು ಸವಾಲು ಹಾಕಿದರು.

ಕಚ್ಚಾತೈಲ ಬೆಲೆ ಹೆಚ್ಚಾಗಿದ್ದ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ 77 ರೂ.ಗೆ ಪೆಟ್ರೋಲ್, 55 ರೂ.ಗೆ ಡೀಸೆಲ್ ನೀಡುತ್ತಿತ್ತು. ಆದರೆ, ಇಂದು ಕಚ್ಚಾತೈಲ ಬೆಲೆ ಕುಸಿತ ವಾಗಿದೆ. ಹೀಗಾಗಿ 60 ರೂ. ಪೆಟ್ರೋಲ್ ನೀಡಬೇಕು. ಆದರೆ, 102 ರೂ.ಗೆ ನೀಡುತ್ತಿದೆ.

ಪ್ರತಿಭಟಿಸುವವರು ಪಾಕಿಸ್ತಾನಕ್ಕೆ ಹೋಗಿ ಎನ್ನುತ್ತಿದ್ದರು

ಈ ಹಿಂದೆ ಪೆಟ್ರೋಲ್–ಡೀಸೆಲ್ ಬೆಲೆ ನಿರಂತರವಾಗಿ ಏರಿಕೆಯಾಗಿ ಕಾಂಗ್ರೆಸ್ ಪ್ರತಿಭಟನೆ ನಡೆಸುವ ಸಂದರ್ಭದಲ್ಲಿ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಪ್ರತಿಭಟಿಸುವರು ಪಾಕಿಸ್ತಾನಕ್ಕೆ ಹೋಗಲಿ ಎಂದು ಹೇಳಿದ್ದರು. ಈಗ ಅವರು ಮತ್ತೊಮ್ಮೆ ಅದೇ ಮಾತನ್ನು ಹೇಳಬೇಕು. ನಾವು ಈ ಮಾತನ್ನು ಹೇಳುವುದಿಲ್ಲ. ಚುನಾವಣೆಗೋಸ್ಕರ ಭಾರತೀಯರನ್ನು ಅವಮಾನಿಸುವುದಿಲ್ಲ.

-ಎಂ.ಲಕ್ಷ್ಮಣ್, ಕೆಪಿಸಿಸಿ ವಕ್ತಾರ

ಇದರಿಂದ ಕೇಂದ್ರ ಸರ್ಕಾರಕ್ಕೆ 1 ಲೀಟರ್ ಪೆಟ್ರೋಲ್ ಮೇಲೆ 45.14 ರೂ., ಡೀಸೆಲ್‌ನಲ್ಲಿ ಒಂದು ಲೀಟರ್‌ಗೆ 32 ರೂ. ಲಾಭ ದೊರೆಯುತ್ತಿದೆ. ಇದರಿಂದ 10 ವರ್ಷಗಳಲ್ಲಿ ಕೇಂದ್ರ ಸರ್ಕಾರಕ್ಕೆ 40 ಲಕ್ಷ ಕೋಟಿ ಲಾಭ ಬಂದಿದೆ ಕೇಂದ್ರ ಸರ್ಕಾರ ವಿಧಿಸಿರುವ ತೆರಿಗೆಯಲ್ಲಿ 20 ರೂ. ಕಡಿಮೆ ಮಾಡುವಂತೆ ವಿಪಕ್ಷ ನಾಯಕ ಆರ್.ಅಶೋಕ್ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಲಿ ಎಂದು ಒತ್ತಾಯಿಸಿದರು.

ಸಚಿವ ಹೆಚ್‌ಡಿಕೆ ಪ್ರಧಾನಿಯಂತೆ ವರ್ತಿಸುತ್ತಿದ್ದಾರೆ : ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವರಾದ ಕೂಡಲೆ ಪ್ರಧಾನಿಯಂತೆ ವರ್ತಿಸುತ್ತಿದ್ದಾರೆ. 16 ತಿಂಗಳು ಮುಖ್ಯಮಂತ್ರಿಯಾದಾಗ ಶೇ.35ರಷ್ಟು ತೆರಿಗೆ ವಿಧಿಸಿದ್ದರು. 9 ಬಾರಿ ವಿದ್ಯುತ್ ದರ ಹೆಚ್ಚಿಸಿದ್ದರು. ಆದರೆ ಈಗ ಜನರು ದಂಗೆ ಏಳುತ್ತಾರೆ ಎಂದು ಬೆದರಿಸುತ್ತಿದ್ದಾರೆ. ಪ್ರಮುಖ ಕೈಗಾರಿಕೆಗಳು ಖಾಸಗೀಕರಣವಾಗುತ್ತಿದ್ದು, ಅವುಗಳನ್ನು ರಕ್ಷಿಸಲು ಕ್ರಮ ಕೈಗೊಳ್ಳಬೇಕು. ಕಾವೇರಿ ವಿವಾದ, ಕಳಸಾ ಬಂಡೂರಿ ಯೋಜನೆ, ಮೇಕೆದಾಟು ಯೋಜನೆ ಬಗ್ಗೆ ಮಾತನಾಡಿ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ನಗರ ಪ್ರಧಾನ ಕಾರ್ಯದರ್ಶಿ ಭಾಸ್ಕರ್, ನಗರ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಜ ರಾಜೇಂದ್ರ, ಸೇವಾ ದಳದ ಗಿರೀಶ್, ಜಿಲ್ಲಾ ಕಾಂಗ್ರೆಸ್ ಸದಸ್ಯರಾದ ಚಂದ್ರು, ಶ್ರೀನಿವಾಸ್ ಇದ್ದರು.

ಇಂದಿನಿಂದ ಆರ್‌ಐಇಯಲ್ಲಿ 'ರಾಷ್ಟ್ರೀಯ ಯೋಗ ಒಲಂಪಿಯಾಡ್'

ಮುಕ್ತ ವಿವಿ ಘಟಿಕೋತ್ಸವ ಸಭಾಂಗಣದಲ್ಲಿ ರಾಜ್ಯಪಾಲರಿಂದ ಉದ್ಘಾಟನೆ

ಮೈಸೂರು, ಜೂ.17(ಎಂಕೆ)– ಶಿಕ್ಷಣ ಮಂತ್ರಾಲಯ, ಭಾರತ ಸರ್ಕಾರ ಹಾಗೂ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಪರಿಷತ್ (ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಶನಲ್ ರಿಸರ್ಚ್ ಅಂಡ್ ಟ್ರೈನಿಂಗ್–ಎನ್‌ಸಿಇಆರ್‌ಟಿ) ವತಿಯಿಂದ ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆ(ಆರ್‌ಐಇ)ಯಲ್ಲಿ ಜೂ.18 ರಿಂದ 20ರವರೆಗೆ 'ನನಗಾಗಿ ಮತ್ತು ಸಮಾಜಕ್ಕಾಗಿ ಯೋಗ' ಶೀರ್ಷಿಕೆಯಡಿ 'ರಾಷ್ಟ್ರೀಯ ಯೋಗ ಒಲಂಪಿಯಾಡ್' ಹಮ್ಮಿಕೊಳ್ಳಲಾಗಿದೆ ಎಂದು ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಶನಲ್ ರಿಸರ್ಚ್ ಅಂಡ್ ಟ್ರೈನಿಂಗ್ (ಎನ್‌ಸಿಇಆರ್‌ಟಿ) ನಿರ್ದೇಶಕ ಪ್ರೊ. ದಿನೇಶ್ ಪ್ರಸಾದ್ ಸಕ್ಲಾನಿ ತಿಳಿಸಿದರು.

ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ನಾಳೆ(ಜೂ.18) ಬೆಳಗ್ಗೆ 11 ಗಂಟೆಗೆ 'ರಾಷ್ಟ್ರೀಯ ಯೋಗ ಒಲಂಪಿಯಾಡ್'ನ ಉದ್ಘಾಟನಾ ಸಮಾರಂಭ ನಡೆಯಲಿದ್ದು, ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಉದ್ಘಾಟಿಸಲಿದ್ದಾರೆ.



ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಶನಲ್ ರಿಸರ್ಚ್ ಅಂಡ್ ಟ್ರೈನಿಂಗ್ (ಎನ್‌ಸಿಇಆರ್‌ಟಿ) ನಿರ್ದೇಶಕ ಪ್ರೊ.ದಿನೇಶ್ ಪ್ರಸಾದ್ ಸಕ್ಲಾನಿ ಮಾತನಾಡಿದರು. ಆರ್‌ಐಇ ಪ್ರಾಂಶುಪಾಲ ಪ್ರೊ.ವೈ.ಶ್ರೀಕಾಂತ್, ಯೋಗ ಒಲಂಪಿಯಾಡ್ ಸಂಚಾಲಕಿ ಕಲ್ಪನಾ ವೇಣುಗೋಪಾಲ್, ಡಾ.ಎಸ್.ನಾಗರಾಜು ಉಪಸ್ಥಿತರಿದ್ದರು.

ಮಧ್ಯಾಹ್ನದ ನಂತರ ಯೋಗ ಪ್ರದರ್ಶನಗಳು ನಡೆಯಲಿವೆ ಎಂದರು.

ಯೋಗಾಭ್ಯಾಸ ಅಥವಾ ಯೋಗ ಆಸನಗಳು ಎಲ್ಲರ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಅವಶ್ಯವಾಗಿದೆ. ವ್ಯಕ್ತಿತ್ವ ವಿಕಸನಕ್ಕೂ ಒತ್ತು ನೀಡುತ್ತದೆ. ಯೋಗ ಅಭ್ಯಾಸ ಮತ್ತು ಅದರ ಪ್ರಚಾರದಿಂದ ವಿವಿಧತೆಯಲ್ಲಿ ಏಕತೆಯನ್ನು ಬಲಪಡಿಸುತ್ತದೆ. 2016 ರಿಂದ ಎನ್‌ಸಿಇಆರ್‌ಟಿ ರಾಷ್ಟ್ರೀಯ ಯೋಗ ಒಲಂಪಿಯಾಡ್ ಆಯೋಜಿಸುತ್ತಾ ಬರುತ್ತಿದ್ದು, ಪ್ರಧಾನಿ ನರೇಂದ್ರ ಮೋದಿಯವರ ಪ್ರಯತ್ನದಿಂದ ಸ್ಫೂರ್ತಿ ಪಡೆದಿದೆ ಎಂದು ತಿಳಿಸಿದರು.

'ರಾಷ್ಟ್ರೀಯ ಯೋಗ ಒಲಂಪಿಯಾಡ್'ನಲ್ಲಿ ದೇಶದ ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿನ ಎಲ್ಲಾ ಸರ್ಕಾರಿ, ಸರ್ಕಾರಿ ಅನುದಾನಿತ ಶಾಲೆಗಳು, ರಾಷ್ಟ್ರೀಯ ಮಟ್ಟದ ಸಂಸ್ಥೆಗಳಾದ ಕೇಂದ್ರೀಯ ವಿದ್ಯಾಲಯ ಸಂಘಟನೆ, ನವೋದಯ ವಿದ್ಯಾಲಯ ಸಮಿತಿ, ರಾಷ್ಟ್ರೀಯ ಬುಡಕಟ್ಟು ವಿದ್ಯಾರ್ಥಿಗಳ ಶಿಕ್ಷಣ ಸೊಸೈಟಿ, ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್, ವಿದ್ಯಾಭಾರತಿ ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನ ಮತ್ತು ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಪ್ರಾಯೋಗಿಕ ವಿವಿಧೋದ್ದೇಶ ಶಾಲೆಗಳಿಂದ 500 ವಿದ್ಯಾರ್ಥಿಗಳು, 100 ಶಿಕ್ಷಕರು ಸೇರಿ 600ಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಮೊದಲ ದಿನ(ಜೂ.18) ಮುಕ್ತ ವಿವಿಯಲ್ಲಿ ಉದ್ಘಾಟನೆಯಾದ ಬಳಿಕ ಉಳಿದೆಲ್ಲಾ ಕಾರ್ಯಕ್ರಮ, ಸ್ಪರ್ಧೆಗಳು ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ನಡೆಯಲಿವೆ. ಮೈಸೂರಿನ ವಿವಿಧ ಸಂಸ್ಥೆಗಳು, ವಿವಿಗಳ ಹಿರಿಯ ಅಧಿಕಾರಿಗಳು ಮತ್ತು ಗಣ್ಯರು ಸಹ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸ್ಪರ್ಧೆ ಮತ್ತು ಬಹುಮಾನ ವಿತರಣೆ: ಮಧ್ಯಮ ಮತ್ತು ದ್ವಿತೀಯ ವಿಭಾಗದಲ್ಲಿ ಹುಡುಗಿಯರು ಹಾಗೂ ಹುಡುಗರು ಯೋಗ ಪ್ರದರ್ಶನ ನೀಡಲಿದ್ದಾರೆ. ವಿಜೇತರಿಗೆ ಜೂ.20 ರಂದು ಬೆಳಗ್ಗೆ 9 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದಲ್ಲಿ ನೆನಪಿನ ಸ್ಮರಣಿಕೆ ನೀಡಲಾಗುವುದು. ಕೇಂದ್ರದ ಶಿಕ್ಷಣ ಮಂತ್ರಾಲಯದ ಕಾರ್ಯದರ್ಶಿ ಸಂಜಯ್ ಕುಮಾರ್ ಸಮಾರೋಪದಲ್ಲಿ ಭಾಗವಹಿಸಿ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ ಎಂದು ತಿಳಿಸಿದರು. ಆರ್‌ಐಇ ಪ್ರಾಂಶುಪಾಲ ಪ್ರೊ.ವೈ.ಶ್ರೀಕಾಂತ್, ಯೋಗ ಒಲಂಪಿಯಾಡ್ ಸಂಚಾಲಕಿ ಕಲ್ಪನಾ ವೇಣುಗೋಪಾಲ್, ಆರ್‌ಐಇನ ಡಾ.ಎಸ್.ನಾಗರಾಜು ಉಪಸ್ಥಿತರಿದ್ದರು.

ನೀಟ್ ಗೊಂದಲಕ್ಕೆ ಎನ್‌ಸಿಇಆರ್‌ಟಿ ಹೊಣೆಯಲ್ಲ

ಮೈಸೂರು, ಜೂ.17(ಎಂಕೆ)– ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದ ನೀಟ್–2024ರ ಪರೀಕ್ಷೆಯಲ್ಲಿ ಕಂಡುಬಂದಿರುವ ತಪ್ಪು ಪ್ರಶ್ನೆಗಳಿಗೆ ಪರೀಕ್ಷೆ ಆಯೋಜಿಸಿರುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಹೊಣೆಯೇ ಹೊರತು, ಎನ್‌ಸಿಇಆರ್‌ಟಿ ಅಲ್ಲ ಎಂದು ಎನ್‌ಸಿಇಆರ್‌ಟಿ ನಿರ್ದೇಶಕ ಪ್ರೊ.ದಿನೇಶ್ ಪ್ರಸಾದ್ ಸಕ್ಲಾನಿ ಸ್ಪಷ್ಟಪಡಿಸಿದರು.

ಹಳೇ ಪಠ್ಯಕ್ರಮ ಆಧರಿಸಿ ನೀಟ್ ಪರೀಕ್ಷೆಗಳನ್ನು ಸಿದ್ಧಪಡಿಸಿರುವುದರಿಂದ ಈ ಅವಾಂತರವಾಗಿದೆ. ಇದಕ್ಕೆ ಎನ್‌ಸಿಇಆರ್‌ಟಿ ಜವಾಬ್ದಾರಿಯಲ್ಲ. 2020ರ ಆಚೆಗೆ ಹೊಸ ಪಠ್ಯಕ್ರಮ ಆಧಾರಿತ ಪುಸ್ತಕ ಖುದ್ದು ಪರಿಶೀಲನೆ ಮಾಡಬಹುದು. ಈಗಾಗಲೇ ಆನ್‌ಲೈನ್ ಮತ್ತು ಮಾರುಕಟ್ಟೆಯಲ್ಲಿ ದೊರೆಯುವ ಈ ಪುಸ್ತಕಗಳನ್ನು ಗಮನಿಸಬಹುದು. ಅದರಲ್ಲಿ ಅಪೂರ್ಣ, ತಪ್ಪು ಮಾಹಿತಿ ಇಲ್ಲ ಎಂದು ತಿಳಿಸಿದರು.

ಆಯಾ ರಾಜ್ಯಗಳಿಗೆ ಬಿಟ್ಟದ್ದು: ರಾಷ್ಟ್ರೀಯ ಶಿಕ್ಷಣ ನೀತಿ–2020(ಎನ್‌ಇಪಿ) ಅಳವಡಿಕೆ ಆಯಾ ರಾಜ್ಯಗಳಿಗೆ ಬಿಟ್ಟದ್ದು. ಎನ್‌ಇಪಿಗೆ ಕರ್ನಾಟಕ, ಕೇರಳ ವಿರೋಧಿಸಿವೆ. ಆದರೆ, ಇದಕ್ಕೂ ಎನ್‌ಸಿಇಆರ್‌ಟಿಗೂ ಸಂಬಂಧ ಇಲ್ಲ. ರಾಷ್ಟ್ರಮಟ್ಟದ ದೃಷ್ಟಿಕೋನ ಇಟ್ಟುಕೊಂಡು ಎನ್‌ಇಪಿ ಆಧಾರದಲ್ಲೇ ಪಠ್ಯಕ್ರಮ ರಚನೆ ಮಾಡಲಾಗಿದೆ. ಈಗಾಗಲೇ 29 ರಾಜ್ಯಗಳಲ್ಲಿ ಎನ್‌ಸಿಇಆರ್‌ಟಿ ಪಠ್ಯಕ್ರಮ ಆಧಾರದಲ್ಲೇ ಶಾಲಾ ಹಂತದ ಕಲಿಕೆ ನಡೆಯುತ್ತಿದೆ. ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಅವರಲ್ಲಿ ಮಾನಸಿಕ ಒತ್ತಡ ಕಡಿಮೆ ಮಾಡಲು ಪಠ್ಯಕ್ರಮದಲ್ಲಿ ಕೆಲ ಬದಲಾವಣೆ ಮಾಡಲಾಗುತ್ತಿದೆ. ವಿದ್ಯಾರ್ಥಿಸ್ನೇಹಿ ಹಾಗೂ ಆಕರ್ಷಣೀಯ ರೀತಿಯಲ್ಲಿ ಪಠ್ಯಕ್ರಮವನ್ನು ರೂಪಿಸಲಾಗುತ್ತಿದ್ದು, 6ನೇ ತರಗತಿಗೆ ಬ್ರಿಜ್ ಕೋರ್ಸ್‌ಗಳನ್ನು ಪರಿಚಯಿಸಲಾಗುತ್ತಿದೆ. ಇದಕ್ಕಾಗಿ ಶಿಕ್ಷಕರಿಗೆ ಒಂದು ತಿಂಗಳ ತರಬೇತಿಯನ್ನು ನೀಡಲಾಗುತ್ತಿದೆ ಎಂದರು.

ಇಂಡಿಯಾ, ಭಾರತ ಎರಡೂ ಇದೆ: ಎನ್‌ಸಿಇಆರ್‌ಟಿ ಪಠ್ಯಕ್ರಮದಲ್ಲಿ ಇಂಡಿಯಾ ಪದ ಬಿಡಲಾಗಿದೆಯೇ ಎಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇಂಡಿಯಾ ಮತ್ತು ಭಾರತ ಎರಡೂ ಪದಗಳನ್ನು ಬಳಕೆ ಮಾಡುತ್ತಿದ್ದು, ಈ ಕುರಿತು ಗೊಂದಲ ಬೇಡ. ಸಂವಿಧಾನದಲ್ಲಿ ಇಂಡಿಯಾ ಮತ್ತು ಭಾರತ ಎರಡೂ ಪದಗಳ ಉಪಯೋಗವಾಗಿದೆ. ಇಂಡಿಯಾ ಬದಲಿಗೆ ಭಾರತ ಎಂದು ಬದಲಾವಣೆ ಮಾಡಿಲ್ಲ. ಆದರೆ ಸಾಂದರ್ಭಿಕವಾಗಿ ಎರಡೂ ಪದಗಳು ಪಠ್ಯಕ್ರಮದಲ್ಲಿ ಇವೆ. ಅದನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಲಾಗಿದೆ ಎಂದು ತಿಳಿಸಿದರಲ್ಲದೆ ಎನ್‌ಸಿಇಆರ್‌ಟಿ ಪಠ್ಯಕ್ರಮದಿಂದ ಗುಜರಾತ್ ಗಲಭೆ, ಬಾಬ್ರಿ ಮಸೀದಿ ಧ್ವಂಸದ ವಿಷಯ ತೆಗೆದಿರುವ ಕುರಿತು ಪ್ರತಿಕ್ರಿಯೆ ನೀಡಲ್ಲ. ಈ ಬಗ್ಗೆ ವ್ಯಕ್ತವಾಗಿರುವ ರಾಜಕೀಯ ನಾಯಕರುಗಳ ಪ್ರತಿಕ್ರಿಯೆಗಳು ಅವರ ದೃಷ್ಟಿಕೋನದಲ್ಲಿವೆ. ಅದಕ್ಕೆ ಉತ್ತರಿಸುವ ಅಗತ್ಯವಿಲ್ಲ ಎಂದರು.

ದರ್ಶನ್ ಬಂಧನ ಪ್ರಕರಣ

ಒತ್ತಡಕ್ಕೆ ಮಣಿಯಲ್ಲ; ಯಾರಿಗೂ ಸಾಫ್ಟ್ ಕಾರ್ನರ್ ತೋರಿಸಲ್ಲ

ಗೃಹ ಸಚಿವ ಡಾ. ಜಿ. ಪರಮೇಶ್ವರ್ ಖಡಕ್ ಮಾತು

ಬೆಂಗಳೂರು: ನಟ ದರ್ಶನ್ ಮತ್ತು ಅವರ ಆಪ್ತೆ ಪವಿತ್ರಾಗೌಡ ಅವರನ್ನು ಬಂಧಿಸಿರುವ ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಯಾರಿಗೂ ಸಾಫ್ಟ್ ಕಾರ್ನರ್ ತೋರಿಸುವ ಪ್ರಶ್ನೆಯೇ ಇಲ್ಲ. ಪೊಲೀಸರು ಯಾವುದೇ ಪ್ರಭಾವಕ್ಕೆ ಒಳಗಾಗದೆ ಕ್ರಮ ಕೈಗೊಳ್ಳುತ್ತಾರೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಸೋಮವಾರ ಪ್ರತಿಪಾದಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೊಲೆ ಪ್ರಕರಣದಲ್ಲಿ ಯಾರನ್ನೂ ರಕ್ಷಿಸುವ ಅಥವಾ ಯಾರಿಗೂ ಸಾಫ್ಟ್ ಕಾರ್ನರ್ ತೋರಿಸುವ ಪ್ರಶ್ನೆಯೇ ಇಲ್ಲ. ಅಂತಹ ಯಾವುದೇ ವಿಷಯಗಳಿಗೆ ನಾವು ಮಣಿಯುವುದಿಲ್ಲ ಎಂದು ತಿಳಿಸಿದರು.

ಸೂಕ್ಷ್ಮ ಮಾಹಿತಿಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲು ನಿರಾಕರಿಸಿದ ಗೃಹ ಸಚಿವರು, ತನಿಖೆಯ ನಂತರ ತನಿಖಾ ವರದಿಯನ್ನು ಹೊರತರಲಾಗುವುದು ಎಂದು ಹೇಳಿದರು.

ತನಿಖೆ ಯಾವಾಗ ಮುಗಿಯುತ್ತದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅದನ್ನು ತನಿಖಾ ತಂಡಕ್ಕೆ ಬಿಡಲಾಗಿದೆ. ಕಾನೂನು ಪ್ರಕಾರ ಏನೇನು ಕ್ರಮ ಕೈಗೊಳ್ಳಬೇಕೋ ಅದನ್ನು ಪ್ರಾರಂಭಿಸಲಾಗುವುದು. ಯಾವುದೇ ಒತ್ತಡಕ್ಕೆ ಮಣಿಯದೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಪದೇ ಪದೆ ಹೇಳಿದ್ದೇವೆ ಎಂದು ಅವರು ಹೇಳಿದರು.

ತನಿಖೆ ಯಾವಾಗ ಮುಗಿಯುತ್ತದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅದನ್ನು ತನಿಖಾ ತಂಡಕ್ಕೆ ಬಿಡಲಾಗಿದೆ. ಕಾನೂನು ಪ್ರಕಾರ ಏನೇನು ಕ್ರಮ ಕೈಗೊಳ್ಳಬೇಕೋ ಅದನ್ನು ಪ್ರಾರಂಭಿಸಲಾಗುವುದು. ಯಾವುದೇ ಒತ್ತಡಕ್ಕೆ ಮಣಿಯದೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಪದೇ ಪದೆ ಹೇಳಿದ್ದೇವೆ ಎಂದು ಅವರು ಹೇಳಿದರು.

ತನಿಖಾ ತಂಡಕ್ಕೆ ಇನ್ಸ್‌ಪೆಕ್ಟರ್ ಗಿರೀಶ್ ನಾಯಕ್ ಅವರನ್ನು ಮರು ಸೇರ್ಪಡೆಗೊಳಿಸುವ ಕುರಿತು ಮಾತನಾಡಿದ ಗೃಹ ಸಚಿವರು, ಅಂತಹ ಬದಲಾವಣೆಗಳು ಆಡಳಿತಾತ್ಮಕ ಅವಶ್ಯಕತೆಗಳಿಗೆ ಒಳಪಟ್ಟಿರುತ್ತವೆ ಮತ್ತು ತನಿಖೆಯ ಭಾಗವಾಗಿ ಯಾರನ್ನು ತೆಗೆದುಕೊಳ್ಳಬೇಕು ಎಂಬುದನ್ನು ನಿರ್ಧರಿಸಲು ಪೊಲೀಸ್ ಇಲಾಖೆಗೆ ಬಿಡಲಾಗಿದೆ ಎಂದು ಹೇಳಿದರು.

ಪವಿತ್ರಾ ಗೌಡ ಅವರಿಗೆ ಅಶ್ಲೀಲ ಸಂದೇಶ ರವಾನಿಸಿದ ಆರೋಪದ ಮೇಲೆ ಜೂನ್ 8 ರಂದು ಚಿತ್ರದುರ್ಗದ ರೇಣುಕಾಸ್ವಾಮಿ ಅವರನ್ನು ಕೊಲೆ ಮಾಡಿದ ಆರೋಪದ ಮೇಲೆ ದರ್ಶನ್, ಪವಿತ್ರಾ ಗೌಡ ಸೇರಿದಂತೆ 17 ಮಂದಿಯನ್ನು ಬಂಧಿಸಲಾಗಿದೆ.

ರಾಯ್ ಬರೇಲಿ ಉಳಿಸಿಕೊಂಡ ರಾಹುಲ್ ಗಾಂಧಿ; ವಯನಾಡ್‌ನಿಂದ ಪ್ರಿಯಾಂಕಾ ಸ್ಪರ್ಧೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಯನಾಡ್ ಲೋಕಸಭಾ ಕ್ಷೇತ್ರವನ್ನು ತೆರವು ಮಾಡಲಿದ್ದಾರೆ. ರಾಯ್ ಬರೇಲಿ ಕ್ಷೇತ್ರವನ್ನು ಉಳಿಸಿಕೊಳ್ಳಲಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ಘೋಷಿಸಿದ್ದಾರೆ.



ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ತಮ್ಮ ಸಹೋದರನಿಂದ ತೆರವಾಗುವ ವಯನಾಡ್ ಲೋಕಸಭಾ ಕ್ಷೇತ್ರದಿಂದ ಮೊದಲ ಬಾರಿ ಚುನಾವಣೆಗೆ ಸ್ಪರ್ಧಿಸಲಿದ್ದಾರೆ ಎಂದು ಖರ್ಗೆ ತಿಳಿಸಿದರು.

ರಾಹುಲ್ ಗಾಂಧಿ ಅವರು ವಯನಾಡ್ ಮತ್ತು ರಾಯ್ ಬರೇಲಿ ಲೋಕಸಭಾ ಎರಡೂ ಕ್ಷೇತ್ರಗಳಲ್ಲಿ ಗೆದ್ದಿದ್ದರು ಮತ್ತು ಜೂನ್ 4 ರಂದು ಲೋಕಸಭೆ ಚುನಾವಣಾ ಫಲಿತಾಂಶ ಪ್ರಕಟವಾದ 14 ದಿನಗಳಲ್ಲಿ ಒಂದು ಸ್ಥಾನವನ್ನು ತೆರವು ಮಾಡಬೇಕಾಗಿತ್ತು. ಹೀಗಾಗಿ ರಾಹುಲ್ ಗಾಂಧಿ ಅವರು ಇಂದು ರಾಯ್ ಬರೇಲಿ ಕ್ಷೇತ್ರವನ್ನು ಉಳಿಸಿಕೊಳ್ಳುವ ನಿರ್ಧಾರ ಪ್ರಕಟಿಸಿದ್ದಾರೆ.

ವಯನಾಡ್ ಜನರಿಗೆ ತಮ್ಮ ಬಾಗಿಲು ಯಾವಾಗಲೂ ತೆರೆದಿರುತ್ತದೆ ಮತ್ತು ಕ್ಷೇತ್ರವು ತನ್ನ ಮತ್ತು ತಮ್ಮ ಸಹೋದರಿಯ ಮೂಲಕ ಪರಿಣಾಮಕಾರಿಯಾಗಿ ಇಬ್ಬರು ಸಂಸದರನ್ನು ಹೊಂದಲಿದೆ ಎಂದು ರಾಹುಲ್ ಗಾಂಧಿಯವರು ಹೇಳಿದ್ದಾರೆ.

ಪ್ರಿಯಾಂಕಾ ಗಾಂಧಿ ಅವರು ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ ಮತ್ತು ಅವರು ಚುನಾವಣೆಯಲ್ಲಿ ಗೆಲ್ಲಲಿದ್ದಾರೆ ಎಂದು ನನಗೆ ವಿಶ್ವಾಸವಿದೆ. ವಯನಾಡಿನ ಜನರು ತಮಗೆ ಇಬ್ಬರು ಸಂಸತ್ ಸದಸ್ಯರಿದ್ದಾರೆ ಎಂದು ಭಾವಿಸಬಹುದು; ಒಬ್ಬರು ನನ್ನ ಸಹೋದರಿ ಮತ್ತು ಇನ್ನೊಬ್ಬರು ನಾನು. ನನ್ನ ಬಾಗಿಲು ಯಾವಾಗಲೂ ವಯನಾಡಿನ ಜನರಿಗಾಗಿ ತೆರೆದಿರುತ್ತದೆ. ನಾನು ವಯನಾಡಿನ ಪ್ರತಿಯೊಬ್ಬ ವ್ಯಕ್ತಿಯನ್ನು ಪ್ರೀತಿಸುತ್ತೇನೆ ಎಂದು ರಾಹುಲ್ ಗಾಂಧಿ ತಿಳಿಸಿದರು.

ಈ ಘೋಷಣೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕಾ ಗಾಂಧಿ, ಅಮೇಥಿ ಮತ್ತು ರಾಯ್ ಬರೇಲಿಯೊಂದಿಗಿನ ದೀರ್ಘ ಕಾಲದ ಸಂಬಂಧವು ಮುರಿಯಲಾಗದು ಎಂದು ಹೇಳಿದರು. ವಯನಾಡನ್ನು ಪ್ರತಿನಿಧಿಸುವ ಅವಕಾಶ ಸಿಕ್ಕಿದ್ದಕ್ಕೆ ನನಗೆ ತುಂಬಾ ಸಂತೋಷವಾಗಿದೆ ಮತ್ತು ಅವರ (ರಾಹುಲ್ ಗಾಂಧಿ) ಅನುಪಸ್ಥಿತಿಯನ್ನು ಅನುಭವಿಸಲು ನಾನು ಬಿಡುವುದಿಲ್ಲ. ನಾನು ಕಷ್ಟಪಟ್ಟು ಕೆಲಸ ಮಾಡುತ್ತೇನೆ ಮತ್ತು ಎಲ್ಲರನ್ನು ಸಂತೋಷಪಡಿಸಲು ಮತ್ತು ಉತ್ತಮ ಪ್ರತಿನಿಧಿಯಾಗಲು ಪ್ರಯತ್ನಿಸುತ್ತೇನೆ ಎಂದರು.

ನಟ ದರ್ಶನ್ ಈ ಮಟ್ಟಕ್ಕಿಳಿದು ಕೊಲೆ ಮಾಡಬಾರದಿತ್ತು...

ನಿರ್ದೇಶಕ ರಾಮ್ ಗೋಪಾಲ್ ವರ್ಮಾ

ಬೆಂಗಳೂರು, ಜೂ.17– ಸಿನಿಮಾದಲ್ಲಿ ಒಬ್ಬ ಸ್ಟಾರ್ ನಟನಾಗಿ ದರ್ಶನ್ ಆನೆಯ ರೀತಿಯಲ್ಲಿ ಗಂಭೀರವಾಗಿ ಇರಬೇಕಿತ್ತು. ಸಾಮಾಜಿಕ ಜಾಲತಾಣದಲ್ಲಿ ಟ್ರೋಲರ್ಸ್‌ಗಳು ಕೆಟ್ಟದಾಗಿ ಮೆಸೇಜ್ ಮಾಡಿದ್ದರೂ (ಆನೆ ಹೋಗುವಾಗ ನಾಯಿ ಬೊಗಳಿದಾಗ ತಿರುಗಿಯೂ ನೋಡಲ್ಲ) ಇಗ್ನೋರ್ ಮಾಡಬೇಕಿತ್ತು. ಆದರೆ, ಈ ಮಟ್ಟಕ್ಕಿಳಿದು ಕೆಟ್ಟ ಮೆಸೇಜ್ ಕಳಿಸಿದ್ದ ರೇಣುಕಾಸ್ವಾಮಿಯನ್ನು ಕೊಲೆ ಮಾಡಬಾರದಿತ್ತು ಎಂದು ನಿರ್ದೇಶಕ ರಾಮ್‌ಗೋಪಾಲ ವರ್ಮಾ ಹೇಳಿದ್ದಾರೆ.

ಈ ಕುರಿತು ಖಾಸಗಿ ಯ್ಯೂಟ್ಯೂಬ್ ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, ನಟ ದರ್ಶನ್ ಒಬ್ಬ ಸ್ಟಾರ್ ಆಗಿದ್ದಾರೆ. ಆದರೆ, ಅವರಿಗೆ ಕೆಟ್ಟದಾಗಿ ಮೆಸೇಜ್ ಮಾಡಿದ್ದ ವ್ಯಕ್ತಿಯನ್ನು ಬಹುಶಃ ಕೊಲೆ ಮಾಡುವ ಪ್ಲ್ಯಾನ್ ಇರಲಿಲ್ಲ ಅನ್ನಿಸುತ್ತದೆ. ಆತನನ್ನು ಸ್ಥಳಕ್ಕೆ ಕರೆಸಿ ಹೊಡೆದು ಕಳಿಸುವ ಸಂಚು ಮಾಡಿದ್ದರು ಅನ್ನಿಸುತ್ತದೆ. ಆದರೆ, ಹೊಡೆತ ತಿಂದವನು ಸತ್ತು ಹೋಗಿದ್ದಾನೆ. ಎಲ್ಲ ನಿರ್ದೇಶಕರು ಸಾಮಾನ್ಯ ಸ್ಕ್ರಿಪ್ಟ್ ಮಾಡಿ ಒಂದು ಸಿನಿಮಾ ಮಾಡ್ತಾರೆ. ಆದರೆ, ಇಲ್ಲಿ ಮರ್ಡರ್‌ನಿಂದಾನೆ ಕಥೆ ಶುರುವಾಗಿದೆ ಎಂದು ಹೇಳಿದರು.



ಸಾಮಾಜಿಕ ಜಾಲತಾಣದಿಂದಲೇ ಇಷ್ಟೆಲ್ಲಾ ಆಗಿದ್ದು: ಈಗ ರೇಣುಕಾಸ್ವಾಮಿ ಕೂಡ ದರ್ಶನ್ ಗೆಳತಿ ಪವಿತ್ರಾಗೌಡ ಅವರಿಗೆ ಕಳಿಸಿದ ಮೆಸೇಜ್‌ನಿಂದ ಇಷ್ಟೆಲ್ಲಾ ಆಗಿದೆ. ಇದೆಲ್ಲಾ ಶುರುವಾಗಿದ್ದೆ ಸೋಷಿಯಲ್ ಮೀಡಿಯಾ ಮೆಸೇಜ್‌ನಿಂದ. ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿಯೂ ನಟ ದರ್ಶನ್ ಅಂಡ್ ಗ್ಯಾಂಗ್ ನಡೆದುಕೊಂಡಿದ್ದು ತಪ್ಪು. ದರ್ಶನ್‌ನ ಅಭಿಮಾನಿ ಮತ್ತೊಬ್ಬ ಅಭಿಮಾನಿಯನ್ನು ಕಿಡ್ನಾಪ್ ಮಾಡಿ ಆತನ ಹತ್ತಿರ ಕರೆದುಕೊಂಡು ಹೋಗೋದು ಇದೆಯಲ್ಲ ಇದು ವೆರಿ ಬ್ಯಾಡ್. ಅಭಿಮಾನಿ ಸಂಘಗಳು ಸ್ಟಾರ್‌ಗಳನ್ನು ಹ್ಯಾಂಡಲ್ ಮಾಡೋ ಕೆಲಸ ಮಾಡುತ್ತಿವೆ. ಇನ್ನು ನಟಿ ಪವಿತ್ರಗೌಡ ಸೈಬರ್ ಕ್ರೈಮ್ ಕಂಪ್ಲೈಟ್ ಕೊಟ್ಟಿದ್ರೂ ಬೇಗ ಸಾಲ್ವ್ ಆಗ್ತಿರಲಿಲ್ಲ. ಯಾಕೆಂದ್ರೆ ಅಲ್ಲಿ ಮಿಲಿಯನ್ ಗಟ್ಟಲೆ ಕೇಸ್‌ಗಳಿವೆ. ಹಾಗಾಗಿ ಇಲ್ಲಿ ಕಾನೂನು ಕೈಗೆತ್ತಿಕೊಂಡಿದ್ದಾರೆ ಎಂದು ಹೇಳಿದರು.

ದರ್ಶನ್ ಮರ್ಡರ್ ಮಿಸ್ಟರಿ ಬಗ್ಗೆ ಸಿನಿಮಾ ಮಾಡೋಕಾಗಲ್ಲ: ರೇಣುಕಾಸ್ವಾಮಿಯನ್ನು ನಟ ದರ್ಶನ್ ಕೊಲೆ ಮಾಡಿದ ಬಗ್ಗೆ ಸಿನಿಮಾ ಮಾಡೋದಕ್ಕೆ ಆಗೊಲ್ಲ. ಯಾಕೆಂದರೆ ಇಲ್ಲಿ ಯಾರಿಗೂ ಯಾವುದೇ ವಿಚಾರ ಗೊತ್ತಿಲ್ಲದಿರುವುದು ಏನೂ ಇಲ್ಲ. ಬಹುಶಃ ಪವಿತ್ರಗೌಡ ಅವರೇ ರೇಣುಕಾಸ್ವಾಮಿ ಮೆಸೇಜ್‌ಗೆ ಒಂದು ಸ್ಮೈಲ್ ಕೊಟ್ಟು ಸುಮ್ಮನಾಗಿದ್ದರೆ, ಇಷ್ಟೆಲ್ಲಾ ಆಗುತ್ತಲೇ ಇರಲಿಲ್ಲವೇನೋ. ಇಲ್ಲಿ ಗೊತ್ತಿಲ್ಲದೆ ಇರುವ ಮಿಸ್ಟರಿ ಇಲ್ಲವೇ ಇಲ್ಲ. ಹಾಗಾಗಿ ಸಿನಿಮಾ ಮಾಡುವಂತಹ ಪ್ಲಾಟ್ ಇಲ್ಲ. ಜೊತೆಗೆ, ಎಲ್ಲವೂ ಸಿಸಿಟಿವಿಯಲ್ಲಿ ಪ್ರೂಫ್ ಇರೋದ್ರಿಂದ ಏನೂ ಮಾಡೋದಕ್ಕಾಗೊಲ್ಲ ಎಂದು ಹೇಳಿದರು.

ಮನೆ ಮುಂದಿದ್ದ ಕಬ್ಬಿಣದ ಪದಾರ್ಥ ಕಳವು

ಮೈಸೂರು, ಜೂ.17(ಎಸ್‌ಬಿಡಿ)– ಮನೆ ಮುಂದಿಟ್ಟಿದ್ದ ಕಬ್ಬಿಣದ ವಸ್ತುಗಳನ್ನು ಹಾಡಹಗಲೇ ಕದ್ದೊಯ್ದಿರುವ ಬಗ್ಗೆ ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿಜಯನಗರ ಮೂರನೇ ಹಂತ, ಬಿ ಬ್ಲಾಕ್ ನಿವಾಸಿ ಹರ್ಷ, ತಮ್ಮ ಮನೆ ಕಾಂಪೌಂಡ್ ಬಳಿ ಮೂರು ಚೀಲದಲ್ಲಿ ತುಂಬಿದ್ದ ಕಬ್ಬಿಣದ ವಸ್ತುಗಳನ್ನು ಕಳವು ಮಾಡಲಾಗಿದೆ ಎಂದು ದೂರು ನೀಡಿದ್ದಾರೆ.

ಮೂರು ದಿನಗಳ ಹಿಂದೆ ಮಧ್ಯಾಹ್ನ 1 ಗಂಟೆ ಸುಮಾರಿಗೆ ಆಟೋದಲ್ಲಿ ಬಂದ ವ್ಯಕ್ತಿಯೊಬ್ಬ, ಸುತ್ತಮುತ್ತ ಗಮನಿಸಿ ಏಕಾಏಕಿ ಕಬ್ಬಿಣವಿದ್ದ ಚೀಲಗಳನ್ನು ಆಟೋಗೆ ತುಂಬಿಕೊಂಡಿದ್ದಾನೆ. ಆ ವೇಳೆಗೆ ಹರ್ಷ ಅವರ ತಾಯಿ ಮನೆ ಹೊರಗೆ ಬಂದು ಕೂಗಿದರೂ ಆಟೋದಲ್ಲಿ ವೇಗವಾಗಿ ಪರಾರಿಯಾಗಿದ್ದಾನೆ. ಖದೀಮನ ಕೃತ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಬಿ ಬ್ಲಾಕ್‌ನಲ್ಲಿ ಈ ರೀತಿ ಮೂರ್‍ನಾಲ್ಕು ಘಟನೆಗಳಾಗಿವೆ ಎಂದು ಹರ್ಷ ದೂರಿನಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ವಿಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಖದೀಮನ ಪತ್ತೆಗೆ ಕ್ರಮ ವಹಿಸಿದ್ದಾರೆ. ಹಾಗೆಯೇ ಅಗತ್ಯವಿರುವ ವಸ್ತುಗಳನ್ನು ಸುರಕ್ಷಿತವಾಗಿಟ್ಟುಕೊಳ್ಳಬೇಕು ಎಂದು ಸಾರ್ವಜನಿಕರಿಗೂ ಮನವಿ ಮಾಡಿದ್ದಾರೆ.

ಅಭಿವೃದ್ಧಿಗಾಗಿ ತೈಲ ದರ ಹೆಚ್ಚಳ: ಡಾ. ಪರಮೇಶ್ವರ್

ಬೆಂಗಳೂರು: ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಹಣ ಬೇಕು ಎಂಬ ಕಾರಣಕ್ಕೆ ತೈಲ ದರ ಹೆಚ್ಚಳ ಮಾಡಲಾಗಿದೆ ಎಂದು ಗೃಹ ಸಚಿವ ಡಾ.ಜಿ ಪರಮೇಶ್ವರ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಎಷ್ಟು ಬಾರಿ ತೈಲ ಬೆಲೆ ಏರಿಕೆ ಮಾಡಿತ್ತು ಎಂದು ಅವರು ಯೋಚನೆ ಮಾಡಬೇಕು. ಬಿಜೆಪಿ 14 ಬಾರಿ ಬೆಲೆ ಏರಿಕೆ ಮಾಡಿತ್ತು. ಪಕ್ಕದ ರಾಜ್ಯಗಳಿಗೆ ಹೋಲಿಕೆಮಾಡಿದರೆ ಈಗಲೂ ಕರ್ನಾಟಕದಲ್ಲಿ ಬೆಲೆ ಕಡಿಮೆಯೇ ಇದೆ. ಬೇರೆ ರಾಜ್ಯದಲ್ಲಿ ಬೆಲೆ ಇನ್ನೂ ಹೆಚ್ಚಿದೆ. ಗ್ಯಾರಂಟಿಯಿಂದಾಗಿ ಬೆಲೆ ಏರಿಕೆ ಮಾಡಿಲ್ಲ. ಸಮಯಕ್ಕೆ ತಕ್ಕನಾಗಿ ಬೆಲೆ ಏರಿಕೆ ಮಾಡಬೇಕಿದೆ ಎಂದಿದ್ದಾರೆ.

ಹತ್ಯೆಗೀಡಾದ ರೇಣುಕಾಸ್ವಾಮಿಯ ಉಂಗುರ, ಸರ ಕದ್ದಿದ್ದ ಆರೋಪಿ ರಾಘವೇಂದ್ರ

ಬೆಂಗಳೂರು, ಜೂ.17– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಮಾಡಿದ ದರ್ಶನ್ ಗ್ಯಾಂಗ್‌ನ ಸಹಚರ ರಾಘವೇಂದ್ರ ರೇಣುಕಾಸ್ವಾಮಿ ಮೈಮೇಲಿದ್ದ ಚಿನ್ನದ ಉಂಗುರ ಮತ್ತು ಸರವನ್ನು ಕದ್ದು ಮನೆಯಲ್ಲಿಟ್ಟಿದ್ದು, ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ದರ್ಶನ್ ಅಂಡ್ ಗ್ಯಾಂಗ್‌ನ ಎ4 ಆರೋಪಿ ರಾಘವೇಂದ್ರ, ಕೊಲೆಯಾದ ರೇಣುಕಾಸ್ವಾಮಿಯ ಚಿನ್ನದ ಉಂಗುರ ಮತ್ತು ಸರವನ್ನು ಕದ್ದು ಮನೆಯಲ್ಲಿಟ್ಟು ಬಂದಿದ್ದ. ಆತನನ್ನು ಭೀಕರವಾಗಿ ಕೊಲೆ ಮಾಡಿದ್ದೂ ಅಲ್ಲದೇ ಆತನ ಮೈಮೇಲಿದ್ದ ಚಿನ್ನದ ಆಭರಣಗಳನ್ನು ಕಳ್ಳತನ ಮಾಡಿದ್ದರು. ಜೊತೆಗೆ, ರೇಣುಕಾಸ್ವಾಮಿ ಧರಿಸಿದ್ದ ಬಟ್ಟೆಯನ್ನೂ ಬಿಚ್ಚಿ ಬೇರೊಂದು ಟೀ ಷರ್ಟ್ ಹಾಕಿ ಮೃತದೇಹವನ್ನು ಸುಮನಹಳ್ಳಿ ಮೇಲ್ಸೇತುವೆ ಬಳಿಯ ಚರಂಡಿಗೆ ಬೀಸಾಡಿದ್ದರು.

ಕೊಲೆ ಆರೋಪಿ ರಾಘವೇಂದ್ರ ತನ್ನ ಪತ್ನಿಗೆ ರೇಣುಕಾಸ್ವಾಮಿ ಮೈಮೇಲಿಂದ ಕದ್ದುಕೊಂಡು ಬಂದಿದ್ದ ಜುವೆಲ್ಲರಿಗಳನ್ನು ನೀಡಿದ್ದ ಎನ್ನಲಾಗಿದ್ದು ಅದನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಅಲ್ಲದೇ 4.5 ಲಕ್ಷ ಕ್ಯಾಷ್, ಒಡವೆಗಳು ಹಾಗೂ ಬಟ್ಟೆಗಳ ಸೀಜ್ ಮಾಡಲಾಗಿದೆ.

ಹಲ್ಲೆಗೂ ಮೊದಲು ಉಂಗುರ, ಸರ ಬಿಚ್ಚಿಟ್ಟುಕೊಂಡಿದ್ದ ರೇಣುಕಾಸ್ವಾಮಿ: ರೇಣುಕಾಸ್ವಾಮಿ ಶೆಡ್ ಒಳಗೆ ಹೋಗುವ ಮುನ್ನ ಕಾರಿನಲ್ಲೇ ಒಡವೆ ಬಿಚ್ಚಿಟ್ಟುಕೊಂಡಿದ್ದ. ತನ್ನ ಮೇಲೆ ಹಲ್ಲೆ ಮಾಡಬಹುದು ಎಂದು ಮೊದಲೇ ಊಹಿಸಿದ್ದ ರೇಣುಕಾಸ್ವಾಮಿ, ಹಲ್ಲೆ ವೇಳೆ ಒಡವೆಗಳನ್ನು ಕಿತ್ತುಕೊಳ್ಳಬಹುದು ಎಂದು ಊಹೆ ಮಾಡಿದ್ದ. ಹೀಗಾಗಿ ಶೆಡ್ ಒಳಗೆ ಹೋಗುವ ಮುನ್ನ ಉಂಗುರ ಹಾಗೂ ಚೈನ್ ಬಿಚ್ಚಿಟ್ಟುಕೊಂಡಿದ್ದ. ಇದನ್ನು ಗಮನಿಸಿದ್ದ ರಾಘವೇಂದ್ರ ರೇಣುಕಾಸ್ವಾಮಿ ಕೊಲೆ ನಂತರ ಅವುಗಳನ್ನು ಕದ್ದುಕೊಂಡು ಕಾರಿನಲ್ಲಿ ಪುನಃ ಚಿತ್ರದುರ್ಗಕ್ಕೆ ತೆರಳಿದ್ದನು. ಅಲ್ಲಿ ತನ್ನ ಪತ್ನಿಗೆ ಒಡವೆಗಳನ್ನು ನೀಡಿ ಏನೂ ಆಗಿಲ್ಲವೆಂಬಂತೆ ಸುಮ್ಮನಿದ್ದ.

ಗಂಡನ ರಕ್ಷಣೆಗೆ ನಿಂತ ವಿಜಯಲಕ್ಷ್ಮಿ

ದರ್ಶನ್ ಪರ ವಾದಕ್ಕೆ ಹಿರಿಯ ವಕೀಲರ ಭೇಟಿ

ಬೆಂಗಳೂರು, ಜೂ.17: ಬೆಂಗಳೂರಿನಲ್ಲಿ ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣ ಆರೋಪದ ಹಿನ್ನೆಲೆಯಲ್ಲಿ ನಟ ದರ್ಶನ್, ಪವಿತ್ರಾಗೌಡ ಸೇರಿ ಒಟ್ಟು 19 ಮಂದಿಯನ್ನು ಈವರೆಗೆ ಬಂಧಿಸಲಾಗಿದ್ದು, ಜೂನ್ 21ರವರೆಗೆ ಪೊಲೀಸ್ ಕಸ್ಟಡಿಯಲ್ಲಿದ್ದಾರೆ.



ಆದರೆ ಈಗ ಈ ಕೊಲೆ ಪ್ರಕರಣದಲ್ಲಿ ಸಾಕ್ಷಿಗಳ ಕಲೆ ಹಾಕುವ ಪ್ರಕ್ರಿಯೆ ನಡೆಯುತ್ತಿದ್ದು ದರ್ಶನ್‌ಗೆ ಕಾನೂನಿನ ಕುಣಿಕೆ ಮತ್ತಷ್ಟು ಬಿಗಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪತಿ ದರ್ಶನ್‌ನನ್ನು ಬಿಡಿಸಲು ಪತ್ನಿ ವಿಜಯಲಕ್ಷ್ಮಿ ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ. ಕರ್ನಾಟಕದ ಅತ್ಯುತ್ತಮ ಕ್ರಿಮಿನಲ್ ಲಾಯರ್‌ಗಳಲ್ಲಿ ಒಬ್ಬರಾಗಿರುವ ರವಿ.ಬಿ ನಾಯಕ್ ಅವರನ್ನು ಭೇಟಿ ಮಾಡಿದ್ದಾರೆ.

ಕೊಲೆ ಕೇಸಿನಲ್ಲಿ ರೇಣುಕಾಸ್ವಾಮಿ ಸಾವಿಗೆ ನ್ಯಾಯ ಒದಗಿಸಲು ಮುಂದಾದ ಸರ್ಕಾರದ ಪರವಾಗಿ ವಾದ ಮಂಡಿಸಲು ಚಾಣಾಕ್ಷ ವಕೀಲ ಪಿ. ಪ್ರಸನ್ನ ಕುಮಾರ್ ಅವರನ್ನು ಸರ್ಕಾರಿ ಅಭಿಯೋಜಕರನ್ನಾಗಿ ನಿಯೋಜನೆ ಮಾಡಲಾಗಿತ್ತು. ಇದರ ಬೆನ್ನಲ್ಲಿಯೇ ಗಂಡನ ರಕ್ಷಣೆಗೆ ಟೊಂಕ ಕಟ್ಟಿ ನಿಂತ ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಹಿರಿಯ ವಕೀಲ ರವಿ. ಬಿ ನಾಯಕ್ ಅವರನ್ನು ಭೇಟಿ ಮಾಡಿದ್ದಾರೆ. ಖ್ಯಾತ ಹಿರಿಯ ವಕೀಲರಾಗಿರುವ ರವಿ ಬಿ. ನಾಯಕ್ ರಾಜ್ಯದ ಅನೇಕ ರಾಜಕಾರಣಿಗಳ, ಉನ್ನತ ವ್ಯಕ್ತಿಗಳ ಪ್ರಕರಣದಲ್ಲಿ ವಾದಿಸಿದ್ದಾರೆ. ರಾಜ್ಯದ ಅತ್ಯುತ್ತಮ ಕ್ರಿಮಿನಲ್ ಲಾಯರ್‌ಗಳಲ್ಲಿ ಇವರೂ ಒಬ್ಬರು.

ಡಿ ಗ್ಯಾಂಗ್‌ಗೆ ಕಾನೂನಿನ ಕಂಟಕ ಬಿಗಿಯಾಗುತ್ತಿದ್ದರೂ, ಈ ಪ್ರಕರಣದಿಂದ ದರ್ಶನ್ ಬೆಂಬಲಕ್ಕೆ ಕುಟುಂಬದಲ್ಲಿ ಯಾರೂ ಬಂದಿಲ್ಲ. ಹೆತ್ತ ತಾಯಿ ಮತ್ತು ಒಡಹುಟ್ಟಿದ ತಮ್ಮ ಸೇರಿ ಕುಟುಂಬದ ಎಲ್ಲಾ ಸದಸ್ಯರು ಈ ಪ್ರಕರಣದಿಂದ ಅಂತರ ಕಾಯ್ದುಕೊಂಡಿದ್ದಾರೆ. ಆದರೆ ಇಂದು ಗಂಡನನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂದು ಪರದಾಡುತ್ತಿರುವುದು ಮೊದಲ ಪತ್ನಿ ವಿಜಯಲಕ್ಷ್ಮಿ ಮಾತ್ರ.

ರೇಣುಕಾಸ್ವಾಮಿ ರಕ್ತಸಿಕ್ತ ಬಟ್ಟೆ ಪತ್ತೆ: ನಟ ದರ್ಶನ್ ಮತ್ತು ಅವರ ಗ್ಯಾಂಗ್‌ನಿಂದ ಹತ್ಯೆಯಾದ ವೇಳೆ ಚಿತ್ರದುರ್ಗದ ರೇಣುಕಾಸ್ವಾಮಿ ಧರಿಸಿದ್ದ ಬಟ್ಟೆಗಳನ್ನು ಘಟನೆ ನಡೆದ ಎಂಟು ದಿನಗಳ ನಂತರ ಕೊನೆಗೂ ಪತ್ತೆಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಸಂತ್ರಸ್ತನನ್ನು ಹೊಡೆದು ಸಾಯಿಸಿದ ಪಟ್ಟಣಗೆರೆಯ ಶೆಡ್‌ನಲ್ಲೇ ಬಟ್ಟೆಯನ್ನು ಹಂತಕರು ಬಚ್ಚಿಟ್ಟಿದ್ದರು. ಆರೋಪಿಗಳಾದ ನಾಗರಾಜ್, ದೀಪಕ್, ನಂದೀಶ್‌ನನ್ನು ಭಾನುವಾರ ಮತ್ತೆ ಬೆಂಗಳೂರಿನ ಪಟ್ಟಣಗೆರೆಯ ಶೆಡ್‌ಗೆ ಕರೆತಂದಿದ್ದ ಪೊಲೀಸರು, ಆರೋಪಿಗಳು ಬಚ್ಚಿಟ್ಟಿದ್ದ ರೇಣುಕಾಸ್ವಾಮಿಯ ರಕ್ತಸಿಕ್ತ ಬಟ್ಟೆಗಳನ್ನು ವಶಕ್ಕೆ ಪಡೆದರು. ಆದರೆ, ಮೃತದೇಹದ ಜೊತೆಗೇ ರಾಜಾಕಾಲುವೆಗೆ ಎಸೆದಿದ್ದಾರೆ ಎನ್ನಲಾದ ರೇಣುಕಾಸ್ವಾಮಿಯ ಮೊಬೈಲ್ ಮಾತ್ರ ಇನ್ನೂ ಪತ್ತೆಯಾಗಿಲ್ಲ. ಈ ಸಂಬಂಧ ಇಂದು ಸ್ಥಳದಲ್ಲಿ ಶೋಧ ನಡೆಸಿದರೂ ಸಿಕ್ಕಿಲ್ಲ.

ರಾಜಕಾಲುವೆಯಲ್ಲಿ ರೇಣುಕಾಸ್ವಾಮಿ ಮೊಬೈಲ್ ಹುಡುಕಾಟ

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆಯಾಗಿ 10 ದಿನ ಕಳೆದರೂ ಮೊಬೈಲ್ ಮಾತ್ರ ಇನ್ನೂ ಸಿಕ್ಕಿಲ್ಲ. ಹೀಗಾಗಿ ಮೊಬೈಲ್ ಪತ್ತೆ ಹಚ್ಚಲು ಪೊಲೀಸರು ಆರೋಪಿಯನ್ನು ಮತ್ತೆ ಸ್ಥಳ ಮಹಜರು ಮಾಡಲು ಕರೆದೊಯ್ದಿದ್ದರು. ಕೊಲೆ ಪ್ರಕರಣದಲ್ಲಿ ಮೊಬೈಲ್ ಪ್ರಮುಖ ಸಾಕ್ಷ್ಯವಾಗುವ ಕಾರಣ ಪೊಲೀಸರು ಎಲ್ಲಾ ಕಡೆ ಆತನ ಮೊಬೈಲ್ ಹುಡುಕಾಡಿದ್ದಾರೆ. ಎಲ್ಲಿಯೂ ಮೊಬೈಲ್ ಸಿಗದ ಕಾರಣ ಪೊಲೀಸರು ಕೊನೆಯ ಬಾರಿಗೆ ಸಿಗ್ನಲ್ ಇದ್ದ ಜಾಗವನ್ನು ಸರ್ಚ್ ಮಾಡಿದ್ದಾರೆ. ರಾಜಕಾಲುವೆ ಜಾಗದಲ್ಲೇ ಕೊನೆಯ ಬಾರಿಗೆ ಸಿಗ್ನಲ್ ತೋರಿಸಿದೆ.

ಈ ಕಾರಣಕ್ಕೆ ಈಗ ಆರೋಪಿ ಪ್ರದೂಶ್‌ನನ್ನು ಮತ್ತೆ ಸುಮನಹಳ್ಳಿ ಸತ್ವ ಅಪಾರ್ಟ್‌ಮೆಂಟ್ ಮುಂಭಾಗದಲ್ಲಿರುವ ರಾಜಕಾಲುವೆ ಬಳಿ ಶವ ಎಸೆದ ಜಾಗಕ್ಕೆ ಕರೆತಂದಿದ್ದಾರೆ. ಪೌರ ಕಾರ್ಮಿಕರು ರಾಜಕಾಲುವೆಗೆ ಇಳಿದು ಮೊಬೈಲ್ ಹುಡುಕಾಡಿದ್ದಾರೆ. ಆದರೆ ಮೊಬೈಲ್ ಪತ್ತೆಯಾಗದ ಕಾರಣ ಶೋಧ ಕಾರ್ಯ ನಿಲ್ಲಿಸಿದ್ದಾರೆ. ಈ ಪ್ರಕರಣದಲ್ಲಿ ರೇಣುಕಾಸ್ವಾಮಿ ಮೊಬೈಲ್ ಪ್ರಮುಖ ಸಾಕ್ಷಿಯಾಗಿದೆ. ಅಶ್ಲೀಲ ಕಮೆಂಟ್ ಸಂಬಂಧಪಟ್ಟಂತೆ ರೇಣುಕಾಸ್ವಾಮಿ ಮೊಬೈಲ್‌ನಲ್ಲೇ ಆರೋಪಿಗಳು ಕ್ಷಮೆಯ ವಿಡಿಯೋ ಮಾಡಿಸಿದ್ದರು ಎನ್ನಲಾಗಿದೆ.

ಕೆ–ರೈಡ್‌ಗೆ ಶೀಘ್ರದಲ್ಲಿ ಪೂರ್ಣಾವಧಿ ಎಂಡಿ ನೇಮಕ

ಕೇಂದ್ರ ಸಚಿವ ವಿ. ಸೋಮಣ್ಣ ಮಾಹಿತಿ

ಬೆಂಗಳೂರು: ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತ (ಕೆ–ರೈಡ್) ಕ್ಕೆ ಶೀಘ್ರದಲ್ಲೇ ಪೂರ್ಣಾವಧಿ ವ್ಯವಸ್ಥಾಪಕ ನಿರ್ದೇಶಕರಾಗಿ ತಾಂತ್ರಿಕ ತಜ್ಞರನ್ನು ನೇಮಕ ಮಾಡಲಾಗುವುದು ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ ಸೋಮಣ್ಣ ಸೋಮವಾರ ಹೇಳಿದ್ದಾರೆ.

ರಾಜ್ಯದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ರೈಲ್ವೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಈ ಹಿಂದೆ ಮೂಲಸೌಕರ್ಯ ಸಚಿವರಾಗಿದ್ದಾಗ ಕೆ–ರೈಡ್‌ಗೆ ವ್ಯವಸ್ಥಾಪಕ ನಿರ್ದೇಶಕರಿರಲಿಲ್ಲ ಮತ್ತು ಮುಂದಿನ 15–20 ದಿನಗಳಲ್ಲಿ ತಾಂತ್ರಿಕವಾಗಿ ಪರಿಣತಿ ಹೊಂದಿರುವ ವ್ಯಕ್ತಿಯನ್ನು ನೇಮಕ ಮಾಡಲು ಮುಖ್ಯ ಕಾರ್ಯದರ್ಶಿಯೊಂದಿಗೆ ಮಾತನಾಡಿದ್ದೇನೆ ಎಂದರು.

ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಪ್ರಧಾನಿ ನರೇಂದ್ರ ಮೋದಿ ಅವರು ಉಪನಗರ ರೈಲ್ವೆ ಯೋಜನೆಗೆ ಶಂಕುಸ್ಥಾಪನೆ ಮಾಡಿದ್ದನ್ನು ನೆನಪಿಸಿಕೊಂಡ ಸಚಿವರು, ದಶಕಗಳಿಂದ ಬಾಕಿ ಉಳಿದಿರುವ ಒಂಬತ್ತು ರೈಲ್ವೆ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು. ಇವುಗಳಲ್ಲಿ ಕೆಲವು ಯೋಜನೆಗಳು ಡಿಸೆಂಬರ್ 2026 ರೊಳಗೆ ಪೂರ್ಣಗೊಳ್ಳುತ್ತವೆ ಮತ್ತು ಇತರವು ಡಿಸೆಂಬರ್ 2028 ರೊಳಗೆ ಪೂರ್ಣಗೊಳ್ಳಲಿವೆ ಎಂದರು.

ಈ ಎಲ್ಲಾ ಒಂಬತ್ತು ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು, ತ್ವರಿತಗತಿಯಲ್ಲಿ ರೈಲ್ವೆ ಹಳಿಗಳ ದ್ವಿಗುಣ ಕಾರ್ಯ ಕೈಗೊಳ್ಳಲಾಗುವುದು, ಇದು ಪ್ರಧಾನಿ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ದೂರದೃಷ್ಟಿಯಾಗಿದೆ.

ಕರ್ನಾಟಕಕ್ಕೆ ಸಂಬಂಧಿಸಿದ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸುವುದಾಗಿ ಖಾತ್ರಿಪಡಿಸುತ್ತೇನೆ. ಎಲ್ಲಾ ಕೆಳಸೇತುವೆಗಳು, ಲೆವೆಲ್ ಕ್ರಾಸಿಂಗ್‌ಗಳು, ಮೇಲ್ಸುತುವೆಗಳನ್ನು ಗುರುತಿಸಿ ಪೂರ್ಣಗೊಳಿಸಲಾಗುವುದು, ಜಲ ಜೀವನ್ ಮಿಷನ್ ಅನ್ನು ಮುಂದುವರೆಸುವ ಕುರಿತು ಕೇಂದ್ರ ಕ್ಯಾಬಿನೆಟ್ ಸಚಿವರೊಂದಿಗೆ ಮಾತುಕತೆ ನಡೆಸಲಾಗುವುದು ಎಂದರು.



ಪಶ್ಚಿಮ ಬಂಗಾಳದಲ್ಲಿ ರೈಲುಗಳ ಡಿಕ್ಕಿ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸೋಮಣ್ಣ, ಘಟನೆ ಬಗ್ಗೆ ಬೆಳಗ್ಗೆ ಮಾಹಿತಿ ಪಡೆದಿದ್ದು, ಏನಾಯಿತು ಎಂಬುದರ ಬಗ್ಗೆ ಮಾಹಿತಿ ನೀಡಲು ಹಿರಿಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅಪಘಾತ ಘಟನೆ ನೋವು ತಂದಿದೆ. ಅಧಿಕಾರಿಗಳು ಅಲ್ಲಿದ್ದು, ಕೂಡಲೇ ವರದಿ ನೀಡುವಂತೆ ನಿರ್ದೇಶಿಸಲಾಗಿದೆ. ನವದೆಹಲಿ ರೈಲ್ವೆ ಭವನಕ್ಕೆ ತೆರಳಿ ಮಂಡಳಿ ಜೊತೆಗೆ ಸಭೆ ನಡೆಸಿ, ವಿವರ ಪಡೆಯಲಾಗುವುದು ಎಂದು ಅವರು ತಿಳಿಸಿದರು.

ನೈರುತ್ಯ ರೈಲ್ವೆಯ ವ್ಯಾಪ್ತಿಗೆ ಒಳಪಡುವ ಅಭಿವೃದ್ಧಿ ಯೋಜನೆಗಳ ಸಂಪೂರ್ಣ ಪರಿಶೀಲನೆಯನ್ನು ಸಚಿವರು ನಡೆಸಿರುವುದಾಗಿ ನೈರುತ್ಯ ರೈಲ್ವೆ ಹೇಳಿಕೆಯಲ್ಲಿ ತಿಳಿಸಿದೆ. ಒಂಬತ್ತು ಹೊಸ ಮಾರ್ಗಗಳು ಮತ್ತು ಐದು ಜೋಡಿ ಮಾರ್ಗ ಯೋಜನೆಗಳು ಸೇರಿದಂತೆ 14 ಮಹತ್ವದ ಯೋಜನೆಗಳ ಕುರಿತು ಚರ್ಚೆ ನಡೆದಿದೆ. ಈ ಯೋಜನೆಗಳು ಒಟ್ಟು 1,264 ಕಿಮೀ ಹೊಸ ಮಾರ್ಗ ಮತ್ತು 707 ಕಿಮೀ ಜೋಡಿ ಮಾರ್ಗ ಒಳಗೊಂಡಿವೆ. 289 ಕಿಮೀ ಹೊಸ ಮಾರ್ಗಗಳು ಮತ್ತು 502 ಕಿಮೀ ಡಬ್ಲಿಂಗ್ ಲೈನ್‌ಗಳು ಈಗಾಗಲೇ ಯಶಸ್ವಿಯಾಗಿ ಕಾರ್ಯಾರಂಭಗೊಂಡಿವೆ. ಐದು ಜೋಡಿ ಮಾರ್ಗ ಯೋಜನೆಗಳಲ್ಲಿ ಹೊಟಗಿ–ಕುಡಗಿ–ಗದಗ, ಯಶವಂತಪುರ–ಚನ್ನಸಂದ್ರ, ಬೈಯ್ಯಪನಹಳ್ಳಿ–ಹೊಸೂರು, ಬೆಂಗಳೂರು–ವೈಟ್‌ಫೀಲ್ಡ್ ಮತ್ತು ಹೊಸಪೇಟೆ–ಹುಬ್ಬಳ್ಳಿ–ಲೋಂಡಾ–ತಿನೈಘಾಟ್–ವಾಸ್ಕೋಡ ಗಾಮಾ ಮಾರ್ಗಗಳು ಸೇರಿವೆ.

ಒಂಬತ್ತು ಹೊಸ ಮಾರ್ಗದ ಯೋಜನೆಗಳೆಂದರೆ ಕಲ್ಯಾಣದುರ್ಗ ಮೂಲಕ ತುಮಕೂರು–ರಾಯದುರ್ಗ, ತುಮಕೂರು–ಚಿತ್ರದುರ್ಗ–ದಾವಣಗೆರೆ, ಗಿಣಿಗೇರಾ–ರಾಯಚೂರು, ಬಾಗಲಕೋಟ–ಕುಡಚಿ, ಗದಗ–ವಾಡಿ, ಕಡೂರು–ಚಿಕ್ಕಮಗಳೂರು, ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು. ಕಿತ್ತೂರು ಮೂಲಕ ಬೆಳಗಾವಿ–ಧಾರವಾಡ, ಹಾಸನ– ಬೇಲೂರು ಸೇರಿವೆ.

ರೈಲ್ವೆ ಅಭಿವೃದ್ಧಿ ಯೋಜನೆಗಳನ್ನು ತ್ವರಿತಗೊಳಿಸಲು ರೈಲ್ವೆ ಅಧಿಕಾರಿಗಳು ಮತ್ತು ಜಿಲ್ಲಾಡಳಿತ ಮತ್ತು ಕೆ–ರೈಡ್ ಸೇರಿದಂತೆ ವಿವಿಧ ಪಾಲುದಾರರ ನಡುವಿನ ಸಹಯೋಗದ ಮಹತ್ವವನ್ನು ಒತ್ತಿ ಹೇಳಿದ ಸಚಿವರು, ಬಾಕಿ ಉಳಿದಿರುವ ಕಾಮಗಾರಿಗೆ ಭೂಸ್ವಾಧೀನಕ್ಕೆ ವೇಗ ನೀಡುವಂತೆ ರೈಲ್ವೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಮುಂಬರುವ ವರ್ಷಗಳಲ್ಲಿ ಎಲ್ಲಾ ಬಾಕಿ ಯೋಜನೆಗಳನ್ನು ವ್ಯವಸ್ಥಿತವಾಗಿ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ನಂ.ಗೂಡು, ಕೆ.ಆರ್.ನಗರದಲಿ ಸಂಭ್ರಮದ ಬಕ್ರೀದ್ ಆಚರಣೆ

- ಮುಸ್ಲಿಂ ಬಾಂಧವರಿಂದ ಸಾಮೂಹಿಕ ಪ್ರಾರ್ಥನೆ
- ಸಿಹಿ ಹಂಚಿ ಪರಸ್ಪರ ಶುಭಾಶಯ ವಿನಿಮಯ



ಕೆ.ಆರ್.ನಗರದಲ್ಲಿ ಮುಸ್ಲಿಂ ಬಾಂಧವರು ಶ್ರದ್ಧಾಭಕ್ತಿಯಿಂದ ಬಕ್ರೀದ್ ಆಚರಿಸಿದರು.



ನಂಜನಗೂಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಬಕ್ರೀದ್ ಆಚರಿಸಿದರು.

ನಂಜನಗೂಡು, ಕೆ.ಆರ್.ನಗರ, ಜೂ.17– ತ್ಯಾಗ ಮತ್ತು ಬಲಿದಾನದ ಪ್ರತೀಕವಾದ ಬಕ್ರೀದ್ ಹಬ್ಬವನ್ನು ನಂಜನಗೂಡು, ಕೆ.ಆರ್.ನಗರದಲ್ಲಿ ಸೋಮವಾರ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ಸಂಭ್ರಮದಿಂದ ಆಚರಿಸಿದರು.

ನಂಜನಗೂಡು: ನಗರದ ಈದ್ಗಾ ಮೊಹಲ್ಲಾದಲ್ಲಿರುವ ಬೃಹತ್ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಬಕ್ರೀದ್ ಹಬ್ಬವನ್ನು ಆಚರಿಸಿದರು.

ಇದಕ್ಕೂ ಮುನ್ನಾ ಚಾಮಲಾಪುರ ಬೀದಿಯಲ್ಲಿರುವ ಜಾಮೀಯಾ ಮಸೀದಿಯಿಂದ ಈದ್ಗಾ ಮಸೀದಿವರೆಗೆ ಪ್ರಾರ್ಥನೆ ಸಲ್ಲಿಸಲು ಮೆರವಣಿಗೆಯಲ್ಲಿ ಬಂದ ಸಾವಿರಾರು ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಈ ಹಬ್ಬ ಬಡವ–ಬಲ್ಲಿದ ಎಂಬ ಬೇಧ ಭಾವ ಸಲ್ಲದು. ಅಂತೆಯೇ ತ್ಯಾಗ, ಭಕ್ತಿ, ಸ್ನೇಹ, ಪ್ರೀತಿ, ಬಾಂಧವ್ಯ ಹಾಗೂ ಐಕ್ಯತೆಯ ಸಂಕೇತವಾಗಿ ಉಳ್ಳವರು ಬಡವರಿಗೆ ಹಾಗೂ ವೃದ್ಧರೊಂದಿಗೆ ಹಂಚಿ ತಿನ್ನುವುದರ ಸಂಕೇತವಾಗಿದೆ. ರಾಜ್ಯದಲ್ಲಿ ಉತ್ತಮ ಮಳೆ ಬೆಳೆಯಾಗಿ ಶಾಂತಿ ವಾತಾವರಣ ನೆಲೆಸಲಿ. ಹಿಂದೂ ಮತ್ತು ಮುಸ್ಲಿಮರು ಒಂದೇ ತಾಯಿಯ ಮಕ್ಕಳಂತೆ ಎಲ್ಲರೂ ಸೌಹಾರ್ದಯುತವಾಗಿ ಕೂಡಿ ಬಾಳುವಂತಾಗಲಿ ಎಂದು ಅಲ್ಲಾನಲ್ಲಿ ಪ್ರಾರ್ಥಿಸಿರುವುದಾಗಿ ಧರ್ಮಗುರು ಮುಸಬೀರ್ ಅಹಮದ್ ಧರ್ಮ ಸಂದೇಶ ನೀಡಿದರು.

ಶಾಸಕ ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕರಾದ ಬಿ.ಹರ್ಷವರ್ಧನ್, ಕಳಲೆ ಕೇಶವಮೂರ್ತಿ ಮುಸ್ಲಿಂ ಬಾಂಧವರಿಗೆ ಹಬ್ಬದ ಶುಭಾಯ ಕೋರಿದರು. ಕೆಪಿಸಿಸಿ ಸದಸ್ಯ ಕೆ.ಮಹಮದ್ ಅಕ್ಬರ್ ಆಲಿಂ, ಮುಖಂಡರಾದ ಎಂ.ಅಬ್ದುಲ್ ಖಾದರ್, ಮುಜೀಫ್, ಮುನಾವರ್, ಸಿಟಿಜನ್ ಶಾಲೆ ಅಧ್ಯಕ್ಷ ಮಹಮದ್ ಅಲಿ, ಯುನಿಟ್ ಶಾಲೆ ಅಧ್ಯಕ್ಷ ಸೈಯದ್ ಸೇರಿದಂತೆ ಹಲವರಿದ್ದರು.

ಕೆ.ಆರ್.ನಗರ: ಪಟ್ಟಣದ ಜಾಮೀಯಾ ಮಸೀದಿಯಿಂದ ಮೆರವಣಿಗೆಯಲ್ಲಿ ತೆರಳಿದ ಮುಸ್ಲಿಂ ಬಾಂಧವರು ಈದ್ಗಾ ಮೈದಾನದಲ್ಲಿ ಧರ್ಮಗುರು ಮುಫ್ತಿ ಜೈನೂಲ್ ಅಬಿದೀನ್ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಅಲ್ಲದೇ ಚಿಣ್ಣರು, ದೊಡ್ಡವರು ಎನ್ನುವ ತಾರತಮ್ಯವಿಲ್ಲದೇ ಒಬ್ಬರನ್ನೊಬ್ಬರು ಆಲಂಗಿಸಿಕೊಳ್ಳುವ ಮೂಲಕ ತಮ್ಮ ಆರಾಧ್ಯ ದೈವ ಅಲ್ಲಾ ಸ್ಮರಿಸಿ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಈ ಸಂದರ್ಭ ಜಾಮೀಯಾ ಮಸೀದಿ ಕಿರಿಯ ಧರ್ಮಗುರು ಅಲಿ ಹುಸೇನ್, ಖ್ಯಾತ ಮೂಳೆತಜ್ಞ ಡಾ.ಮೊಹಬೂಬ್ ಖಾನ್ ಮಸೀದಿ ಅಧ್ಯಕ್ಷ ಅಫ್ಸರ್ ಬಾಬು, ಕಾರ್ಯದರ್ಶಿ ತಸ್ಸವರ್ ಪಾಷ, ಮಸ್ಜೀದಿ ಸದಸ್ಯರಾದ ಇರ್ಷದ್, ನಸೀರ್, ವಸೀಂ, ಫರೂಕ್ ಮುಬಾರಕ್, ಪುರಸಭಾ ಸದಸ್ಯರಾದ ಜಾವೀದ್ ಪಾಷ, ಮಾಜಿ ಅಧ್ಯಕ್ಷ ಸೈಯದ್ ಅಸ್ಲಾಂ, ಮುಖಂಡರಾದ ಸೈಯದ್ ಜಾಬೀರ್, ನದೀಂ, ಸೈಯದ್ ಇರ್ಫಾನ್, ಮುಜಾಹಿದ್, ಮಹಮದ್ ಇರ್ಫಾನ್, ಜವಾದ್, ಶಾಕಿರ್, ಮುಬಾರಕ್, ನವೀದ್, ನವಾಜ್ ಸೇರಿದಂತೆ ಇನ್ನಿತರರಿದ್ದರು. ಇದೇ ವೇಳೆ ಕೆ.ಆರ್.ನಗರ ಸೇರಿದಂತೆ ತಾಲೂಕಿನಾದ್ಯಂತ ಬಕ್ರೀದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ದೇಶದಲ್ಲಿ ಬಕ್ರೀದ್‌ಗೆ ವಿಶೇಷ ಸ್ಥಾನಮಾನ



ಬಕ್ರೀದ್ ಹಿನ್ನೆಲೆಯಲ್ಲಿ ಎನ್‌ಕೆಎಫ್ ಪಬ್ಲಿಕ್ ಶಾಲೆ ಅಧ್ಯಕ್ಷ ಎನ್.ಕೆ.ಫರೀದ್ ಮಾತನಾಡಿದರು.


ತಿ.ನರಸೀಪುರ, ಜೂ.17– ತ್ಯಾಗ, ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬ ದೇಶದಲ್ಲಿ ವಿಶೇಷ ಸ್ಥಾನಮಾನ ಪಡೆದಿದೆ ಎಂದು ಎನ್‌ಕೆಎಫ್ ಪಬ್ಲಿಕ್ ಶಾಲೆ ಶಾಲಾಧ್ಯಕ್ಷ ಎನ್.ಕೆ. ಫರೀದ್ ತಿಳಿಸಿದರು.

ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಕ್ರೀದ್ ಹಬ್ಬದ ವಿಶೇಷತೆ ಬಗ್ಗೆ ಮಾತನಾಡಿದರು.

ಇಬ್ರಾಹಿಂ ಖಲೀಮುಲ್ಲಾ ಅವರು ತಮ್ಮ ಮಗ ಇಸ್ಲಾಯಿಲ್ ಜಬೀವುಲ್ಲಾನನ್ನು ಅಲ್ಲಾನಿಗೆ (ದೇವರಿಗೆ) ತ್ಯಾಗ ಮಾಡಲು ನಿರ್ಧರಿಸಿ ತಮ್ಮ ತ್ಯಾಗ ಮತ್ತು ಬಲಿದಾನದ ಮೂಲಕ ದೇವರನ್ನು ಒಲಿಸಿಕೊಂಡ ದ್ಯೋತಕವಾಗಿ ಈ ಹಬ್ಬ ಆಚರಿಸಲಾಗುತ್ತದೆ. ಹಬ್ಬದ ಸಂದರ್ಭ ತಮ್ಮ ಆಹಾರವನ್ನು 3 ಭಾಗ ಮಾಡಿ, ಒಂದು ಭಾಗ ಸಂಬಂಧಿಗಳಿಗೆ, ಇನ್ನೊಂದು ಭಾಗ ಬಡವರಿಗೆ ಹಾಗೂ ಉಳಿದ ಭಾಗವನ್ನು ಸ್ವಂತಕ್ಕೆ ಬಳಸುವ ಮೂಲಕ ಭಕ್ತಿ ಪ್ರದರ್ಶಿಸಲಾಗುತ್ತದೆ. ಇದು ಸಮಾನತೆಯ ಸಂಕೇತವೂ ಹೌದು ಎಂದರು. ಬೇರೆ ಧರ್ಮದ ಹಬ್ಬಗಳಲ್ಲಿ ಮುಸ್ಲಿಂ ಬಾಂಧವರು ಪಾಲ್ಗೊಳ್ಳುವ ಜೊತೆಗೆ ನಮ್ಮ ಹಬ್ಬಗಳ ಸಂದರ್ಭದಲ್ಲಿಯೂ ಇತರೆ ಧರ್ಮದವರನ್ನು ಒಳಪಡಿಸಿಕೊಳ್ಳುವ ಮೂಲಕ ಬಾಂಧವ್ಯ ಮೆರೆಯಬೇಕಿದೆ ಎಂದರು.

ರೈತರಿಗೆ ಲಾಭ: ಬಕ್ರೀದ್ ಮತ್ತೊಂದು ವಿಷಯಕ್ಕೆ ಪ್ರಾಮುಖ್ಯತೆ ಪಡೆಯುತ್ತದೆ. ರೈತರು ವರ್ಷವಿಡೀ ಬಕ್ರೀದ್ ಹಬ್ಬದಲ್ಲಿ ಮಾರಾಟ ಮಾಡಲೆಂದೆ ಕುರಿಗಳನ್ನು ದಷ್ಟ ಪುಷ್ಟವಾಗಿ ಸಾಕುತ್ತಾರೆ. ಸಂತೆಗಳಲ್ಲಿ ತಮ್ಮ ಕುರಿಗಳನ್ನು ಮಾರಾಟ ಮಾಡದೇ ಉತ್ತಮ ಲಾಭ ನಿರೀಕ್ಷಿಸಿ ಬಕ್ರೀದ್ ಹಬ್ಬದ ಸಮಯದಲ್ಲಿ ಮಾರಾಟ ಮಾಡಿ ಉತ್ತಮ ಲಾಭಗಳಿಸುತ್ತಾರೆ. ನಮ್ಮ ಧರ್ಮದವರು ಹಬ್ಬದ ಸಮಯದಲ್ಲಿ ಮಾತ್ರವೇ ಬಕ್ರೀದ್ ನೆನಪಿಸಿಕೊಂಡರೆ, ರಾಜ್ಯದ ರೈತರು ಬಕ್ರೀದ್‌ಗಾಗಿ ವರ್ಷಗಟ್ಟಲೆ ಕಾಯುತ್ತಾರೆ. ಹಾಗಾಗಿ ದೇಶದಲ್ಲಿ ಬಕ್ರೀದ್ ಹಬ್ಬಕ್ಕೆ ವಿಶೇಷ ಮಹತ್ವವಿದೆ. ಹಬ್ಬದಲ್ಲಿ ಕೋಟ್ಯಾಂತರ ರೂ. ಕುರಿಗಳ ವ್ಯಾಪಾರ ನಡೆಯುತ್ತದೆ. ಇದರಿಂದ ನಮ್ಮ ದೇಶ ಸಹ ಸದೃಢವಾಗಲು ಸಾಸಿವೆ ಕಾಳಿನಷ್ಟು ಸಹಾಯವಾಗಲಿದೆ ಎಂಬ ಭಾವನೆ ನನ್ನದಾಗಿದೆ ಎಂದ ಅವರು ರಾಜ್ಯ ಮತ್ತು ದೇಶದ ಜನತೆಗೆ ಬಕ್ರೀದ್ ಹಬ್ಬದ ಶುಭ ಕೋರಿದರು. ಈ ವೇಳೆ ಪುರಸಭೆ ಸದಸ್ಯ ಸೈಯದ್ ಅಹಮದ್, ಮಹಮ್ಮದ್ ಇಮ್ರಾನ್ ಹಾಜರಿದ್ದರು.

ಮೂಗೂರಲ್ಲಿ ಶ್ರೀಮಂಟೇಸ್ವಾಮಿ ದೇವಾಲಯ ಲೋಕಾರ್ಪಣೆ



ಮೂಗೂರಲ್ಲಿ ಮಂಟೇಸ್ವಾಮಿ ದೇವಾಲಯ ಲೋಕಾರ್ಪಣೆಗೊಳಿಸಲಾಯಿತು.

ಮೂಗೂರು, ಜೂ.17– ಗ್ರಾಮದ ಹೂವಿನ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಮಂಟೇಸ್ವಾಮಿ (ಗದ್ದಿಗೆ) ದೇವಾಲಯವನ್ನು ರಾಜ ಬೊಪ್ಪೇಗೌಡನಪುರದ ಮಠಾಧೀಶ ಶ್ರೀಜ್ಞಾನನಂದ ಚೆನ್ನರಾಜೇ ಅರಸ್ ಲೋಕಾರ್ಪಣೆಗೊಳಿಸಿದರು.


ಸೋಮವಾರ ಮುಂಜಾನೆ ದೇಗುಲದ ಬಳಿ ಪಂಚಕಳಸ ಪ್ರತಿಷ್ಠಾಪನೆ ಬಳಿಕ ಹೋಮ ನಡೆಸಲಾಯಿತು. ನಂತರ ಶ್ರೀದೇಶೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀಮಂಟೇಸ್ವಾಮಿ ಕಂಡಾಯವನ್ನು ಹೂ ಹೊಂಬಾಳೆಯಿಂದ ಅಲಂಕರಿಸಿ ಕಳಸ ಹೊತ್ತ ಮಹಿಳೆಯರೊಂದಿಗೆ ಮೆರವಣಿಗೆ ಮೂಲಕ ಗದ್ದಿಗೆಗೆ ತರಲಾಯಿತು.

ಇದೇ ವೇಳೆ ಗ್ರಾಮಕ್ಕೆ ಆಗಮಿಸಿದ ಮಠಾಧೀಶ ಶ್ರೀಜ್ಞಾನನಂದ ಚೆನ್ನರಾಜೇ ಅರಸ್ ಅವರು ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರಿಗೆ ಪೂಜೆ ಸಲ್ಲಿಸಿದ ಬಳಿಕ ಅವರನ್ನು ಗ್ರಾಮದ ಮುಖಂಡರು ಮಂಟೇಸ್ವಾಮಿ ದರ್ಶನಿಕರು ದಾರಿಯುದ್ದಕ್ಕೂ ಮಡಿ ಹಾಸಿ ಹೂ ಚೆಲ್ಲಿ ಮಂಗಳವಾದ್ಯದೊಂದಿಗೆ ಸಕಲ ಗೌರವಗಳೊಂದಿಗೆ ಅದ್ದೂರಿಯಾಗಿ ಬರಮಾಡಿಕೊಂಡರು. ನೂತನ ಗದ್ದಿಗೆಯಲ್ಲಿ ವಿಶೇಷ ಪೂಜೆ ಸಲ್ಲಿಸಿ ದೇವಾಲಯ ಲೋಕಾರ್ಪಣೆಗೊಳಿಸಿದ ನಂತರ ಗ್ರಾಮದ ಮುಖಂಡರು ಮಠಾಧೀಶರನ್ನು ಸನ್ಮಾನಿಸಿದರು. ಈ ವೇಳೆ ನೆರೆದಿದ್ದ ಮುಖಂಡರಿಗೆ, ಗ್ರಾಮಸ್ಥರು ಸೇರಿದಂತೆ ಭಕ್ತ ಸಮೂಹಕ್ಕೆ ಶುಭ ಹಾರೈಸಿ ಆಶೀರ್ವಚನ ನೀಡಿದರು. ಮುಖಂಡರಾದ ಎಂ.ಡಿ. ಬಸವರಾಜು, ಎಂ.ಬಿಸಾಗರ್, ಶಿವಮೂರ್ತಿ, ಪುಟ್ಟರಾಜು, ನಾಗೇಂದ್ರ, ಮಹದೇವ ನಾಯ್ಕ, ಶಂಕರ, ಮಾದೇಶ್, ಯಜಮಾನರು ಉಪಸ್ಥಿತರಿದ್ದರು.

ಪರೀಕ್ಷೆಗೆ ಅರ್ಜಿ ಆಹ್ವಾನ

ನಂಜನಗೂಡು, ಜೂ.17– ತಾಲೂಕಿನ ದೇಬೂರು ಸರ್ಕಾರಿ ಆದರ್ಶ ಶಾಲೆಯಲ್ಲಿ ಪ್ರಸಕ್ತ ಸಾಲಿನ 7, 8 ಮತ್ತು 9ನೇ ತರಗತಿಯಲ್ಲಿ ಖಾಲಿ ಇರುವ ಸೀಟ್‌ಗಳನ್ನು ಭರ್ತಿ ಮಾಡಲು ಜೂ.26ರಂದು ಪ್ರವೇಶ ಪರೀಕ್ಷೆ ನಡೆಸಲಾಗುವುದು. ಅರ್ಜಿ ಸಲ್ಲಿಸಲು ಜೂ.18 ಕೊನೆ ದಿನ ಎಂದು ಶಾಲೆಯ ಮುಖ್ಯೋಪಧ್ಯಾಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9741513007 ಅನ್ನು ಸಂಪರ್ಕಿಸಬಹುದು.

ಕೊತ್ತೇಗಾಲದಲ್ಲಿ ಮಾರಮ್ಮ ದೇವಾಲಯ ಉದ್ಘಾಟನೆ



ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಅವರನ್ನು ಸನ್ಮಾನಿಸಲಾಯಿತು.

ಸರಗೂರು, ಜೂ.17– ಗ್ರಾಮಗಳ ರಕ್ಷಕ ದೇವತೆ ಮಾರಮ್ಮ ಭಕ್ತರ ನಂಬಿಕೆಯ ದೇವಿ ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ಕೊತ್ತೇಗಾಲದಲ್ಲಿ ಶ್ರೀ ಮಾರಮ್ಮ ಹಾಗೂ ಶ್ರೀಗುಜ್ಜಮ್ಮನವರ ಜಾತ್ರಾ ಮಹೋತ್ಸವ, ಗ್ರಾಮದೇವತೆಗಳ ಹಬ್ಬ ಹಾಗೂ ಶ್ರೀ ಮಾರಮ್ಮನವರ ನೂತನ ದೇವಾಲಯದ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅನಾದಿ ಕಾಲದಿಂದಲೂ ಮಾರಮ್ಮನವರಿಗೆ ವಿಶೇಷ ಸ್ಥಾನಮಾನ ನೀಡಲಾಗುತ್ತಿದೆ. ಗ್ರಾಮಗಳಲ್ಲಿ ಉಂಟಾಗುವ ರೋಗ ರುಜಿನಗಳಿಗೆ ಮಾರಮ್ಮನವರ ಕೃಪೆ ಬೇಕು. ಹೀಗಾಗಿ ಗ್ರಾಮ ರಕ್ಷಕ ತಾಯಿ ಮಾರಮ್ಮ ಎಂದು ಕರೆಯಲಾಗುತ್ತದೆ. ಗ್ರಾಮದಲ್ಲಿ ಎಲ್ಲರೂ ಒಟ್ಟಾಗಿ ಮಾರಮ್ಮನವರ ದೇವಾಲಯ ನಿರ್ಮಿಸಿದ್ದೀರಿ. ಅಧಿದೇವತೆ ಮಾರಮ್ಮ ಎಲ್ಲರಿಗೂ ಒಳಿತು ಮಾಡಲಿ ಎಂದು ತಿಳಿಸಿದರು. ಜಿಪಂ ಮಾಜಿ ಸದಸ್ಯ ಪಿ.ರವಿ.ಮಾತನಾಡಿದರು. ಇದೇ ವೇಳೆ ದೇವಾಲಯದ ವತಿಯಿಂದ ಶಾಸಕರನ್ನು ಅಭಿನಂದಿಸಲಾಯಿತು.

ಈ ವೇಳೆ ಗ್ರಾಮದ ಗುಡಿಗೌಡ ನಂಜಪ್ಪ, ನಾಡಗೌಡ ರತ್ನಯ್ಯ, ಯಜಮಾನರಾದ ಚನ್ನಬಸವದೇವರು, ಕಾಳಸ್ವಾಮಪ್ಪ, ಕಾಳಸ್ವಾಮಿ, ಡಿ.ನಾಗರಾಜು, ಬಸವರಾಜು, ನಾಗರಾಜು, ಸ್ವಾಮಿ, ಮಹದೇವಶೆಟ್ಟಿ, ಭೀಮನಾಯಕ, ಕಮಿಟಿ ಅಧ್ಯಕ್ಷ ಚಲುವಚಾರಿ, ಮುಖಂಡರಾದ ಸಿ.ತಿಮ್ಮಯ್ಯ, ಕೆ.ಎನ್.ದೊಡ್ಡರಾಜು, ಮಲ್ಲಿಕಾರ್ಜನಸ್ವಾಮಿ, ಆದಿರಾಜಪ್ಪ, ಕೆಂಡಗಣ್ಣಪ್ಪ, ಮಂಜುನಾಥ್, ವಿಜಯೇಂದ್ರ ಕುಮಾರ್, ಶಂಕರಪ್ಪ, ಪುಟ್ಟೇಗೌಡ, ಸಚಿನ್‌ಸ್ವಾಮಿ, ಗ್ರಾಪಂ ಅಧ್ಯಕ್ಷ ಚಲುವಪ್ಪ, ಸದಸ್ಯರಾದ ಎಸ್.ರೀತಿ, ಶೋಭಾ, ದೇವಸ್ಥಾನ ನಿರ್ಮಾಣದ ಎಇಇ ಪ್ರಭು, ಇಂಜಿನಿಯರ್ ಕೆ.ಯೋಗೇಶ್ ಕುಮಾರ್, ಕೊತ್ತೇಗಾಲ ಗ್ರಾಮಸ್ಥರು ಇನ್ನಿತರರಿದ್ದರು.

ಹಳ್ಳಿಗಳಲ್ಲಿ ಮೂಲ ಕಲಿಕೆ, ಪ್ರಾಥಮಿಕ ಶಿಕ್ಷಣ ಗಟ್ಟಿಯಾಗಲಿ

ಸಂಪನ್ಮೂಲ ವ್ಯಕ್ತಿ ಡಾ.ಅಚ್ಚುತರಾವ್ ಸಲಹೆ



ಹೆಚ್.ಡಿ.ಕೋಟೆ, ಜೂ.17– ಹಳ್ಳಿ ಹಳ್ಳಿಗಳಲ್ಲಿ ಮೂಲ ಕಲಿಕೆಗಳು ಹಾಗೂ ಪ್ರಾಥಮಿಕ ಶಿಕ್ಷಣ ಗಟ್ಟಿಯಾಗಬೇಕು ಎಂದು ಸಂಪನ್ಮೂಲ ವ್ಯಕ್ತಿ ಡಾ.ಅಚ್ಚುತ ರಾವ್ ತಿಳಿಸಿದರು.

ಪಟ್ಟಣದ ವಿಶ್ವಭಾರತಿ ಪಿಯು ಕಾಲೇಜು ವಿಜ್ಞಾನ ವಿಭಾಗದಿಂದ ಆಯೋಜಿಸಿದ್ದ ವಿದ್ಯಾರ್ಥಿ ಮಿತ್ರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಕಾರ್ಯಕ್ಷಮತೆ ಬಲವರ್ಧನೆ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ನಾವು ದಿನಕ್ಕೆ 8 ರಿಂದ 10 ಗಂಟೆ ಓದಲು ಅನುಕೂಲವಾಗುವಂತೆ ಸಲಹೆ ನೀಡಬೇಕು. ಆದರೆ ಇತ್ತೀಚೆಗೆ ಪರೀಕ್ಷೆ ಮಾಡಿ ಮುಂದಕ್ಕೆ ಹೋಗುತ್ತಿದ್ದೇವೆ. ಆದರೆ ಮಕ್ಕಳನ್ನು ಸ್ವತಂತ್ರವಾಗಿ ಕಲಿಯುವಂತೆ ಮಾಡಬೇಕು ಎಂದರು.

ನಿವೃತ್ತ ಬಿಇಓ ನೈಮುನಿಸ ಬೇಗಂ ಮಾತನಾಡಿ, ಮಕ್ಕಳು ಶ್ರಮಪಟ್ಟರೆ ಮಾತ್ರ ಮುಂದಿನ ದಿನಗಳಲ್ಲಿ ಉನ್ನತ ಹುದ್ದೆಗೇರಲು ಸಾಧ್ಯವಾಗುತ್ತದೆ ಎಂದರು.

ಈ ವೇಳೆ ಹಿರಿಯ ಸಂಪನ್ಮೂಲ ವ್ಯಕ್ತಿ ಕೃಷ್ಣ ಕುಮಾರ್, ಮುರಳೀಧರ್, ಸಮಾಜ ಸೇವಕ ಭಾಸ್ಕರ್, ವಕೀಲೆ ಸರಸ್ವತಿ, ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಪ್ರದೀಪ್ ಕುಮಾರ್, ಚಾಮರಾಜು ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಭರತ್ ಇನ್ನಿತರರಿದ್ದರು.

ಇಂದು ತಾಪಂ ಕೆಡಿಪಿ ಸಭೆ

ಹೆಚ್.ಡಿ.ಕೋಟೆ, ಜೂ.17– ಪಟ್ಟಣದ ತಾಪಂ ನೂತನ ಕಟ್ಟಡದ ಸಭಾಂಗಣದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆಯಲ್ಲಿ ಜೂ.18ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಪ್ರಗತಿ ಪರಿಶೀಲನಾ ಸಭೆ ನಡೆಯಲಿದ್ದು, ತಾಲೂಕಿನ ಎಲ್ಲಾ ಅಧಿಕಾರಿಗಳು ಹಾಜರಾಗಬೇಕು ಎಂದು ತಾಪಂ ಇಓ ಧರಣೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಹರೋಂ ಹರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಚಂದು ಚಾಂಪಿಯನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಹಾರಾಜ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಹಾರಾಜ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಕರಟಕ ದಮನಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಹಾರಾಜ (ತ)	4 ಪ್ರದರ್ಶನಗಳು
ಪ್ರಭಾ	
ಅಮೀನ (ಹಿಂ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಇನ್‌ಸೈಟ್ ಔಟ್ 2(3ಡಿ) (ಇಂ): ಬೆ10.15ಕ್ಕೆ, ಮ.12.15ಕ್ಕೆ, ಮ.2.15ಕ್ಕೆ, ಚಂದು ಚಾಂಪಿಯನ್ (ಹಿಂ): ಸಂ.4.15ಕ್ಕೆ, ರಾ.7.05ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.11ಕ್ಕೆ, ರಾ.7ಕ್ಕೆ, ಮುಂಜ್ಯಾ (ಹಿಂ): ಮ.2.15ಕ್ಕೆ, ಶಿವಮ್ಮ ಯರೆಹಂಚಿನಾಳ (ಕ): ಸಂ.4.40ಕ್ಕೆ, ಹರೋಂ ಹರ (ತೆ): ರಾ.10.15ಕ್ಕೆ.
ಸ್ಕ್ರೀನ್ 3	ಮುಂಜ್ಯಾ (ಹಿಂ): ಬೆ.10.40ಕ್ಕೆ, ಮಹಾರಾಜ (ತ): ಮ.1.15ಕ್ಕೆ, ಸಂ.4.20ಕ್ಕೆ, ಚೆಫ್ ಚಿದಂಬರ (ಕ): ರಾ.7.20ಕ್ಕೆ, ಡಿಎನ್‌ಎ (ಮ): ರಾ.9.50ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.10ಕ್ಕೆ, ಮ.1.25ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಟ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ

MVC

ದೂ : 0821–2973519

ಸ್ಕ್ರೀನ್ 1	ಚೆಫ್ ಚಿದಂಬರ (ಕ): ಬೆ.11.15ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಮ.1.30ಕ್ಕೆ, ಮ್ಯೂಸಿಕ್ ಶಾಪ್ ಮೂರ್ತಿ (ತೆ): ಮ.3.45ಕ್ಕೆ, ಹರೋಂ ಹರ (ತೆ): ಸಂ.6.15ಕ್ಕೆ, ಮಹಾರಾಜ (ತ): ರಾ.9.15ಕ್ಕೆ.
ಸ್ಕ್ರೀನ್ 2	ಇನ್‌ಸೈಟ್ ಔಟ್ (3ಡಿ)(ಇಂ): ಬೆ.11ಕ್ಕೆ, ಕೋಟಿ (ಕ): ಮ.1ಕ್ಕೆ, ಸಂ.4.15ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಲವ್ ಲಿ (ಕ): ಮ.1ಕ್ಕೆ, ಮಹಾರಾಜ (ತ): ಸಂ.4.05ಕ್ಕೆ, ಸಂ.6.45ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ರಾ.9.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಚೆಫ್ ಚಿದಂಬರ (ಕ): ಮ.1.55ಕ್ಕೆ, ಲವ್ ಲಿ (ಕ): ಸಂ.4.10ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ರಾ.7.20ಕ್ಕೆ

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಗ್ರಾಮಸ್ಥರ ಸಹಕಾರ ಮುಖ್ಯ

ಹೊಸಕೋಟೆ ಕಸ್ಲರ್ ಸಿಆರ್‌ಪಿ ಚನ್ನಂಗೆರೆ ಪ್ರಭು ಅಭಿಪ್ರಾಯ



ಚುಂಚನಕಟ್ಟೆ, ಜೂ.17– ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಗ್ರಾಮಸ್ಥರ ಸಹಕಾರ ಮುಖ್ಯ ಇದರಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯಲು ಸಾಧ್ಯ ಎಂದು ಹೊಸಕೋಟೆ ಕಸ್ಲರ್ ಸಿಆರ್‌ಪಿ ಚನ್ನಂಗೆರೆ ಪ್ರಭು ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಮುದ್ದನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2024–25ನೇ ಸಾಲಿನ ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಹಿರಿಯ ವಿದ್ಯಾರ್ಥಿಗಳ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟ, ಉಚಿತ ಪುಸ್ತಕ, ಸಮವಸ್ತ್ರ ಸೇರಿದಂತೆ ಇನ್ನಿತರ ಸೌಲಭ್ಯ ನೀಡಿ ಗುಣಮಟ್ಟದ ಶಿಕ್ಷಣ ನೀಡಲು ರಾಜ್ಯ ಸರ್ಕಾರ ಮತ್ತು ಶಿಕ್ಷಣ ಇಲಾಖೆ ಶ್ರಮಿಸುತ್ತಿದೆ. ಹೀಗಾಗಿ ಗ್ರಾಮಸ್ಥರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ಶಾಲೆಗಳ ಅಭಿವೃದ್ಧಿ ಸಹಕಾರ ನೀಡಿ ಎಂದರು.

ಈ ವೇಳೆ ಕುಪ್ಪೆ ಗ್ರಾಪಂ ಮಾಜಿ ಅಧ್ಯಕ್ಷ ತಿಮ್ಮೇಗೌಡ, ಸದಸ್ಯರಾದ ಗೀತಾ, ಗಣೇಶ್, ಡೈರಿ ಅಧ್ಯಕ್ಷ ರಾಮಕೃಷ್ಣೇಗೌಡ, ಎಸ್‌ಡಿಎಂಸಿ ಅಧ್ಯಕ್ಷ ಲೋಕೇಶ್, ಸದಸ್ಯೆ ಗೀತಾ, ನಿವೃತ್ತ ಶಿಕ್ಷಕ ಗದ್ದಿಲಕ್ಕೇಗೌಡ, ಗ್ರಾಮದ ಯಜಮಾನದ ತಮ್ಮಯ್ಯ, ರಾಜಪ್ಪ, ಗಂಗಾಧರ, ಅರುಣ್ ಕುಮಾರ್, ಮಂಜುನಾಥ್, ರವಿ, ಮುಖ್ಯ ಶಿಕ್ಷಕಿ ಸುಮಮಣಿ, ಶಿಕ್ಷಕರಾದ ಬಸವರಾಜು, ಕಿರಣ್ ಕುಮಾರ್, ಯೋಗೇಶ್ ಸೇರಿದಂತೆ ಮತ್ತಿತರರಿದ್ದರು.

ಗುತ್ತಿಗೆದಾರರು ತಿಂಗಳೊಳಗೆ 50ರಷ್ಟು ಕಾಮಗಾರಿ ಮುಗಿಸಿ

ಇಲ್ಲದಿದ್ದರೇ ಗುತ್ತಿಗೆದಾರರ ಬದಲಾವಣೆಗೆ ಡಿಸಿಗೆ ಶಿಫಾರಸ್ಸು: ಶಾಸಕ ಜಿ.ಡಿ.ಹರೀಶ್‌ಗೌಡ



ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿದರು.

ಹುಣಸೂರು, ಜೂ.17– ನಗರೋತ್ಥಾನ ಯೋಜನೆಯಡಿ ಕಾಮಗಾರಿ ಗುತ್ತಿಗೆ ಪಡೆದ ಗುತ್ತಿಗೆದಾರರು ತಿಂಗಳೊಳಗೆ ಕನಿಷ್ಠ 50ರಷ್ಟು ಕಾಮಗಾರಿ ಪೂರ್ಣಗೊಸಬೇಕು. ಇಲ್ಲದಿದ್ದರೆ ಬದಲಾವಣೆಗೆ ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುತ್ತೇನೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಎಚ್ಚರಿಸಿದರು.

ಇಲ್ಲಿನ ನಗರಸಭೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ನಗರೋತ್ಥಾನ ಕಾಮಗಾರಿ ಪ್ರಗತಿ ಪರಿಶೀಲಿಸಿ ಮಾತನಾಡಿದ ಶಾಸಕರು, ಪತ್ರಿಕೆಯೊಂದರಲ್ಲಿ ಇತ್ತೀಚೆಗೆ ನಗರೋತ್ಥಾನ ಕಾಮಗಾರಿ ಕುರಿತಂತೆ ವರದಿ ಪ್ರಕಟವಾಗಿದ್ದು, ಒಂದೂವರೆ ವರ್ಷದಿಂದ ಸುಮಾರು 350 ಕಾಮಗಾರಿಯಲ್ಲಿ ಶೇ.20ರಷ್ಟು ಕಾಮಗಾರಿ ಮುಗಿಸಿಲ್ಲ ಎಂದು ಗುಡುಗಿದ ಅವರು, ನಗರಸಭೆ ವ್ಯಾಪ್ತಿಯ 31 ವಾರ್ಡ್‌ನಲ್ಲಿ 3.25 ಕೋಟಿ ರೂ. ವೆಚ್ಚದಲ್ಲಿ ನಡೆಯುತ್ತಿರುವ ಕಾಮಗಾರಿ ಪಡೆದ ಗುತ್ತಿಗೆದಾರ ಸೂಕ್ತ ಸಿಬ್ಬಂದಿ ಮತ್ತು ಕಾರ್ಮಿಕರನ್ನು ನಿಯೋಜಿಸದೆ ಕಾಮಗಾರಿ ವಿಳಂಬವಾಗುತ್ತಿದೆ ಎಂದರು.

ಗುತ್ತಿಗೆದಾರರ ಪ್ರತಿನಿಧಿ ತೇಜಸ್ ಮಾತನಾಡಿ, ಕಾಮಗಾರಿ ಪೂರ್ಣಗೊಳಿಸಲು ನಗರಸಭೆ ಸಹಕಾರ ಅಗತ್ಯ. ನಗರದ ಬಹುತೇಕ ವಾರ್ಡ್‌ಗಳಲ್ಲಿ ಒಳಚರಂಡಿ ಕಾಮಗಾರಿ ಪೂರ್ಣವಾಗಿಲ್ಲ. ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಸಬೇಕಿದ್ದು, ಹೀಗಾಗಿ ಕಾಮಗಾರಿ ವಿಳಂಬವಾಗಿದೆ ಎಂದು ಸಮಜಾಯಿಷಿ ನೀಡಿದರು.

ಈ ವೇಳೆ ಗರಂ ಆದ ಆಯುಕ್ತೆ ಮಾನಸ, ಗುತ್ತಿಗೆದಾರರು ಈವರಗೆ ಒಮ್ಮೆಯೂ ತಮ್ಮನ್ನು ಭೇಟಿ ಮಾಡಿ ಕಾಮಗಾರಿ ಕುರಿತು ಮಾಹಿತಿ ನೀಡಿಲ್ಲ. ಸಭೆಯಲ್ಲಿ ತಪ್ಪು ಮಾಹಿತಿ ನೀಡುತ್ತಿದ್ದಾರೆ ಎಂದರು.

ನಗರಸಭೆ ಸದಸ್ಯ ಗಣೇಶ್ ಕುಮಾರಸ್ವಾಮಿ ಮಾತನಾಡಿ, ವಾರ್ಡ್‌ಗಳಲ್ಲಿ ಅರ್ಧಕ್ಕೆ ರಸ್ತೆ ಕಾಮಗಾರಿ ನಿಂತು ಸಾರ್ವಜನಿಕರು ಓಡಾಡದಂತಾಗಿದೆ. ಇಂದಿನ ಸಭೆಗೆ ಗುತ್ತಿಗೆದಾರರನ್ನು ಆಹ್ವಾನಿಸಿತ್ತು. ಈ ಸಭೆಗೆ ಗೈರಾಗಿದ್ದು, ಶಾಸಕರು ಆತನ ಬಗ್ಗೆ ಗಂಭೀರ ಕ್ರಮ ತೆಗೆದುಕೊಳ್ಳಬೇಕು ಎಂದರು.

ಇದಕ್ಕೆ ಧ್ವನಿಗೂಡಿಸಿದ ಸದಸ್ಯ ಕೃಷ್ಣರಾಜ ಗುಪ್ತ ನಗರೋತ್ಥಾನ ಯೋಜನೆ ಆರಂಭವಾದಾಗಿನಿಂದ ಸದಸ್ಯರು ವಾರ್ಡ್‌ಗೆ ಹೋಗಲಾಗುತ್ತಿಲ್ಲ. ನಿವಾಸಿಗಳಿಂದ ಬೈಗುಳು ಎದುರಿಸಬೇಕಾಗಿದೆ ಎಂದರು.

2 ತಿಂಗಳಲ್ಲಿ ಪೂರ್ಣ: ಗುತ್ತಿದಾರರ ಪರ ಸಭೆಯಲ್ಲಿದ್ದ ಪ್ರತಿನಿಧಿ ತೇಜಸ್ 2 ತಿಂಗಳ ಗಡುವು ನೀಡುವಂತೆ ಮನವಿ ಮಾಡಿದರು. ಅಲ್ಲದೇ ಹೆಚ್ಚಿನ ಸಿಬ್ಬಂದಿ ನಿಯೋಜಿಸಿ ಈ ಎಲ್ಲಾ ಕಾಮಗಾರಿ ಪೂರ್ಣಗೊಳಿಸಿ ನಗರಸಭೆಗೆ ಹಸ್ತಾಂತರಿಸುತ್ತೇವೆ ಎಂದರು.

ಈ ವೇಳೆ ಶಾಸಕ ಹರೀಶ್‌ಗೌಡ ಜು.17ರೊಳಗೆ ಶೇ.75ರಷ್ಟು ಗುಣಮಟ್ಟದ ಕಾಮಗಾರಿ ಮುಗಿಸಿರಬೇಕು. ಜಿಲ್ಲಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ ಬಳಿಕ ನಿಮಗೆ ಕಾಮಗಾರಿ ಬಿಲ್ ಪಾವತಿಸಲಾಗುವುದು ಎಂದು ತಾಕೀತು ಮಾಡಿದರು.

ಅಮೃತ್ ಯೋಜನೆ: ನಗರದ ನಿವಾಸಿಗಳಿಗೆ ನೀರಿನ ಸವಲತ್ತು ಕಲ್ಪಿಸಲು 20 ಕೋಟಿ ರೂ. ವೆಚ್ಚದಲ್ಲಿ ಅಮೃತ್ ಯೋಜನೆ ಅನುಷ್ಠಾನವಾಗಲಿದ್ದು, ಆರಂಭದಲ್ಲಿ 500 ಮನೆಗಳಿಗೆ ನೀರಿನ ಸಂಪರ್ಕಕ್ಕೆ ಮೀಟರ್ ಅಳವಡಿಸಿ ಪರಿಶೀಲಿಸಿದ ಬಳಿಕ ಯೋಜನೆ ಪೂರ್ಣಪ್ರಮಾಣದಲ್ಲಿ ಅನುಷ್ಠಾನವಾಗಲಿದೆ ಎಂದು ನಗರಸಭೆ ಎಇಇ ಶರ್ಮಿಳಾ ತಿಳಿಸಿದರು.

ಸಭೆಯಲ್ಲಿ ನಗರಸಭೆ ಸದಸ್ಯರಾದ ವಿವೇಕ್, ದೇವರಾಜ್, ಹರೀಶ್, ನಗರೋತ್ಥಾನ ಯೋಜನೆ ಅಧಿಕಾರಿ ಚೇತನ್, ಪರಿಸರ ಇಂಜಿನಿಯರ್ ರೂಪ ಸೇರಿದಂತೆ ಅಧಿಕಾರಿಗಳಿದ್ದರು.


ಶಿವರಾಮು ನಿಧನ



ಕೆಆರ್.ನಗರ, ಜೂ.17– ತಾಲೂಕಿನ ಮಾರಿಗುಡಿಕೊಪ್ಪಲು ಗ್ರಾಮದ ನಿವಾಸಿ ಶಿವರಾಮು(51) ಸೋಮವಾರ ನಿಧನರಾದರು. ಮೃತರು ಪತ್ನಿ ಶಾರದ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರಕು ಸಾಗಾಣೆ ವಾಹನಗಳ ಈ ನಿರ್ಲಕ್ಷ್ಯತೆ ಇತರ ವಾಹನ ಚಾಲಕರಿಗೆ ಅಪಾಯಕಾರಿ!

ಅನಾಹುತಕ್ಕೆ ಆಸ್ಪದ ನೀಡದಂತೆ ಮುನ್ನೆಚ್ಚರಿಕೆ ವಹಿಸುವುದು ಸೂಕ್ತವಲ್ಲವೇ?







ಮೈಸೂರಿನ ನಜರ್‌ಬಾದಿನ ಅಬ್ಬಾ ರಸ್ತೆಯಲ್ಲಿ ಗೂಡ್ಸ್ ಆಟೋವೊಂದು ಅಜಾಗರೂಕತೆ ರೀತಿಯಲ್ಲಿ ಸಿಮೆಂಟ್ ಮೂಟೆಗಳನ್ನು ಸಾಗಾಟ ಮಾಡುತ್ತಿರುವ ದೃಶ್ಯ ಇತ್ತೀಚೆಗೆ ಕಂಡು ಬಂದಿತು. ಮೂಟೆಗಳಿಗೆ ಟಾರ್ಪಲ್ ಮುಚ್ಚುವುದಿರಲಿ, ಹಗ್ಗದಿಂದಲೂ ಅವುಗಳನ್ನು ಕಟ್ಟಿಲ್ಲ. ಆ ಮೂಟೆಗಳಲ್ಲಿ ಕೇವಲ ಒಂದು ಕೆಳಗೆ ಬಿದ್ದರೂ ಹಿಂಬದಿ ವಾಹನ ಸವಾರರು ಅಪಾಯಕ್ಕೆ ಸಿಲುಕುದಿಲ್ಲವೇ?. ಮತ್ತೊಂದು ಚಿತ್ರದಲ್ಲಿ ಅದೇ ರಸ್ತೆಯಲ್ಲಿ ಲಾರಿಯೊಂದರಲ್ಲಿ ಇಟ್ಟಿಗೆಗಳನ್ನು ಸಾಗಾಟ ಮಾಡುತ್ತಿದ್ದು, ಟಾರ್ಪಲ್‌ನಿಂದ ಅದನ್ನು ಮುಚ್ಚದೇ ಹಾಗೂ ಕಾರ್ಮಿಕರೊಬ್ಬರನ್ನು ಇಟ್ಟಿಗೆಗಳ ಮೇಲೆ ಕೂರಿಸಿಕೊಂಡು ಚಲಿಸುತ್ತಿರುವ ದೃಶ್ಯ. ಲಾರಿಯ ಬಾಡಿಯ ಮೇಲಕ್ಕೂ ಇಟ್ಟಿಗೆ ಲೋಡ್ ಮಾಡಿದ್ದು, ಇದರಿಂದ ರಸ್ತೆ ಡುಬ್ಬ ಹತ್ತುವ ವೇಳೆ ಅವುಗಳಲ್ಲಿ ಕೆಲವಾದರೂ ಕೆಳಕ್ಕೆ ಬೀಳುವುದಿಲ್ಲವೇ? ಇದರಿಂದ ಅನಾಹುತ ಸಂಭವಿಸುವುದಿಲ್ಲವೇ? ಎಂಬ ಪ್ರಶ್ನೆ ಕಾಡಿತು.

ಮೈಸೂರು, ಜೂ.17(ಪಿಎಂ)– ಸರಕು ಸಾಗಾಣಿಕೆ ಮಾಡುವಾಗ ವಾಹನಗಳಲ್ಲಿ ಸುರಕ್ಷತೆಯ ಕ್ರಮಗಳನ್ನು ವಹಿಸದೇ ಇರುವುದು ಮೈಸೂರು ನಗರದಲ್ಲಿ ಆಗಾಗ್ಗೆ ಕಂಡು ಬರುತ್ತಿದೆ. ಕಾಂಕ್ರೀಟ್, ಜಲ್ಲಿಕಲ್ಲು, ಎಂ ಸ್ಯಾಂಡ್ ಸೇರಿದಂತೆ ವಿವಿಧ ರೀತಿಯ ಸರಕು ಸಾಗಿಸುವಾಗ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ರಸ್ತೆಗಿಳಿಯುತ್ತಿರುವ ವಾಹನಗಳಿಂದ ಇನ್ನಿತರ ವಾಹನ ಚಾಲಕರು ಸಂಕಷ್ಟಕ್ಕೀಡಾಗುತ್ತಿದ್ದಾರೆ.

ಈ ರೀತಿಯ ನಿರ್ಲಕ್ಷ್ಯದ ವಿರುದ್ಧ ಕ್ರಮ ಮಾತ್ರ ಅಷ್ಟಕಷ್ಟೆ. ಇಂತಹ ವಾಹನಗಳನ್ನು ತಡೆದು ನಿಲ್ಲಿಸಿ ಕ್ರಮ ವಹಿಸುವ ಪರಿಪಾಠ ನಗರದಲ್ಲಿ ಅದೇಕೋ ಕಾಣುತ್ತಲೇ ಇಲ್ಲ. ಸಾರಿಗೆ ಇಲಾಖೆ, ಸಂಚಾರ ಪೊಲೀಸರು ಇಂತಹ ನಿರ್ಲಕ್ಷ್ಯ ಪ್ರವೃತ್ತಿಗೆ ಕಡಿವಾಣ ಹಾಕಲು ಇದುವರೆಗೆ ಮುಂದಾಗಿಲ್ಲ. ಹಾಗಾಗಿ ಹಲವು ಸರಕು ಸಾಗಾಣಿಕೆ ವಾಹನಗಳು ಸುರಕ್ಷತೆ ಬಗ್ಗೆಯೇ ಎಚ್ಚರ ವಹಿಸದೇ ಸಂಚಾರ ಮಾಡುತ್ತಿವೆ. ಇದರಿಂದ ಹಲವು ಜೀವಕ್ಕೆ ಹಾನಿ ಉಂಟಾಗಿದೆ. ಆದರೆ ಅನಾಹುತಕ್ಕೆ ಆಸ್ಪದ ನೀಡದಂತೆ ಮುನ್ನಚ್ಚರಿಕೆ ವಹಿಸುವುದು ಸೂಕ್ತವಲ್ಲವೇ? ಎಂಬುದು ಪ್ರಜ್ಞಾವಂತರ ಕಳಕಳಿಯ ವಾದವಾಗಿದೆ.

ರಸ್ತೆಯುದ್ದಕ್ಕೂ ಸುರಿಸುತ್ತಾ ಸಾಗುತ್ತವೆ: ಕಟ್ಟಡ ನಿರ್ಮಾಣಕ್ಕೆ ಅಗತ್ಯವಾಗಿ ಬೇಕಿರುವ ಕಾಂಕ್ರೀಟ್ ಅನ್ನು ಸಿದ್ಧಪಡಿಸಿ ಪೂರೈಸುವಲ್ಲಿ ಕಾಂಕ್ರೀಟ್ ಮಿಕ್ಸರ್ ಟ್ರಕ್‌ಗಳು ಮಹತ್ವದ ಪಾತ್ರ ವಹಿಸುತ್ತವೆ. ಆದರೆ ಅವುಗಳು ರಸ್ತೆಯಲ್ಲಿ ಸಾಗುವಾಗ ಉಂಟು ಮಾಡುವ ಕಿರಿಕಿರಿ ಅಷ್ಟಿಷ್ಟಲ್ಲ. ಸುರಕ್ಷಾ ಕ್ರಮ ವಹಿಸುವ ಇಂತಹ ವಾಹನಗಳ ಬಗ್ಗೆ ಇಲ್ಲಿ ದೂರುತ್ತಿಲ್ಲ. ಮೊದಲೇ ಅಸುರಕ್ಷಿತವಾಗಿ ಸಾರ್ವಜನಿಕ ರಸ್ತೆಗಳಲ್ಲಿ ಇವುಗಳ ಈ ಪರಿ ಬೇಜವಾಬ್ದಾರಿಯಿಂದ ಅನಾಹುತ ಆಗದೇ ಇರುತ್ತದೆಯೇ?

ಇಂತಹ ಟ್ರಕ್‌ಗಳು ಭರ್ತಿಯಾಗಿ ಕಾಂಕ್ರೀಟ್ ತುಂಬಿಕೊಂಡು ಸಾಗುವಾಗ ಕಡಿದಾದ ರಸ್ತೆ, ಅತ್ಯಂತ ತಿರುವಿನಲ್ಲಿ ಕಾಂಕ್ರೀಟ್ ಸುರಿಸುತ್ತಾ ಸಾಗುತ್ತಿವೆ. ಹೀಗೆ ಸುರಿದ ಕಾಂಕ್ರೀಟ್ ರಸ್ತೆಯಲ್ಲಿ ಗುಡ್ಡೆಯಾಗಿ ಹಾಗೇ ಉಳಿದು, ವಾಹನ ಚಾಲಕರಿಗೆ ಅದರಲ್ಲೂ ದಿಚಕ್ರ ವಾಹನ ಸವಾರರಿಗೆ ಕಂಟಕವಾಗಿ ಪರಿಣಮಿಸಿದೆ. ನಗರದಲ್ಲಿ ಇದು ಅಲ್ಲಲ್ಲಿ ಕಾಣಸಿಗುತ್ತಿದೆ.

ಅಂತೆಯೇ ಜಲ್ಲಿಕಲ್ಲು ಸಾಗಾಣಿಕೆ ಮಾಡುವ ವಾಹನ ಗಳು ಅದರ ಮೇಲೆ ಸೂಕ್ತ ರೀತಿಯಲ್ಲಿ ಟಾರ್ಪಲ್ ಮುಚ್ಚದೇ ಸಾಗುವುದೂ ಇದೆ. ವಾಹನದ ಬಾಡಿ ಮಟ್ಟಕ್ಕೆ ಲೋಡ್ ಮಾಡಿ ಕೊಂಡೊಯ್ದರೆ ಯಾವುದೇ ಸಮಸ್ಯೆ ಇಲ್ಲ ಓವರ್ ಲೋಡ್ ಮಾಡಿಕೊಳ್ಳುವುದೂ ಅಲ್ಲದೆ, ಸೂಕ್ತ ರೀತಿಯಲ್ಲಿ ಟಾರ್ಪಲ್‌ನಲ್ಲಿ ಮುಚ್ಚದೆ ಸಾಗುತ್ತವೆ. ಡೀಸೆಲ್ ಉಳಿಸುವ ಸಲುವಾಗಿ ಒಂದೂವರೆ ಲೋಡ್ ಒಮ್ಮೆಗೆ ಸಾಗಾಟ ಮಾಡುವ ಸಂದರ್ಭದಲ್ಲಿ ಅಪಾಯ ಸಂಭವಿಸುವ ಸಾಧ್ಯತೆ ಹೆಚ್ಚಿರುತ್ತದೆ ಎನ್ನುತ್ತಾರೆ ನಾಗರಿಕರೊಬ್ಬರು.

ಟಾರ್ಪಾಲ್ ಮುಚ್ಚದೇ ಜಲ್ಲಿಕಲ್ಲು ಸಾಗಿಸುವ ವೇಳೆ ಹಿಂಬದಿಯಲ್ಲಿ ಬರುವ ದ್ವಿಚಕ್ರ ವಾಹನ ಸವಾರರ ಕಣ್ಣಿಗೆ ಅದರ ಧೂಳು ಬೀಳುವುದು ಸರ್ವೇ ಸಾಮಾನ್ಯ. ಇಂತಹ ಕಿರಿಕಿರಿ ಹಿನ್ನೆಲೆಯಲ್ಲಿ ದ್ವಿಚಕ್ರ ವಾಹನ ಸವಾರ ಕಣ್ಣನ್ನು ಮುಚ್ಚಿದರೆ ಅನಾಹುತ ಸಂಭವಿಸುವ ಸಾಧ್ಯತೆಯೇ ಹೆಚ್ಚು. ಟ್ರ್ಯಾಕ್ಟರ್ ಮತ್ತು ಲಾರಿಗಳಲ್ಲಿ ಸರಕು ಸಾಗಿಸುವ ಸಂದರ್ಭದಲ್ಲಿ ಸುರಕ್ಷಿತ ಕ್ರಮ ವಹಿಸುವುದು ಅನೇಕ ವೇಳೆ ಇಲ್ಲವಾಗುತ್ತಿದೆ. ಹಾಗೇ ಗಾರೆ ಜಲ್ಲಿ ತುಂಬಿದ ಲಾರಿ ಮಾರ್ಗದುದ್ದಕ್ಕೂ ಸುರಿಸಿಕೊಂಡು ಹೋಗುವುದರಿಂದ ಹೀಗೆ ಬಿದ್ದಂತಹ ಜಲ್ಲಿ ಮೇಲೆ ಇದೇ ವಾಹನ ಸಾಗಿದರೂ ಅಪಾಯವೇ. ದಿಚಕ್ರ ವಾಹನ ಸವಾರರಂತೂ ಬಿದ್ದು ಕೈಕಾಲು ಮುರಿದುಕೊಂಡ ನಿದರ್ಶನಗಳಿವೆ. ಮತ್ತೆ ಕೆಲವರು ತಲೆ ಒಡೆದುಕೊಂಡಿದ್ದಾರೆ.

ಕೆಲ ದಿನಗಳ ಹಿಂದೆ ಮೈಸೂರಿನ ಸಯ್ಯಾಜಿರಾವ್ ರಸ್ತೆಯ ತಿಲಕನಗರದ ಸಿಗ್ನಲ್‌ನಲ್ಲಿ ಗೂಡ್ಸ್ ಆಟೋ ಒಂದರಲ್ಲಿ ಸಾಗಿಸುತ್ತಿದ್ದ ನಿರ್ಮಾಣಕ್ಕೆ ಬಳಸುವ ಕಬ್ಬಿಣದ ಸಾಲಾಕೆಗಳು ಆ ವಾಹನದ ಮುಂಭಾಗಕ್ಕೆ ಜಾರಿ ಬಿದ್ದಿದ್ದವು. ಸಿಗ್ನಲ್ ದಾಟುವ ಭರಾಟೆಯಲ್ಲಿ ಚಾಲಕ ಈ ಆಟೋವನ್ನು ಮುನ್ನುಗ್ಗಿಸಿ, ಆಮೇಲೆ ಬೇಡವೆಂದು ಬ್ರೇಕ್ ಹಾಕಿದ ಹಿನ್ನೆಲೆಯಲ್ಲಿ ಅವು ಮುಂದಕ್ಕೆ ಜಾರಿ ಬಿದ್ದಿರಬೇಕು. ಅದೃಷ್ಟವಶಾತ್ ಅಂದು ಆ ಗೂಡ್ಸ್ ಆಟೋ ಮುಂದೆ ಯಾವುದೇ ವಾಹನ ಇಲ್ಲದ ಹಿನ್ನೆಲೆಯಲ್ಲಿ ಅನಾಹುತ ತಪ್ಪಿತು ಎಂಬುದು ಸಮಾಧಾನಕರ ಸಂಗತಿ. ಆದರೆ ಇಂತಹ ಅಜಾಗರೂಕತೆ ವಿರುದ್ಧ ಗಂಭೀರ ಕ್ರಮ ಆಗದಿದ್ದಲ್ಲಿ ಒಂದಲ್ಲಾ ಒಂದು ದಿನ ಅವಘಡ ಸಂಭವಿಸುವುದನ್ನು ತಳ್ಳಿ ಹಾಕಲಾಗದು.

ಇಂತಹ ಅಜಾಗರೂಕತೆಗಳ ನಿಯಂತ್ರಣಕ್ಕೆ ನಿಯಮಗಳು ಇದ್ದೇ ಇರುತ್ತವೆ. ಒಂದು ವೇಳೆ ಯಾವುದಾದರೂ ನಿರ್ದಿಷ್ಟ ಅಸುರಕ್ಷತೆಯ ಕ್ರಮಕ್ಕೆ ನಿಯಮಾವಳಿ ಇಲ್ಲವಾದರೆ ಸಾರ್ವಜನಿಕರ ಹಿತದೃಷ್ಟಿಯಿಂದ ರೂಪಿಸಿಕೊಳ್ಳುವುದು ಅಗತ್ಯವಲ್ಲವೇ ಎಂದು ಪ್ರಜ್ಞಾವಂತ ನಾಗರಿಕರು ಪ್ರಶ್ನಿಸಿದ್ದಾರೆ. ಇನ್ನು ರಸ್ತೆಯ ಅವ್ಯವಸ್ಥೆ ಸರಿಪಡಿಸುವುದೂ ಸುರಕ್ಷಿತ ಸಂಚಾರಕ್ಕೆ ಅತ್ಯಗತ್ಯ ಎಂಬುದನ್ನು ಒತ್ತಿ ಹೇಳಬೇಕಿಲ್ಲ. ಹಾಗಾಗಿ ನಗರ ಪಾಲಿಕೆ ಆಗಾಗ್ಗೆ ರಸ್ತೆಯಲ್ಲಿ ಬೀಳುವ ಹಳ್ಳಗಳನ್ನು ಗುರುತಿಸಿ ಅವುಗಳಿಗೆ ಒಂದಿಷ್ಟು ಮಣ್ಣನ್ನಾದರೂ ಸುರಿದು ಮಣ್ಯ ಕಟ್ಟಿಕೊಳ್ಳಬೇಕಿದೆ.

> ಇನ್ನು ಸರಕು ಸಾಗಾಣಿಕೆ ವಾಹನಗಳಲ್ಲಿ ಪ್ರಯಾಣಿಕರನ್ನು ಸಾಗಿಸುವಂತಿಲ್ಲ ಎಂಬ ನಿಯಮ ಇದೆ. ಅದಾಗ್ಯೂ ಮದುವೆ ಮೊದಲಾದ ಕಾರ್ಯಕ್ರಮಗಳಿಗೆ ಸರಕು ಸಾಗಾಣಿಕೆ ವಾಹನಗಳಲ್ಲಿ ಜನರನ್ನು ಕರೆದೊಯ್ಯುವುದು ನಗರದಲ್ಲಿ ಆಗಾಗ್ಗೆ ಕಂಡು ಬರುತ್ತಿದೆ. ಅಲ್ಲದೆ, ಕೆಲ ಕಾರ್ಮಿಕರು ಹಾರೆ, ಗುದಲಿ, ಕುಡುಗೋಲು ಮೊದಲಾದ ಸಾಧನ–ಸಲಕರಣೆಗಳನ್ನು ತಮ್ಮ ದ್ವಿಚಕ್ರ ವಾಹನಗಳಲ್ಲಿ ಅಪಾಯಕರ ರೀತಿಯಲ್ಲಿ ಹಿಡಿದುಕೊಂಡು ಹೋಗುವುದು ಇದ್ದೇ ಇದೆ. ಅವರಲ್ಲಿ ಜಾಗೃತಿ ಮೂಡಿಸಬೇಕಿದ್ದು, ನಂತರದ ಹಂತದಲ್ಲಿ ಕ್ರಮಕ್ಕೆ ಮುಂದಾಗಬೇಕೇ ಹೊರತು ಅನಾಹುತ ಸಂಭವಿಸಿದಾಗ, ಪಾಶ್ಚಾತಾಪ ಪಟ್ಟರೆ ಪ್ರಯೋಜನವೇನು ಅಲ್ಲವೇ?

ಅಗ್ನಿಶಾಮಕ ಸಿಬ್ಬಂದಿ ಎಂ. ಪರಶಿವಮೂರ್ತಿಗೆ ಮುಖ್ಯಮಂತ್ರಿಗಳ ಚಿನ್ನದ ಪದಕ



ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರಿಂದ ಮುಖ್ಯಮಂತ್ರಿಗಳ ಚಿನ್ನದ ಪದಕ ಸ್ವೀಕರಿಸುತ್ತಿರುವ ಎಂ. ಪರಶಿವಮೂರ್ತಿ.

ಮೈಸೂರು,ಜೂ.17(ಪಿಎಂ)– ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಮೈಸೂರಿನ ಬನ್ನಿಮಂಟಪ ಅಗ್ನಿಶಾಮಕ ಠಾಣೆಯ ಪ್ರಮುಖ ಅಗ್ನಿಶಾಮಕ ಸಿಬ್ಬಂದಿ ಎಂ.ಪರಶಿವಮೂರ್ತಿ ಅವರು 2024ನೇ ಸಾಲಿನ ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ.

ಬೆಂಗಳೂರಿನಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಎಂ.ಪರಶಿವಮೂರ್ತಿ ಅವರಿಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮುಖ್ಯಮಂತ್ರಿಗಳ ಚಿನ್ನದ ಪದಕ ಪ್ರದಾನ ಮಾಡಿದರು. ಅಗ್ನಿಶಾಮಕ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಮತ್ತು ಕರ್ತವ್ಯ ನಿಷ್ಠೆಗಾಗಿ ಪ್ರತಿವರ್ಷ ಮುಖ್ಯಮಂತ್ರಿಗಳ ಚಿನ್ನದ ಪದಕ ನೀಡಲಾಗುತ್ತದೆ.

ಮೈಸೂರು ತಾಲೂಕಿನ ಬಸಳ್ಳಿಹುಂಡಿ ಗ್ರಾಮದ ಎಂ.ಪರಶಿವಮೂರ್ತಿ, ಬಿ.ಎಸ್. ಮಹಾದೇವಪ್ಪನವರ ಪುತ್ರರು. ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ದೇವನೂರಿನಲ್ಲಿ ಮಾಡಿದ ಪರಶಿವಮೂರ್ತಿ, ವಿದ್ಯಾಭ್ಯಾಸದ ಬಳಿಕ ಅಗ್ನಿಶಾಮಕ ಇಲಾಖೆಯಲ್ಲಿ ನೌಕರಿ ಪಡೆದರು.

ಇವರು 2018ರಲ್ಲಿ ಪ್ರಮುಖ ಅಗ್ನಿಶಾಮಕ (ಹೆಡ್) ಆಗಿ ಬಡ್ತಿ ಹೊಂದಿದ್ದರು. ಅಗ್ನಿಶಾಮಕ ಹಾಗೂ ರಕ್ಷಣೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವ ಇವರು ಹಲವು ಸಾರ್ವಜನಿಕ ಜೀವ ಮತ್ತು ಆಸ್ತಿ ರಕ್ಷಿಸುವಲ್ಲಿ ಕ್ರಿಯಾಶೀಲರಾಗಿ ಕರ್ತವ್ಯ ನಿರ್ವಹಿಸಿದ ಹಿರಿಮೆ ಹೊಂದಿದ್ದಾರೆ. ಅಲ್ಲದೆ, ವಿವಿಧ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇದೀಗ ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ.

ಜೂ.20ಕ್ಕೆ ಬೆಂಗಳೂರು ಅರಮನೆ ಮೈದಾನದಲ್ಲಿ ವಿಶ್ವಕರ್ಮ ಮುಖಂಡರ ಸಮಾವೇಶ

- ಎಸ್‌ಎಸ್‌ಎಲ್‌ಸಿ, ಪಿಯುಸಿಯ ಪ್ರತಿಭಾನ್ವಿತ 1101 ಮಕ್ಕಳಿಗೆ ಪ್ರತಿಭಾ ಪುರಸ್ಕಾರ
- ಮೈಸೂರು ಭಾಗದ ನಾಯಕರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಮನವಿ



ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜದ ವತಿಯಿಂದ ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿರುವ ರಾಜ್ಯಮಟ್ಟದ ಮುಖಂಡರ ಸಮಾವೇಶದ ಕರಪತ್ರವನ್ನು ಬಿಡುಗಡೆ ಮಾಡಲಾಯಿತು. ಸಿಂಧಗಿ ಮೂರುಜಾವದೀಶ್ವರ ಮಠದ ಶ್ರೀ ರಾಮಚಂದ್ರ ಸ್ವಾಮೀಜಿ, ವಿಜಯಪುರ ವಿಶ್ವಕರ್ಮ ಮೂರುಜಾವದೀಶ್ವರ ಮಠದ ಶ್ರೀ ಮಹೇಂದ್ರ ಸ್ವಾಮೀಜಿ, ವಿಶ್ವಕರ್ಮ ಬ್ರಹ್ಮಾಂಡಬೇರಿ ಮಠದ ಪಂಪಾಮತಿ ಸ್ವಾಮೀಜಿ ಮತ್ತಿತರರಿದ್ದರು.

ಮೈಸೂರು, ಜೂ.17(ಎಂಕೆ)– ವಿಶ್ವಕರ್ಮ ಸಮಾಜದ ಮಠಾಧಿಪತಿಗಳು ಹಾಗೂ ಪೀಠಾಧಿಪತಿಗಳ ಸಾರಥ್ಯದಲ್ಲಿ ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜದ ವತಿಯಿಂದ ಜೂ.20 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿರುವ ರಾಜ್ಯಮಟ್ಟದ ಮುಖಂಡರ ಸಮಾವೇಶ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ತೇರ್ಗಡೆಯಾಗಿರುವ ಪ್ರತಿಭಾನ್ವಿತ 1101 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಮೈಸೂರು ಭಾಗದಲ್ಲಿರುವ ವಿಶ್ವಕರ್ಮ ಸಮಾಜದ ಎಲ್ಲಾ ಮುಖಂಡರು, ಬಂಧುಗಳು ಭಾಗವಹಿಸುವಂತೆ ವಿಶ್ವಕರ್ಮ ಮಠಾಧಿಪತಿಗಳು ಹಾಗೂ ಪೀಠಾಧಿಪತಿಗಳ ಅಭಿವೃದ್ಧಿ ಸಂಘದ ಅಧ್ಯಕ್ಷರೂ ಆದ ಸಿಂಧಗಿ ಮೂರುಜಾವದೀಶ್ವರ ಮಠದ ಶ್ರೀ ರಾಮಚಂದ್ರ ಸ್ವಾಮೀಜಿ ತಿಳಿಸಿದರು.

ಮೈಸೂರಿನ ಜಲದರ್ಶಿನಿಯಲ್ಲಿ ಸೋಮವಾರ ಸಂಜೆ ಸಮಾವೇಶದ ಕರಪತ್ರ ಬಿಡುಗಡೆಗೊಳಿಸಿ, ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಅರಮನೆ ಮೈದಾನದ ಗೇಟ್ ನಂ.3ರ ವೈಟ್ ಪೆಟಲ್ಸ್‌ನಲ್ಲಿ ಮಧ್ಯಾಹ್ನ 12 ಗಂಟೆಗೆ ಸಮಾವೇಶ ಆರಂಭವಾಗಲಿದ್ದು, ಸಿಎಂ, ಡಿಸಿಎಂ, ಗೃಹ ಸಚಿವರು, ಸಾರಿಗೆ ಸಚಿವರು ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ. ಸಮುದಾಯದ ಎಲ್ಲಾ ಬಂಧುಗಳು ಭಾಗವಹಿಸಬೇಕು ಎಂದು ಕರೆ ನೀಡಿದರು.

ಕರ್ನಾಟಕ ವಿಶ್ವಕರ್ಮ ಸಮಾಜದ ರಾಜ್ಯಾಧ್ಯಕ್ಷ ಮಳವಳ್ಳಿ ಶ್ರೀನಿವಾಸ್ ಮಾತನಾಡಿ, ವಿಶ್ವಕರ್ಮ ಸಮಾಜ ಕಳೆದ 25 ವರ್ಷದಿಂದ ಸಂಘಟನೆಯಾಗುತ್ತಿದ್ದು, ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜದಿಂದ ಆಯೋಜಿಸುತ್ತಿರುವ ಮೊದಲ ಸಮಾವೇಶ ಇದಾಗಿದೆ. ವಿಶ್ವಕರ್ಮ ಸಮಾಜ ಎದುರಿಸುತ್ತಿರುವ ಸಮಸ್ಯೆಗಳ ಬಗೆಗಹರಿಸುವ ಹಾಗೂ ಕೆಲ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲಾಗುವುದು ಎಂದರು.

ಮುಖ್ಯವಾಗಿ ವಿಶ್ವಕರ್ಮ ಸಮಾಜದ ಅಭಿವೃದ್ಧಿ ನಿಗಮಕ್ಕೆ ಸಮರ್ಪಕ ಅನುದಾನ ನೀಡುವ ನಿಟ್ಟಿನಲ್ಲಿ ಕನಿಷ್ಠ 100 ಕೋಟಿ ಮೀಸಲಿಡಬೇಕು. ನಾಡಿನ ಸಂಸ್ಕೃತಿಗೆ ಕೊಡುಗೆ ನೀಡಿರುವ ಹಾಗೂ ವಾಸ್ತುಶಿಲ್ಪದ ಮೂಲ ಪುರುಷರಾದ ಅಮರ ಶಿಲ್ಪಿ ಜಕಣಾ ಚಾರಿಯವರ ಪ್ರತಿಮೆಯನ್ನು ವಿಧಾನ ಸೌಧ ಹಾಗೂ ವಿಕಾಸ ಸೌಧದ ಮುಂದಿರುವ ಗಣ್ಯರ ಪ್ರತಿಮೆ ನಡುವೆ ಸ್ಥಾಪಿಸಬೇಕು. ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಐಎಎಸ್– ಕೆಎಎಸ್ ಕೋಚಿಂಗ್ ಸೆಂಟರ್ ಸ್ಥಾಪನೆ ಹಾಗೂ ಸನಾತನ ಧರ್ಮದ ತಳಹದಿಯಾಗಿರುವ ಶಿಲ್ಪಕಲೆಯನ್ನು ಕೆತ್ತುವ ಶಿಲ್ಪಿಯ ಹೆಸರನ್ನು ಕಡ್ಡಾಯವಾಗಿ ಶಿಲಾ ಶಾಸನದಲ್ಲಿ ಕೆತ್ತುವಂತೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಸಮಾವೇಶಕ್ಕೆ ರಾಜ್ಯದೆಲ್ಲೆಡೆಯಿಂದಲೂ ಸಮಾಜದ ಬಂಧುಗಳು ಆಗಮಿಸಲಿದ್ದಾರೆ. ಮೈಸೂರು ಭಾಗದಲ್ಲಿಯೂ ಸಮಾಜದ ಮುಖಂಡರ ಮನೆ ಮನೆಗೆ ಭೇಟಿ ನೀಡಿ ಆಹ್ವಾನಿಸಲಾಗುತ್ತಿದೆ. ಹಾಗೆಯೇ ಅಯೋಧ್ಯೆ ಬಾಲರಾಮ ವಿಗ್ರಹ ರೂಪಿಸಿದ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಸಹ ಸಮಾವೇಶಕ್ಕೆ ಆಹ್ವಾನಿಸಲಾಗುವುದು. ಒಟ್ಟಾರೆ 10–15 ಸಾವಿರ ಜನರು ಸೇರುವ ನಿರೀಕ್ಷೆ ಇದ್ದು, ವಿಶ್ವಕರ್ಮ ಸಮಾಜದ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವ ಕಾರ್ಯದಲ್ಲಿ ಭಾಗಿಯಾಗಬೇಕು ಎಂದು ಕೋರಿದರು.

ವಿಜಯಪುರ ವಿಶ್ವಕರ್ಮ ಮೂರುಜಾವದೀಶ್ವರ ಮಠದ ಶ್ರೀ ಮಹೇಂದ್ರ ಸ್ವಾಮೀಜಿ, ವಿಶ್ವಕರ್ಮ ಬ್ರಹ್ಮಾಂಡಬೇರಿ ಮಠದ ಪಂಪಾಮತಿ ಸ್ವಾಮೀಜಿ, ಕರ್ನಾಟಕ ವಿಶ್ವಕರ್ಮ ಸಮಾಜದ ಮಹಿಳಾ ಅಧ್ಯಕ್ಷೆ ವಸಂತಮುರಳಿ, ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ಕೆಪಿಸಿಸಿ ಹಿಂದುಳಿದ ವರ್ಗದ ರಾಜ್ಯ ಉಪಾಧ್ಯಕ್ಷ ಮೋಗಣ್ಣಚಾರ್, ಕರ್ನಾಟಕ ವಿಶ್ವಕರ್ಮ ಸಮಾಜದ ರಾಜ್ಯ ಕಾರ್ಯಾಧ್ಯಕ್ಷ ಗುರು ವಿಶ್ವಕರ್ಮ, ಅಮರಶಿಲ್ಪಿ ವೇದಿಕೆ ನಿಕಟಪೂರ್ವ ಅಧ್ಯಕ್ಷ ಗುಂಡೂರಾವ್ ನಾಗರಾಜ್, ಮೈಸೂರು ಜಿಲ್ಲಾ ಉಸ್ತುವಾರಿ ಗಾಯತ್ರಿ ಚಂದ್ರಶೇಖರ್, ಕರ್ನಾಟಕ ವಿಶ್ವಕರ್ಮ ಸಮಾಜದ ಮಹಿಳಾ ರಾಜ್ಯ ಉಪಾಧ್ಯಕ್ಷರಾದ ಗೋವಿಂದಮ್ಮ ಆಶಾ ಗುರೂಜಿ ಉಮೇಶ್ ಆಚಾರ್ಯ, ಮುಖಂಡರಾದ ರಂಗಪ್ಪ, ಗಿರೀಶ್ ಮತ್ತಿತರರಿದ್ದರು.


ಜು.1 ರಿಂದ ಹೊಸ ಕ್ರಿಮಿನಲ್ ಕಾನೂನುಗಳು ಜಾರಿ

ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್

ಕೋಲ್ಕತ್ತಾ, ಜೂ.17– ಜುಲೈ 1 ರಿಂದ ದೇಶದಲ್ಲಿ ಹೊಸ ಕ್ರಿಮಿನಲ್ ಕಾನೂನುಗಳು ಜಾರಿಗೆ ಬರಲಿವೆ. ಐಪಿಸಿ, ಇಂಡಿಯನ್ ಎವಿಡೆನ್ಸ್ ಆಕ್ಟ್, ಕ್ರಿಮಿನಲ್ ಪ್ರೊಸೀಜರ್ ಕೋಡ್ ಜಾಗದಲ್ಲಿ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಎಂಬ ಮೂರು ಮಾದರಿ ಕಾನೂನುಗಳು ಜಾರಿಗೆ ಬರಲಿವೆ ಎಂದು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವ ಅರ್ಜುನ್ ರಾವ್ ಮೇಘವಾಲ್ ತಿಳಿಸಿದ್ದಾರೆ.

ಕೋಲ್ಕತ್ತಾದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು. ಮುಂದುವರಿದು ಮೂರು ಹೊಸ ಕ್ರಿಮಿನಲ್ ಕಾನೂನುಗಳು ಜುಲೈ 1 ರಿಂದ ಜಾರಿಗೆ ಬರಲಿದ್ದು, ಅವುಗಳ ಅನುಷ್ಠಾನಕ್ಕೆ ಅಗತ್ಯ ತರಬೇತಿ ಈಗಾಗಲೇ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. 2023ರ ಡಿಸೆಂಬರ್‌ನಲ್ಲಿ ಈ ಮೂರು ಕಾನೂನುಗಳನ್ನು ಸಂಸತ್‌ನಲ್ಲಿ ಅಂಗೀಕರಿಸಲಾಗಿತ್ತು.

ಪೋಕ್ಸೋ ಪ್ರಕರಣದಲ್ಲಿ 3 ಗಂಟೆ ಕಾಲ ಮಾಜಿ ಸಿಎಂ ಯಡಿಯೂರಪ್ಪ ವಿಚಾರಣೆ



ಬೆಂಗಳೂರು,ಜೂ.17– ಅಪ್ರಾಪ್ತೆಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಸಿಐಡಿ ಅಧಿಕಾರಿಗಳ ಎದುರು ಸೋಮವಾರ ವಿಚಾರಣೆಗೆ ಹಾಜರಾದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ತಮ್ಮ ವಿರುದ್ಧದ ಆರೋಪವನ್ನು ಸಾರಾಸಗಟಾಗಿ ನಿರಾಕರಿಸಿದ್ದಾರೆ.

ಪ್ರಕರಣದ ತನಿಖಾಧಿಕಾರಿಯಾದ ಸಿಐಡಿ ಡಿವೈಎಸ್ಪಿ ಪುನೀತ್ ಅವರ ಎದುರು ಹಾಜರಾದ ಯಡಿಯೂರಪ್ಪ ಅವರನ್ನು, ಮೂರೂವರೆ ತಾಸಿಗೂ ಹೆಚ್ಚು ಕಾಲ ವಿಚಾರಣೆಗೆ ಒಳಪಡಿಸಲಾಯಿತು. ಸಿಐಡಿ ಎಸ್ಪಿ ಸಾರಾ ಫಾತಿಮಾ ಹಾಗೂ ಡಿವೈಎಸ್ಪಿ ಪುನೀತ್‌ರ ನೇತೃತ್ವದ ತಂಡ ಪ್ರಕರಣ ಸಂಬಂಧ ಪ್ರಶ್ನೆಗಳ ಸುರಿಮಳೆ ಸುರಿಸಿತು. ನನ್ನ ವಿರುದ್ಧ ಲೈಂಗಿಕ ದೌರ್ಜನ್ಯದ ದೂರು ದಾಖಲಿಸಿರುವ ಸಂತ್ರಸ್ತೆ ತಾಯಿ ಶಿವಮೊಗ್ಗ ಕ್ಷೇತ್ರದವರೇ. ಪರಿಚಯದವರು. ಸಹಾಯ ಕೇಳಿಕೊಂಡು ಮಗಳ ಜತೆ ಬಂದಾಗ ಮಗಳನ್ನು ಮಾತನಾಡಿಸಿದ್ದು ನಿಜ. ಆದರೆ, ಲೈಂಗಿಕ ದೌರ್ಜನ್ಯ ಎಸಗಿಲ್ಲ ಎಂದು ಯಡಿಯೂರಪ್ಪ ಹೇಳಿಕೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಸಿಐಡಿ ಅಧಿಕಾರಿಗಳು ಯಡಿಯೂರಪ್ಪರಿಗೆ ಹಲವಾರು ಪ್ರಶ್ನೆಗಳನ್ನು ಕೇಳಿ ಮಾಹಿತಿ ಸಂಗ್ರಹಿಸಿದ್ದಾರೆ. ಯಡಿಯೂರಪ್ಪರ ಹೇಳಿಕೆಯನ್ನು ವಿಡಿಯೋ ಚಿತ್ರೀಕರಣ ಮಾಡಲಾಗಿದೆ ಎಂದು ಹೇಳಲಾಗಿದ್ದು, ಕಾನೂನು ಪ್ರಕ್ರಿಯೆಯ ಕೆಲ ದಾಖಲೆ ಪತ್ರಗಳಿಗೆ ಸಹಿ ಹಾಕಿಸಿಕೊಂಡು ಮುಂದೆ ಅಗತ್ಯವಿದ್ದರೆ ಮತ್ತೊಮ್ಮೆ ವಿಚಾರಣೆಗೆ ಬರುವಂತೆ ಸೂಚನೆ ನೀಡಿ ಕಳುಹಿಸಿದ್ದಾರೆ.

17 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಯಡಿಯೂರಪ್ಪ ವಿರುದ್ಧ ಬೆಂಗಳೂರಿನ ಸದಾಶಿವನಗರ ಠಾಣೆಯಲ್ಲಿ ಮಾರ್ಚ್ 14ರಂದು ಪ್ರಕರಣ ದಾಖಲಾಗಿತ್ತು. ಬಳಿಕ ಈ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿತ್ತು. ನಂತರ ಸಿಐಡಿ ಅಧಿಕಾರಿಗಳು ಮಾರ್ಚ್‌ನಲ್ಲೇ ಯಡಿಯೂರಪ್ಪ ಅವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿದ್ದರು ಮತ್ತು ಅವರ ಧ್ವನಿ ಮಾದರಿ ಸಹ ಸಂಗ್ರಹಿಸಿದ್ದರು. ಸಿಐಡಿ ಅಧಿಕಾರಿಗಳು ಜೂನ್ 11ರಂದು ಯಡಿಯೂರಪ್ಪ ಅವರಿಗೆ ಎರಡನೇ ಬಾರಿಗೆ ನೋಟಿಸ್ ಜಾರಿ ಮಾಡಿ ಮರುದಿನವೇ ವಿಚಾರಣೆಗೆ ಬರುವಂತೆ ಸೂಚಿಸಿದ್ದರು. ಆದರೆ, ಪಕ್ಷದ ಪೂರ್ವ ನಿಗದಿತ ಕಾರ್ಯಕ್ರಮದ ನಿಮಿತ್ತ ಹೊಸದಿಲ್ಲಿಗೆ ಹೋಗಿದ್ದ ಯಡಿಯೂರಪ್ಪ ಅವರು ಜೂ.17ರಂದು ವಿಚಾರಣೆಗೆ ಬರುವುದಾಗಿ ಸಿಐಡಿ ಅಧಿಕಾರಿಗಳಿಗೆ ಪತ್ರ ಬರೆದಿದ್ದರು. ಈ ಮಧ್ಯೆ ನಗರದ ಒಂದನೇ ತ್ವರಿತ ನ್ಯಾಯಾಲಯವು ಯಡಿಯೂರಪ್ಪ ಬಂಧನಕ್ಕೆ ಜಾಮೀನು ರಹಿತ ವಾರಂಟ್ ಜಾರಿ ಮಾಡಿತ್ತು.

ಹೀಗಾಗಿ, ಯಡಿಯೂರಪ್ಪ ಅವರು ಬಂಧನ ಭೀತಿಯಲ್ಲಿ ನಿರೀಕ್ಷಣಾ ಜಾಮೀನು ನೀಡುವಂತೆ ಮತ್ತು ಪ್ರಕರಣದ ರದ್ದು ಕೋರಿ ಹೈಕೋರ್ಟ್‌ನ ಮೊರೆ ಹೋಗಿದ್ದರು. ಹೈಕೋರ್ಟ್, ಯಡಿಯೂರಪ್ಪ ಅವರನ್ನು ಬಂಧಿಸದಂತೆ ಸಿಐಡಿಗೆ ನಿರ್ದೇಶನ ನೀಡಿತ್ತು ಮತ್ತು ಅಧೀನ ನ್ಯಾಯಾಲಯ ಹೊರಡಿಸಿದ್ದ ಜಾಮೀನು ರಹಿತ ಬಂಧನದ ವಾರಂಟ್ ಅಮಾನತಿನಲ್ಲಿ ಇರಿಸಿತ್ತು. ಅಲ್ಲದೆ, ಜೂನ್ 17ರಂದು ಸಿಐಡಿ ಅಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗಿ ತನಿಖೆ ಸಹಕರಿಸುವಂತೆ ಯಡಿಯೂರಪ್ಪ ಅವರಿಗೆ ಆದೇಶಿಸಿತ್ತು.